ಝುಲ್ಮ್ ಕಾ ಬದ್ಲಾ ಕೋಡ್ ಹೆಸರಲ್ಲಿ ಬಲು ಅಪರೂಪವೆಂಬಂತೆ ಜೆಇಎಮ್ ಮತ್ತು ಎಲ್‌ಇಟಿ ಸೆಲ್‌ಗಳು ಜಂಟಿಯಾಗಿ ದಾಳಿಗೆ ಸಜ್ಜಾಗುತ್ತಿವೆ. ರಾವಲ್ಪಿಂಡಿಯ ಹ್ಯಾಂಡ್ಲರ್‌ಗಳ ಸಹಕಾರದೊಂದಿಗೆ ದಾಳಿ ನಡೆಯಲಿದ್ದು, ಜೈಶ್‌ನ ಮಸೂದ್ ಅಜರ್ ಮತ್ತು ಲಷ್ಕರ್ ಸಂಸ್ಥಾಪಕ ಹಫೀಜ್ ಸಯೀದ್‌ನ ಸಹಚರರು ಈ ದಾಳಿಯ ಪ್ರಮುಖ ಸೂತ್ರಧಾರರು ಎಂದು ಬೇಹುಗಾರಿಕಾ ಮೂಲಗಳು ತಿಳಿಸಿವೆ. ಸಾಂಸ್ಕೃತಿಕ ಮಹತ್ವವನ್ನು ಗಮನಿಸಿಕೊಂಡು ದಿಲ್ಲಿ ಮತ್ತು ಉತ್ತರಪ್ರದೇಶದ ದೇವಾಲಯಗಳನ್ನು ಐಇಡಿ ದಾಳಿಗೆ ಪಾತಕಿಗಳು ಟಾರ್ಗೆಟ್ ಮಾಡಿಕೊಂಡಿದ್ದಾರೆ. ಅಕ್ಷರಧಾಮ, ಕಾಶಿ ವಿಶ್ವನಾಥ ದೇವಾಲಯ ಜತೆ ಉಗ್ರರು ಪಟ್ಟಿ ಮಾಡಿರುವ ಇತರ ಕ್ಷೇತ್ರಗಳ ಯಾದಿಯಲ್ಲಿ ಅಯೋಧ್ಯೆಯ ಶ್ರೀರಾಮ ಮಂದಿರ ಕೂಡ ಒಳಗೊಂಡಿದೆ.

ಗಯಾನಾ ಉಪರಾಷ್ಟ್ರಪತಿ ಅಯೋಧ್ಯೆ ಭೇಟಿ




• **ಅಯೋಧ್ಯೆ:** ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಭಾಗವಹಿಸಲು ಆಗಮಿಸಿದ ಗಯಾನಾದ ಉಪರಾಷ್ಟ್ರಪತಿಗಳಾದ ಭರತ ಜಗದೇವ ತಮ್ಮ ದೇಶಕ್ಕೆ ತೆರಳುವ ಮೊದಲು ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ದರ್ಶನವನ್ನು ಪಡೆಯಲು ಶನಿವಾರ ಅಯೋಧ್ಯೆಯ ರಾಮ ಮಂದಿರಕ್ಕೆ ಭೇಟಿ ನೀಡಿ ರಾಮಲಲಾ ಹಾಗೂ ರಾಮ ಪರಿವಾರ ದರ್ಶನದ ನಂತರ ಜನ್ಮಭೂಮಿ ಆವರಣದಲ್ಲಿರುವ ಮಂದಿರಗಳ ದರ್ಶನದವನ್ನು ಪಡೆದರು. ರಾಮ ಜನ್ಮಭೂಮಿ ತೀರ್ಥ ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಚಂಪತ್ ರಾಯ ಅವರ ಜತೆ ಮಂದಿರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಚರ್ಚಿಸಿದರು.

ಭಾರತ ಕೃತಕ ಬುದ್ಧಿಮತ್ತೆ ಶೃಂಗಸಭೆಯಲ್ಲಿ ಕಾಂಗ್ರೆಸ್ ಪ್ರತಿಭಟನೆ

ಕೈ ನಡೆಗೆ ಪ್ರತಿಪಕ್ಷಗಳ ಆಕ್ಷೇಪ

• **ಹೊಸದಿಲ್ಲಿ:** ಭಾರತ ಕೃತಕ ಬುದ್ಧಿಮತ್ತೆ ಶೃಂಗಸಭೆ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರು ನಡೆಸಿದ ಶರ್ಟ್‌ರಹಿತ ಪ್ರತಿಭಟನೆ ದೇಶದ ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ಈ ಘಟನೆಗೆ ವಿರೋಧ ವ್ಯಕ್ತಪಡಿಸಿ, ಬಿಜೆಪಿ ಕಾರ್ಯಕರ್ತರು ಶನಿವಾರ ಹಲವಾರು ರಾಜ್ಯಗಳಲ್ಲಿ ಆಂದೋಲನ ನಡೆಸಿದರು. ಜಾಗತಿಕ ವೇದಿಕೆಯಲ್ಲಿ ಭಾರತದ ಕೀರ್ತಿಗೆ ಧಕ್ಕೆಯುಂಟಾಗಿದೆ ಎಂದು ಆಡಳಿತ ಪಕ್ಷ ಸೇರಿದಂತೆ ಕೆಲವು ಪ್ರತಿಪಕ್ಷಗಳೂ ಟೀಕಿಸಿವೆ.



ಮಹಾರಾಷ್ಟ್ರದ ಥಾಣೆಯಲ್ಲಿ ನ್ಯಾಯಾಲಯಕ್ಕೆ ವಿಚಾರಣೆಗೆ ತೆರಳುತ್ತಿದ್ದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ವಾಹನಕ್ಕೆ ಬಿಜೆಪಿ ಕಾರ್ಯಕರ್ತರು ಕಪ್ಪು ಧ್ವಜ ಪ್ರದರ್ಶಿಸಿದರು. ಇದೇ ವೇಳೆ ಭಾರತೀಯ ಜನತಾ ಯುವ ಮೋರ್ಚಾ ಕಾರ್ಯಕರ್ತರು ಜಮ್ಮು, ಜೈಪುರ್, ಪಟನಾ, ಬೆಂಗಳೂರು, ಪಂಚಕುಲಾ, ಇಂದೋರ್ ಸೇರಿದಂತೆ ಹಲವು ನಗರಗಳಲ್ಲಿ ಪ್ರತಿಭಟನೆ ನಡೆಸಿದರು.

ಬಿಜೆಪಿ ಆಕ್ರೋಶ: ಪ್ರತಿಭಟನೆ ಕುರಿತು ಬಿಜೆಪಿ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. "ಇದು ಕೇವಲ ನಕಾರಾತ್ಮಕ ರಾಜಕೀಯವಲ್ಲ, ರಾಷ್ಟ್ರದ್ರೋಹಕ್ಕೆ ಸಮಾನ," ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

ಈ ರೀತಿ ವರ್ತಿಸಬಾರದಿತ್ತು!

ಕಾಂಗ್ರೆಸ್‌ನ ಮಿತ್ರ ಪಕ್ಷ ಎಸ್‌ಪಿ ಮುಖ್ಯಸ್ಥ ಅಖಿಲೇಶ್‌ಯಾದವ್ ಅವರೂ ಪ್ರತಿಭಟನೆ ಬಗ್ಗೆ ಅಸಹನೆ ವ್ಯಕ್ತಪಡಿಸಿದ್ದಾರೆ. ಅಂಥ ವೇದಿಕೆಗಳಲ್ಲಿ ಈ ರೀತಿ ವರ್ತಿಸಬಾರದಿತ್ತು ಎಂದಿದ್ದಾರೆ. ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ, ಈ ಕೃತ್ಯ ತೀವ್ರ ಆಕ್ಷೇಪಾರ್ಹ ಮತ್ತು ಖಂಡನೀಯ ಎಂದು ಹೇಳಿದ್ದಾರೆ. ಹಾಗೆಯೇ, ಆರ್‌ಜೆಡಿ ನಾಯಕ ಮನೋಜ್ ಕುಮಾರ್ ಝಾ ಅವರು, ಕೆಲವು ತೊಂದರೆಗಳು ಇರುವುದು ಸಹಜ. ಆದರೆ, ಈ ರೀತಿ ಕಾಂಗ್ರೆಸ್ ವರ್ತಿಸಬಾರದಿತ್ತು ಎಂದಿದ್ದಾರೆ. ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ನಾಯಕ ವೈಎಸ್ ಜಗನ್ ಮೋಹನ್ ರೆಡ್ಡಿ, ಯಾರೂ ಭಾರತವನ್ನು ಅವಮಾನಿಸಬಾರದು ಎಂದು ಹೇಳಿದ್ದಾರೆ. ಟಿಆರ್‌ಎಸ್ ನಾಯಕ ಕೆ.ಟಿ. ರಾಮಾ ರಾವ್, ಜಾಗತಿಕ ವೇದಿಕೆಗಳಲ್ಲಿ ಇಂತಹ ಆಂದೋಲನಗಳು ದೇಶದ ಚಿತ್ರಣಕ್ಕೆ ಹಾನಿಕಾರಕ ಎಂದಿದ್ದಾರೆ.

ಸಮಾನ ಕೃತಕ ಬುದ್ಧಿಮತ್ತೆಗೆ 88 ದೇಶಗಳ ಸಂಪೂರ್ಣ ಬೆಂಬಲ

ಎಐ ದಿಲ್ಲಿ ಘೋಷಣೆ ಅಂಗೀಕಾರ

• **ಹೊಸದಿಲ್ಲಿ:** ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಜಾಗತಿಕ ಏಕಮನಸ್ಸಿನ ಮಹತ್ವದ ಬೆಳವಣಿಗೆಯಾಗಿ 88 ದೇಶಗಳು ಹಾಗೂ ಅಂತಾರಾಷ್ಟ್ರೀಯ ಸಂಸ್ಥೆಗಳು ಎಐ ಇಂಪ್ಯಾಕ್ಟ್ ಕುರಿತ ದಿಲ್ಲಿ ಘೋಷಣೆಯನ್ನು ಅಂಗೀಕರಿಸಿವೆ. ಎಐ ಪ್ರಯೋಜನಗಳು ಮಾನವಕುಲದಾದ್ಯಂತ ಸಮಾನವಾಗಿ ಹಂಚಿಕೆಯಾಗಬೇಕು ಎಂಬ ಬದ್ಧತೆಯನ್ನು ಘೋಷಣೆ ಒತ್ತಿಹೇಳಿದೆ.

ಎಐ ಇಂಪ್ಯಾಕ್ಟ್ ಸಮ್ಮೇಳನ 2026ರ ಸಮಾರೋಪದಲ್ಲಿ ಅಂಗೀಕರಿಸಲಾದ ಈ ಘೋಷಣೆ, ಸಹಕಾರಾತ್ಮಕ, ನಂಬಿಕೆಗೆ ಪಾತ್ರ, ಸ್ಥೈರ್ಯಶೀಲ ಮತ್ತು ಕಾರ್ಯಕ್ಷಮ ಎಐ ವ್ಯವಸ್ಥೆಗಳ ಅಭಿವೃದ್ಧಿಗೆ ಹಂಚಿಕೊಂಡ ದೃಷ್ಟಿಕೋನವನ್ನು ವಿವರಿಸುತ್ತದೆ. ಸಮಾನತೆ, ಪ್ರವೇಶ ಹಾಗೂ ಜಾಗತಿಕ ಸಹಕಾರ ಆಧಾರಿತ ಎಲ್ಲರಿಗೂ ಎಐ ಎಂಬ ಕರೆಯನ್ನು ಭಾರತ ಮುಂದಿಟ್ಟಿದೆ.

ಸರ್ವಜನ ಹಿತಾಯ, ಸರ್ವಜನ ಸುಖಾಯ ತತ್ತ್ವದಿಂದ ಪ್ರೇರಿತ ಘೋಷಣೆ, ಎಐಯ ಭರವಸೆ ಅದರ ಲಾಭಗಳು ಎಲ್ಲರಿಗೂ ತಲುಪಿದಾಗ ಮಾತ್ರ ಸಾಕಾರಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದೆ. ಅಂತಾರಾಷ್ಟ್ರೀಯ ಸಹಕಾರ ಬಲಪಡಿಸುವುದು, ಬಹುಪಕ್ಷೀಯ ಪಾಲ್ಗೊಳ್ಳುವಿಕೆ ಹೆಚ್ಚಿಸುವುದು ಹಾಗೂ ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಗೌರವ ನೀಡುವ ಅಗತ್ಯವನ್ನೂ ಉಲ್ಲೇಖಿಸಿದೆ.

ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಮಾತನಾಡಿ, 'ಮಾನವಕೇಂದ್ರಿತ ಎಐ ಕುರಿತ ಭಾರತದ ದೃಷ್ಟಿಯನ್ನು ವಿಶ್ವ ಒಪ್ಪಿಕೊಂಡಿದೆ. ಎಐ ಸಂಪನ್ಮೂಲಗಳ ಜನತಂತ್ರೀಕರಣದ ಮೂಲಕ ತಂತ್ರಜ್ಞಾನ ಸಮಾಜದ ಪ್ರತಿಯೊಬ್ಬರಿಗೂ ತಲುಪುವ ದಾರಿಗೆ ಬೆಂಬಲ ವ್ಯಕ್ತವಾಗಿದೆ,' ಎಂದರು.

ಅಮೆರಿಕ, ಚೀನಾದಂತಹ ದೇಶಗಳ ಒಪ್ಪಿಗೆ

ಏಳು ಅಂಶಗಳ ಆಧಾರ: ಘೋಷಣೆ ಏಳು ಪ್ರಮುಖ ಅಂಶಗಳ ಆಧಾರದ ಮೇಲೆ ರೂಪುಗೊಂಡಿದ್ದು, ಎಐ ಸಂಪನ್ಮೂಲಗಳ ಜನತಂತ್ರೀಕರಣ, ಆರ್ಥಿಕ ವೃದ್ಧಿ ಮತ್ತು ಸಾಮಾಜಿಕ ಹಿತ, ಸುರಕ್ಷಿತ ಮತ್ತು ನಂಬಿಕೆಗೆ ಪಾತ್ರ ಎಐ, ವಿಜ್ಞಾನ ಕ್ಷೇತ್ರದ ಬಳಕೆ, ಸಾಮಾಜಿಕ ಸಬಲೀಕರಣ, ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸ್ಥೈರ್ಯಶೀಲ-ನವೀನ ಎಐ ವ್ಯವಸ್ಥೆಗಳತ್ತ ಗಮನ ಹರಿಸಿದೆ.

ಅಧಿಕೃತ ಪ್ರಕಟಣೆಯ ಪ್ರಕಾರ, ಅಮೆರಿಕಾ, ಚೀನಾ, ಬ್ರಿಟನ್, ರಷ್ಯಾ, ಫ್ರಾನ್ಸ್, ಆಸ್ಟ್ರೇಲಿಯಾ ಸೇರಿದಂತೆ ಹಲವು ಅಭಿವೃದ್ಧಿ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳು ಘೋಷಣೆಗೆ ಬೆಂಬಲ ಸೂಚಿಸಿವೆ. ಒಟ್ಟು 118 ದೇಶಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದವು.

ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಮಾತಿಗೆ ಭೂಷಣ ಯಾವುದು?

ಉ: ಸತ್ಯ

ಮಾತಿಗೆ ಭೂಷಣವಾದುದು ಯಾವುದು ಎಂಬುದು ಪ್ರಶ್ನೆ. ಅದಕ್ಕೆ ಉತ್ತರ 'ಸತ್ಯ' ಎಂಬುದು. ಅಂದರೆ ಮಾತು ಮತ್ತು ಸತ್ಯ ಇವೆರಡೂ ಪರಸ್ಪರ ಅನ್ಯೋನ್ಯವಾದವುಗಳು ಎಂಬುದು ಇದರ ತಾತ್ಪರ್ಯವಷ್ಟೇ. ಮಾತು ಯಾವಾಗ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬಲ್ಲುದು? ಅಥವಾ ಮಾತು ಯಾವಾಗ ಪರಿಪೂರ್ಣವಾಗಬಲ್ಲುದು? ಎಂದರೆ ಆ ಮಾತಿನಲ್ಲಿ ಸತ್ಯ ಹುದುಗಿದಾಗ, ಎಂಬುದು ಇದರ ಹಿಂದಿರುವ ಆಶಯವಷ್ಟೇ. ಮಾತಿನಲ್ಲಿ ಸತ್ಯವಿಲ್ಲದಿದ್ದರೆ ಅದು ಪೂರ್ಣವಾಗಲಾರದು. ಅದಕ್ಕಾಗಿ ಸತ್ಯವನ್ನು ಮಾತಿಗೆ ಭೂಷಣ ಎಂಬುದಾಗಿ ಹೇಳಲಾಗಿದೆ. 'ಭೂಷಣ' ಎಂದರೆ ಅಲಂಕಾರ ಎಂದರ್ಥ. ಅಂದರೆ ಸತ್ಯದಿಂದ ಮಾತ್ರವೇ ಮಾತು ಅಲಂಕೃತವಾಗುತ್ತದೆ. ಮಾತು ಆಡುವವರನ್ನು ಅಲಂಕರಿಸುತ್ತದೆ. ಅವರನ್ನು ಮಾನ್ಯರನ್ನಾಗಿ ಮಾಡುತ್ತದೆ ಎಂಬುದಷ್ಟೇ ಇಲ್ಲಿನ ವಿಚಾರ.

ಮಾತು ಹೇಗಿರಬೇಕು? ಮಾತಿನ ಮೌಲ್ಯವೇನು? ಇತ್ಯಾದಿ ವಿಷಯದ ಬಗ್ಗೆ ವೇದದಿಂದ ಹಿಡಿದು ಎಲ್ಲ ಸಾಹಿತ್ಯಗಳಲ್ಲೂ ವಿಪುಲವಾಗಿ ಹೇಳಿದ್ದನ್ನು ನಾವು ಕಾಣಬಹುದು. ಅಂತೆಯೇ ಮಾತಿಗೂ ಮಿಗಿಲಾಗಿ ಸತ್ಯವನ್ನು ಇನ್ನಷ್ಟು ವಿವರವಾಗಿ ಹೇಳಿದ್ದನ್ನು ಕಾಣಬಹುದು. ಹಾಗಾಗಿ ಮಾತು ಮತ್ತು ಸತ್ಯ ಎರಡು ಒಂದಕ್ಕೊಂದು ಎಡಬಿಡದೆ ಸೇರಿರುವ ಎರಡು ಸಂಗತಿಗಳು ಎಂಬುದನ್ನು ಹೇಳಬಹುದು. ಮಾತಿನಲ್ಲಿ ಸತ್ಯ ಎಂಬುದು ಅತ್ಯಂತ ಅನಿವಾರ್ಯ. ಉಪನಿಷತ್ತು ಈ ಮಾತನ್ನು ಸಾರುತ್ತದೆ – 'ಸತ್ಯಂ ವದ' ಎಂಬುದಾಗಿ. ಸತ್ಯವನ್ನು ಮಾತನಾಡಬೇಕು. ಸತ್ಯವನ್ನೇ ಮಾತನಾಡಬೇಕು. ಸತ್ಯವನ್ನು ಬಿಟ್ಟು ಬೇರೆಯಾವುದೂ ಕೂಡ ಮಾತಿನಲ್ಲಿ ಇರಬಾರದು. ಅಸತ್ಯದ ಮಟ್ಟಿಗೆ ಮಾತು ಸತ್ಯವನ್ನು ಆವರಿಸಿಕೊಂಡು ಇರಬೇಕು. ಮಾತಾಡಿದರೆ ಅದು ಸತ್ಯವೇ ಆಗಿರಬೇಕು. ಸತ್ಯವಲ್ಲದ ಮಾತನ್ನು ಆಡಬಾರದು ಎಂಬುದು ಇದರ ಅರ್ಥ. ರಘುವಂಶದ ರಾಜರು ಸತ್ಯವನ್ನು ಯಾವ ರೀತಿಯಾಗಿ ಆಚರಿಸುತ್ತಿದ್ದರು ಎಂಬುದನ್ನು ಕಾಳಿದಾಸ ಹೀಗೆ ಹೇಳುತ್ತಾನೆ – 'ಸತ್ಯಾಯ ಮಿತಭಾಷಿಣಾಮ್' ಎಂಬುದಾಗಿ. ಅಂದರೆ ಅವರ ಮಾತುಗಳಲ್ಲಿ ಮಿತಿ ಇರುತ್ತಿತ್ತು. ಅದಕ್ಕೆ ಕಾರಣ ಆ ಮಾತು ಸತ್ಯದಿಂದ ಕೂಡಿತ್ತು. ಯಾವ ಮಾತು ಸತ್ಯದಿಂದ ಕೂಡಿರುತ್ತದೆಯೋ, ಆ ಮಾತು ಹಿತವೂ ಮಿತವೂ ಆಗಿಯೇ ಇರಬೇಕು. ಅಂತಹ ಸತ್ಯದ ನಡೆಯನ್ನು ಆ ರಾಜರ ನಡೆಯಲ್ಲಿ ಕಾಣಬಹುದಾಗಿತ್ತು. ಸತ್ಯ ಎಂದರೆ ಇದ್ದದ್ದನ್ನು ಇದ್ದಂತೆಯೇ ಹೇಳುವುದು, 'ಯಥಾರ್ಥವಚನ' ಎಂಬುದಾಗಿ. ಸತ್ಯವನ್ನು ಹೇಳುವುದರಿಂದ ಯಾವೆಲ್ಲ ಲಾಭಗಳು ಆಗುತ್ತವೆ ಎಂಬುದನ್ನು ವೇದ, ಪುರಾಣ, ಇತಿಹಾಸ ಮೊದಲಾದ ಎಲ್ಲಾ ಗ್ರಂಥಗಳೂ ಸಾರುತ್ತವೆ. ಯೋಗಶಾಸ್ತ್ರವು ಹೀಗೆ ಹೇಳುತ್ತದೆ ''ಯಾರು ಸತ್ಯವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾರೋ, ಅವರು ಹಾಡಿದ ಮಾತುಗಳು ಯಥಾರ್ಥವಾಗುತ್ತವೆ'' ಎಂಬುದಾಗಿ. 'ಸತ್ಯಪ್ರತಿಷ್ಠಾಯಾಂ ಕ್ರಿಯಾಫಲಾಶ್ರಯತ್ವಮ್' ಅಂದರೆ ಮಾಡಿದ ಕ್ರಿಯೆಗೆ ಫಲ ದೊರಕಿಸುವ ಸಾಮರ್ಥ್ಯ ಸತ್ಯವಚನಕ್ಕೆ ಇದೆ ಎಂಬಷ್ಟರ ಮಟ್ಟಿಗೆ ಸತ್ಯದ ಸಾಮರ್ಥ್ಯವನ್ನು ಇಲ್ಲಿ ಕೊಂಡಾಡಲಾಗಿದೆ. ಹಾಗಾಗಿ ಸತ್ಯವಿದ್ದರೆ ಮಾತ್ರ ಅದು ಮಾತಾಗುತ್ತದೆ. ಸತ್ಯವಿಲ್ಲದಿದ್ದರೆ ಅದು ಕೇವಲ ಶಬ್ದಾಡಂಬರವಾಗುತ್ತದೆ. ಸತ್ಯವೆಂದರೆ ಭಗವಂತ. ಅವನನ್ನು ಹೊತ್ತ ಮಾತು ಸತ್ಯವೇ ಆಗಿರುತ್ತದೆ. ಯಾವುದೇ ಮಾತನ್ನು ಆಡಬೇಕಾದರೂ ಆ ಮಾತು ಭಗವಂತನ ಅಥವಾ ಅವನ ಸೃಷ್ಟಿಯ ನಡೆಗೆ ವಿರೋಧವಾಗದಂತೆ ಇರಬಾರದು. ಅಂತಹ ಸತ್ಯ ಮಾತಿಗೆ ಭೂಷಣ ಎಂಬುದು ಈ ಪ್ರಶ್ನೋತ್ತರದ ಆಶಯವಾಗಿದೆ.

ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಜರಾಸಂಧನನ್ನು ವಧಿಸಲು ಏಕಾಂತವೇ ಯುಕ್ತ

ಶ್ರೀಕೃಷ್ಣನು ಜರಾಸಂಧನನ್ನು ವಧಿಸಲು ಬೇಕಾದ ಹಿನ್ನೆಲೆಯನ್ನು ಯುಧಿಷ್ಠಿರನಿಗೆ ತಿಳಿಸಿಕೊಡುತ್ತಿದ್ದಾನೆ. ಜರಾಸಂಧನು ತನ್ನ ಮಹಾನಡೆಯನ್ನು ಮಥುರೆಯತ್ತ ಪ್ರಬಲವಾಗಿ ಬೀಸಿದ ಬಳಿಕ ಆದುದನ್ನು ತಿಳಿಸುತ್ತಾನೆ. ಆಗ ಬಲಶಾಲಿಗಳಾದ ಕುಕ್ಕುರ–ಅಂಧಕ–ವೃಷ್ಣಿ ಈ ವಂಶಗಳ ವೀರರೂ ಇದ್ದರು. ಆದರೂ ರಾಜನೀತಿಯ ಲೆಕ್ಕದ ಮೇರೆಗೆ ಅವರು ಜರಾಸಂಧನನ್ನು ಉಪೇಕ್ಷಿಸಿದರು. ಹಾಗೆಂದರೆ, ಆ ಕಾರಣಕ್ಕಾಗಿ ಆತನ ಮೇಲೆ ಸಮರ ಮಾಡಲು ಹೋಗಲಿಲ್ಲ ಎಂದರ್ಥ.

ಒಟ್ಟಾರೆ ಹೇಳುವುದಾದರೆ, ಹಂಸ–ಡಿಂಭಕರು ಮುಖ್ಯರಿಗೆ ಸತ್ತರು. ಕಂಸನೂ ಪರಿವಾರ ಸಮೇತನಾಗಿ ಹತನಾದನು. ಇನ್ನೀಗ ಜರಾಸಂಧನ ಸಾವಿನ ಸಮಯವೊದಗಿದೆ. ಸುರರಾಗಲಿ ಅಸುರರಾಗಲಿ, ಈ ಜರಾಸಂಧನನ್ನು ಯುದ್ಧದಲ್ಲಿ ಜಯಿಸಲಾರರು. ಈತನನ್ನು ಬಾಹು ಯುದ್ಧದಿಂದಲೇ ಸೋಲಿಸಬೇಕೆಂಬುದೇ ತೋರುತ್ತದೆ.

ಯುಧಿಷ್ಠಿರಾ, ನನ್ನಲ್ಲಿ ರಾಜನೀತಿಯ ಜ್ಞಾನವು ಚೆನ್ನಾಗಿದೆ; ಭೀಮನಲ್ಲಿ ಬಲವಿದೆ; ನಮ್ಮಿಬ್ಬರನ್ನೂ ಜಯನು, ಎಂದರೆ ಅರ್ಜುನನು ರಕ್ಷಿಸುವವನಾಗಿದ್ದಾನೆ. ನಾವು ಮೂವರು ಹೆಗಲಿಗೆ, ಯಜ್ಞ ಸಾಧನೆಯಲ್ಲಿ ಮೂರು ಅಗ್ನಿಗಳು, ಎಂದರೆ ದಾಕ್ಷಿಣಾತ್ಯ–ಗಾರ್ಹಪತ್ಯ–ಆಹವನೀಯಗಳೆಂಬ ಹಸರಿನವು. ಹೇಗೆ ಭಾಗಿಗಳೋ ಹಾಗೆಯೇ. ನಾವು ಮೂವರೂ ಸೇರಿ ಈ ಮಾಗಧನನ್ನು, ಎಂದರೆ ಜರಾಸಂಧನನ್ನು ಸಾಧಿಸುವುದಾಗಬೇಕಾಗಿದೆ ಎಂದರೆ ವಧಿಸಬೇಕಾಗಿದೆ.

ನಾವು ಮೂವರು ಆತನನ್ನು ನಿರ್ಜನ ಪ್ರದೇಶದಲ್ಲಿ, ಎಂದರೆ ರಹಸ್ಯವಾಗಿ ಎದುರಿಸುವುದೇ ಯುಕ್ತ. ಏಕೆ ಗೊತ್ತೇ? ಹಾಗೆ ಮಾಡಿದಲ್ಲಿ, ಆತನು ಒಬ್ಬರೊಂದಿಗಾದರೂ ಯುದ್ಧಕ್ಕೆ ಬಂದೇ ಬರುವನು. ಇದರಲ್ಲಿ ಸಂಶಯವಿಲ್ಲ. ಅಷ್ಟೇ ಅಲ್ಲ, ಅವಮಾನವನ್ನುವ ಕಾರಣದಿಂದಲೂ, ಲೋಭ ನಿಮಿತ್ತವಾಗಿಯೂ, ಸ್ವಬಾಹು–ವೀರ್ಯ–ದರ್ಪದಿಂದಲೂ, ಆತನು ಭೀಮಸೇನನೊಂದಿಗೇ ಯುದ್ಧಕ್ಕೆ ಬರುವನು. ಭೀಮಸೇನನು ಮಹಾಬಾಹು ಹಾಗೂ ಮಹಾಬಲ. ಹಾಗಿರುವುದರಿಂದಲೇ, ಸೊಕ್ಕಿದ ಲೋಕದ ವಿನಾಶಕ್ಕೆ ಹೇಗೆ ಯಮರಾಜನೇ ತಕ್ಕವನೋ, ಹಾಗೆಯೇ ಭೀಮಸೇನನೇ ಇಲ್ಲಿ ತಕ್ಕವನು. ನನ್ನ ಹೃದಯವನ್ನು ನೀನು ಅರಿಯಬೇಕಾದರೆ ಹಾಗೂ ನನ್ನ ಮೇಲೆ ನಂಬಿಕೆಯುಳ್ಳವನಾದರೆ ಯುಧಿಷ್ಠಿರಾ, ನೀನು ಒಡನೆಯೇ ಭೀಮಸೇನ–ಅರ್ಜುನರನ್ನು ನನಗೆ ನ್ಯಾಸ ರೂಪವಾಗಿ ಕೊಡು. (ನ್ಯಾಸವಾಗಿ ಕೊಡುವುದೆಂದರೆ, ಕೊಟ್ಟದ್ದನ್ನು ಆಮೇಲೆ ಯಥಾವತ್ತಾಗಿ ಹಿಂದಿರುಗಿಸುವುದು ಇದ್ದೇ ಇದೆ ಎಂಬ ಭಾವ).

ಹೀಗೆಂಬುದಾಗಿ ಕೃಷ್ಣನು ಹೇಳಲಾಗಿ, ಯುಧಿಷ್ಠಿರನು ಭೀಮ–ಅರ್ಜುನರತ್ತ ತನ್ನ ದೃಷ್ಟಿಯನ್ನು ಹಾಯಿಸಿದನು. ಅವರೀರೂ ಸಂಪ್ರಹೃಷ್ಟರಾಗಿದ್ದರು. ಎಂದರೆ ಬಹು ಹರ್ಷದಿಂದ ಅರಳಿದ ಮುಖವುಳ್ಳವರಾಗಿದ್ದರು.

ಆಗ ಯುಧಿಷ್ಠಿರನು ಹೇಳಿದನು:

ಅಚ್ಯುತ, ಅಚ್ಯುತ, ಬೇಡ, ಹೀಗೆ ಹೇಳಬೇಡ! ಶತ್ರು ಸಂಹಾರಕನಾದವನು ನೀನು. ಪಾಂಡವರಿಗೆ ನೀನೇ ಒಡೆಯ! ನಿನ್ನನ್ನು ಆಶ್ರಯಿಸಿರತಕ್ಕವರು ನಾವು.

ಮಗುವನ್ನು ಮಲಗಿಸುವುದೆಂದರೆ...

ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

''ನಿದ್ದೆ ಬಂದಿದೆ ಮಗೂಗೆ'' ಘೋಷಿಸಿದಳು ಮಡದಿ. ಸಾಮಾನ್ಯ ಜನರಿಗೆ ನಿದ್ರೆ ಯಾವಾಗ ಬರುತ್ತದೆಂದು ತಿಳಿಯುವುದಿಲ್ಲ, ಅತ್ಯಂತ ನಿಶ್ಶಬ್ದದ ಹೆಜ್ಜೆಗಳನ್ನಿರಿಸುತ್ತಾ ಬರುವ ನಿದ್ರಾಂಗನೆಯು ತನುವನ್ನು ಆಲಿಂಗಿಸುವುದು ತಿಳಿಯುವುದೇ ಇಲ್ಲ, ಆದರೆ ಮಕ್ಕಳಿಗೆ ನಿದ್ರೆಯು ಸದ್ದು ಮಾಡುತ್ತಲೇ ಆಗಮಿಸುವುದು. ಮಂದ್ರದಿಂದಆರಂಭವಾಗುವ 'ಉವ್ವೇ...' ತಾರಕಕ್ಕೇರಿ ಅಲ್ಲಿಯೇ ಒಂದಷ್ಟು ವಿಹರಿಸಿ, ಅನಂತರ ಕಟಕ್ ಕಿಟಕ್ ಕಿಟಕ್ ಕಟಕ್ ಎಂಬ ಸ್ವರಚ್ಛಿದ್ರದಲ್ಲಿ ಮುಂದುವರೆದು, ಒಂದಿಷ್ಟು ಕಣ್ಣೀರಿನಲ್ಲಿ ನೆನೆದರೆ, ಮಗುವಿಗೆ ನಿದ್ರೆ ಇನ್ನೇನು ಬಂದಿತು ಎಂದರ್ಥ.


''ಓಡಾಡಿಸಿದರೆ ಮಲಗುತ್ತಾನೆ'' ಎಂದಳು ಮಗಳು. ಮಗುವನ್ನು ಭುಜಕ್ಕಾನಿಸಿಕೊಂಡು ಗಡಿಪ್ರದೇಶದ ಪಹರೆಯವರು ಅತ್ತಿಂದಿತ್ತ, ಇತ್ತಿಂದತ್ತ ಠಳಾಯಿಸುವಂತೆ ನಡೆಯತೊಡಗಿದೆ. ಮೊದಲಿಗೆ ಮೊಬೈಲನ್ನು ಕಚ್ಚಿಹಿಡಿದ ಬ್ಯಾಕ್ ಕವರ್‌ನಂತೆ ನನ್ನನ್ನು ಅತುಕೊಂಡಿದ್ದ ಮಗುವು ಕ್ರಮೇಣ ಕಟ್ಟಡಗಳ ತುದಿಯಿಂದ ಬಾಲ್ಕನಿಗಳು ಹೊರಚಾಚುವಂತೆ ನನ್ನ ಭುಜದ ಪಾರ್ಶ್ವದಿಂದ ಹೊರಕ್ಕೆ ತಲೆಯನ್ನು ಚಾಚಿ ವಾಲಿತು. ಮಗುವಿನ ಬುಡವನ್ನು ಭದ್ರವಾಗಿ ಹಿಡಿದೆ. ಮಗುವು ತನ್ನ ವಾಲುಕೋನವನ್ನು ಹೆಚ್ಚಿಸಿ ಪಿಸಾದ ಲೀನಿಂಗ್ ಟವರ್‌ನಂತೆ ವಾಲಿತು. ಪಿಸಾದ ಸರ್ಕಾರದವರು 'ಕೋರ್ಸ್ ಕರೆಕ್ಷನ್' ಮಾಡಲೆಂದು ಆಗಾಗ್ಗೆ ವಾಲುವಿಕೆಯನ್ನು ನಿಯಂತ್ರಿಸುವಂತೆಯೇ ನಾನೂ ಭುಜವನ್ನು ತಗ್ಗಿಸಿ, ಮಗುವನ್ನು ನನ್ನ ತನುವಿನತ್ತ ಕೊಂಚ ಎಳೆದುಕೊಂಡು, 'ಭುಜಾ ಪೊಸಿಷನ್'ಗೆ ತಂದಿರಿಸಿದೆ.

ವಾಲು–ನೇರಗಳ ಆಟದಲ್ಲಿ ಸಂತೋಷದಿಂದ ಪಾಲ್ಗೊಂಡಿದ್ದ ಮಗುವಿಗೆ ಆ ಆಟವು ಸಾಕೆನಿಸಿ ಭಿಟ್ಟನೆ ಚೀರಿತು. ಆಗಷ್ಟೇ ತಮ್ಮ ಅಂದಿನ ಆಗುಹೋಗುಗಳನ್ನು ಚಿಲಿಪಿಲಿಯ ಮೂಲಕ ವಿನಿಮಯ ಮಾಡಿಕೊಂಡು ಪರಸ್ಪರ ಗುಡ್ ನೈಟ್ ಹೇಳಿದ್ದ ಪಕ್ಷಿಗಳು ಈ ಛಿಟಾರಿಗೆ ಬೆಚ್ಚಿ ಎದ್ದು ತಮ್ಮದೇ ಭಾಷೆಯಲ್ಲಿ ಮಗುವನ್ನೂ, ನನ್ನನ್ನೂ ಆಶೀರ್ವದಿಸಿ ಮುಲುಗಿ ಮಲಗಿದವು. ''ಪೊಸಿಷನ್ ಚೇಂಜ್ ಆದರೆ ಡೈವರ್ಟ್ ಆಗುತ್ತಾನೆ'' ಎಂದು ಮಗಳು ನುಡಿದ ಕಾರಣ ನೆಲಕ್ಕೆ ಲಂಬಕೋನದಲ್ಲಿ ಎತ್ತಿಕೊಂಡಿದ್ದ ಮಗುವನ್ನು ನೆಲಕ್ಕೆ ಸಮಾನಾಂತರ ರೇಖೆಯಲ್ಲಿ ಎತ್ತಿಕೊಂಡೆ. ಮಗುವು ನನ್ನತ್ತ ನೋಡಿತು, ನಕ್ಕಿತು. ಆ ನಗೆಯು ''ಮುಂದಕ್ಕೈತೆ ಮಾರಿಹಬ್ಬ'' ಎನ್ನುವುದರ ಸೂಚನೆಯೆಂದು ನನಗೆ ಆಗ ಹೊಳೆಯಲಿಲ್ಲ.

ನನ್ನ ಠಳಾಯಿಸುವಿಕೆಯು ಅಂದಿನ ವಾಕಿಂಗ್ ಕೋಟಾ ಆದ ಟೆನ್ ಥೌಸೆಂಡ್ ಸ್ಟೆಪ್ಸ್ ಅನ್ನು ಸಮೀಪಿಸುತ್ತಿತ್ತು. ನನ್ನ ಮೊದಮೊದಲ ಸ್ಟೆಪ್ಪುಗಳ ಸಮಯದಲ್ಲಿ ನಿದ್ರೆಯ ಸೂಚನೆಯಾಗಿ ಸಣ್ಣ ಕಣ್ಣಾಗಿದ್ದ ಮಗುವು ಈಗ ಬೊಗಸೆಗಾತ್ರಕ್ಕೆ ಕಣ್ಣುಗಳನ್ನು ಹಿಗ್ಗಿಸಿತ್ತು. ಮೊದಮೊದಲು ಸಣ್ಣ ಗೊರಕೆಯ ಸದ್ದನ್ನು ಹೊರಡಿಸುತ್ತಿದ್ದ ಅದು ಈಗ ದೊಡ್ಡ ದೊಡ್ಡ ಕೇಕೆಗಳನ್ನು ಹಾಕುತ್ತಾ ತನ್ನ ಶಬ್ದಗಾರುಡಿಯ ಅಮೋಘ ಪ್ರದರ್ಶನವನ್ನು ತೋರುತ್ತಿತ್ತು.

''ಮನೆಯೊಳಗೆ ಇದ್ದರೆ ನಿದ್ರೆ ಮಾಡಲ್ಲ. ಹೊರಗೆ ಕರೆದುಕೊಂಡು ಹೋಗಿ'' ಎಂದಳು ಮಡದಿ. ಆಗಲಗಣ್ಣನ, ಕೇಕೆಕಂಠದ ಕಂದನೊಡನೆ ಮನೆಯ ಅಂಗಳಕ್ಕಿಳಿದೆ. ಅದೇ ಸಮಯವು ತನ್ನ ಸೈಲೆನ್ಸರ್ ರಹಿತ ಮೋಟರ್ ಬೈಕನ್ನು ಆ ರಸ್ತೆಯಲ್ಲಿ ಓಡಿಸಲು ಸುಮುಹೂರ್ತವೆಂದು ಭಾವಿಸಿದ ಪಡ್ಡೆಯೊಬ್ಬನು ತನ್ನ ವಾಹನವನ್ನು ನಮ್ಮ ಮನೆಯ ಮುಂದೆ ರೊಯ್ರೊಯ್ರೊಯ್ಯಿಸಿದ. 'ಎನಗಿಂತ ಸದ್ದಿಗರುಂಟೆ ಜಗದೊಳ್!' ಎಂಬ ಭಾವವನ್ನು ಹೊಂದಿದ ಮಗುವು ಕಿಟ್ ಕಿಟ್ ಕಿಟಾರ್ ಎಂದರಚಿ ಬೈಕಿನ ಸದ್ದು ಸದ್ದೇ ಅಲ್ಲವೆನ್ನಿಸಿತು. ಹೀಗೆ ಕಿಟಾರ್ ಎನ್ನುವುದರಿಂದ ಮಗುವನ್ನು 'ಕಿಟಾರ್ ವಾದಕ' ಎನ್ನಬಹುದೇ ಎಂದು ಯೋಚಿಸುತ್ತಲೇ ಅಂಗಳದ ವಾಕ್‌ಗೆ ಮಂಗಳ ಹಾಡಿ ಒಳಸರಿದೆ.

ಮಗುವನ್ನು ನಾವು ಕಂದ ಎಂದು ಕರೆದರೂ ಅದರ ಪದ್ಯಪ್ರಕಾರ ರಗಳೆಯೇ. ನಗುತ್ತಿರುವಾಗ ಮಂದಾನಿಲದಂತೆಯೂ, ನಿದ್ರಿಸುವಾಗ ಸರಳವಾಗಿಯೂ ಕಾಣುವ ಮಗುವಿನದು ಕೇಕೆ ಹಾಕುವ ಸಮಯದಲ್ಲಿ ಉತ್ಸಾಹ ರಗಳೆ. ಸರಳಕ್ಕೂ, ಮಂದಾನಿಲಕ್ಕೂ ಮಧ್ಯದ ಸಮಯದಲ್ಲಿ ಮಂದಾಕ್ರಾಂತ ವೃತ್ತದಲ್ಲಿ ಆಕ್ರಂದನಗೈವ ಮಗುವು ಹಠಹಿಡಿದು ಕುಳಿತರೆ ಯಾವ ಶಾರ್ದೂಲ ವಿಕ್ರೀಡಿತಕ್ಕೂ ಕಡಿಮೆಯಿರುವುದಿಲ್ಲ. ಭಾಮಿನಿಯ ಸಾಂಗತ್ಯದಲ್ಲಿ ಪಿರಿಯಕ್ಕರ ತೋರಿದರೂ, ಶಿಶುವು 'ಹಠಯೋಗ'ದಲ್ಲಿರುವಾಗ ಅವನಿಂದ ಕಿರಿಯಕ್ಕರ ಪಡೆಯುವುದೂ ಕಷ್ಟವೇ. ನಮ್ಮ ಶಿಶುವು ಅಂಗಳವನ್ನು ತೊರೆದ ಆ ಸಮಯದಲ್ಲಿ ಹಠಯೋಗದಲ್ಲಿಯೇ ಇದ್ದು, ನನ್ನೆರಡು ತೋಳುಗಳೆಂಬ ಹಾಸಿಗೆಯ ಮೇಲಿನಿಂದ ತನ್ನ ತನುವಿನ ಮಧ್ಯಭಾಗವನ್ನು ಬಿಲ್ಲಿನಂತೆ ಬಾಗಿಸಿ ಮೇಲೇರಿಸಿ, ತಲೆಯನ್ನು ಮೊಣಕೈಯಿಂದ ವಿಶಾಲಕೋಣದಲ್ಲಿ ಹೊರಚಾಚಿ 'ಅರ್ಧವೃತ್ತವಿಶಾಲಕೋನಾಸನ'ವೆಂಬ ಹೊಸ ಭಂಗಿಯನ್ನೇ ವಿಶ್ವಕ್ಕೆ ಅರ್ಪಿಸಿದ್ದನು ಹಾಗೂ ಹಾಗೆ ಅರ್ಪಿಸಿದ ಸಂತೋಷವನ್ನು ಜಗಕ್ಕೆ ಅರುಹಲೆಂದೋ ಎಂಬಂತೆ ಕಿಟ್ಟಕಿಟಾರನೆ ಗೋಳಿಟ್ಟನು.



''ನಿಮಕ್ಕೆ ಲಾಗಲ್ಲ ಕೊಡಿಇಲ್ಲಿ'' ಎಂದಳು ಶಿಶುಭಾಷಾಪ್ರವೀಣೆ. ಯಾವುದೇ ಹುಡುಗನು ಹೊಸ ವಾಹನವನ್ನು ಮೆಚ್ಚಿಕೊಳ್ಳುವಂತೆಯೇ ಮಗುವೂ ತನ್ನ ಹೊಸ ವಾಹನದಲ್ಲಿನ ಪ್ರಯಾಣವನ್ನು ಸುಖಕರವೆಂದು ಪರಿಗಣಿಸಿತೆಂದು ಅದರ ನಗೆಮೊಗವು ಸೂಚಿಸುತ್ತಿತ್ತು. ಕಿಟಾರ್ ವಾದನವು ಮುಗಿದು ನಗೆಮಲ್ಲಿಗೆಯು ಅರಳಿದುದಕ್ಕೆ ತನ್ನ ಶಿಶುಗ್ರಹಣಕೌಶಲವೇ ಕಾರಣವೆಂದು ಕಣ್ಣಿನಿಂದಲೇ ಸೂಚಿಸುತ್ತಾ ಪಹರೆನಡೆಯನ್ನು ಕೈಗೊಂಡಳವಳು. 'ನಿದ್ದೆ ಬಂದಿದೆ ಮಗೂಗೆ' ಎನ್ನಿಸಿಕೊಂಡಿದ್ದ ಮಗುವಿನ ಕಣ್ಣಿನಿಂದ ಈಗ ಝೋಂಪಿನ ಸೂಚನೆಯೂ ಮಾಯವಾಗಿತ್ತು.

ಅಂತಿಂಥ ನಿದ್ರೆ ನಿನದಲ್ಲ; ನಿನ್ನಂಥ ನಿದ್ರೆ ಇನ್ನಿಲ್ಲ।
ನಡೆನಡೆದು ಕಾಲ ಕೀಲೆಲ್ಲ ಸ್ಟ್ರೈಕ್ ಮಾಡುತಿಹವು 'ನಡೆಯೊಲ್ಲ'
ತಿರುತಿರುಗಿ ಕೊರಳ ನರವೆಲ್ಲ ಹೇಳಿಹವು 'ನಾವು ಹೊರಳಲ್ಲ' ॥
ನಡುಮಧ್ಯದಲ್ಲಿ ನಿನ್ನೂರು ಭುಜಕೀಲಿನಲ್ಲಿ ನಿನ್ನಲರು
ತೊಟ್ಟಿಲಲಿ ಮಲಗೆ ನೀನೊಲ್ಲೆ ಬಲು ಪ್ರಿಯವು ನಿನಗೆ ಉಯ್ಯಾಲೆ ॥
ಎದೆಮಟ್ಟದಲ್ಲಿ ನಾ ಹೊತ್ತೆ; ತಿರುಗಾಡಿಸಿದೆನು ಬಲು ಹೊತ್ತೆ
ಹೊತ್ತಾಯಿತಷ್ಟೆ ನಿನ ಹೊತ್ತು; ಬರಲಿಲ್ಲ ನಿದಿರೆ ಕಿಂಚಿತ್ತು ॥

ಎಂಬ 'ಅನಿದ್ರಗೀತೆ'ಯೊಂದು ನನ್ನ ಮನದಲ್ಲಿ ಮೂಡಿತು. ಮಡದಿ–ಮಗುವಿನ ಠಳಾಯಿಸುವಿಕೆಯು ಎರಡು ದಿನಗಳಿಗೆ ಆಗುವಷ್ಟು ಸ್ಟೆಪ್ಪನ್ನು ತಲುಪಿತ್ತು. ಮಗುವಿನ ಕಣ್ಣಲ್ಲಿ ಲವಲೇಶವೂ ಕಾಣದ ನಿದ್ರೆಯ ಛಾಯೆಯು ಮಡದಿಯ ಕಣ್ಣಲ್ಲಿ ಢಾಳಾಗಿ ಕಾಣತೊಡಗಿತು. ಇವೆಲ್ಲವನ್ನೂ ಗಮನಿಸುತ್ತಿದ್ದ ಮಗಳು ''ಕೊಡಮ್ಮ, ಹಾಲು ಕುಡಿದರೆ ನಿದ್ರಿಸ್ತಾನೆ'' ಎಂದು ಮಗುವನ್ನು ಒಳಗೆ ಕರೆದೊಯ್ದಳು. ಮಡದಿಯು ನಿದ್ರೆಯ ಮೊದಲ ಮೆಟ್ಟಿಲನ್ನು ಏರಿದಳು.

ಕೊಂಚ ಸಮಯದ ನಂತರ 'ಸ್ವಲ್ಪ ಮಗೂನ ಎತ್ಕೊಳ್ಳಿ' ಎಂಬ ಮಗಳ ನಿದ್ರಾಭರಿತ ಸ್ವರವೂ, ಮಗುವಿನ ಕಿಟಾರ್ ವಾದನವೂ ಕೇಳಿಸಿತು. ಸತಿವಾಕ್ಯಪರಿಪಾಲಕನಾದ ಅಳಿಯನು ಕಾವಡಿಯನ್ನು ಹೊತ್ತ ಹರೋಹರರಂತೆ, ಇರುಮುಡಿಯನ್ನು ಹೊತ್ತ ಅಯ್ಯಪ್ಪರಂತೆ ಮಗುವನ್ನು ಹೊತ್ತು ಓಡಾಡತೊಡಗಿದನು. ಇವೆಲ್ಲವನ್ನೂ ದೂರದಿಂದ ಗಮನಿಸುತ್ತಿದ್ದ ಅಪಾರ್ಟ್‌ಮೆಂಟಿನ ಸೆಕ್ಯುರಿಟಿ ಗಾರ್ಡ್‌ಗಳು 'ಮಗೀ ಬ್ಯಕ್ಯೋ ಗಂಟ ನಾವು ನೇಟ್ ಡೂಟಿ ಮಾಡ್ಬೇಕಾಗಿಲ್ಲ, ಈ ಮನ್ಶವ್ರೇ ಬೆಳಗನ್ನ ಎದ್ದಿರ್ತಾರೆ ಯಾವ್ನಳ್ಳೂ ಬರಾಕಿಲ್ಲ, ಮೂರ್ದಿನ ಟ್ರಿಪ್ ಓಗ್ಬರೋಮಾ' ಎಂಬ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದರೆಂದು ಮರುದಿನ ನನಗೆ ಬಲ್ಲ ಮೂಲಗಳಿಂದ ತಿಳಿಯಿತು.

ಮಗುವಿನ ಕಣ್ಣುಗಳು ಈಗ ಡಬಲ್ ಜಾಮೂನಿನ ಬಟ್ಟಲುಗಳಷ್ಟು ಅಗಲವಾಗಿದ್ದವು. ಅಳಿಯನ ಕಾಲುಗಳು ಸೋಲುತ್ತಿದ್ದವು. ತೂಕಡಿಕೆಯಿಂದ ಅವನ ಶಿರವು ಪೆಂಡುಲಮ್‌ನಂತೆ ಆಡುತ್ತಿತ್ತು. ಮಗುವು ಪ್ರತಿ ಮೂವತ್ತು ಸೆಕೆಂಡಿಗೊಮ್ಮೆ ಕೇಕೆ ಹಾಕುವ ಮೂಲಕ ಪೆಂಡುಲಮ್ ಆಟಕ್ಕೆ ತನ್ನ ಮೆಚ್ಚುಗೆ ಸೂಚಿಸುತ್ತಿತ್ತು. ಮಗುವನ್ನು ಚುಕ್ಕು ತಟ್ಟುತ್ತಾ ಮಲಗಿಸುವುದೆಂದು ತೀರ್ಮಾನಿಸಿದ ಅಳಿಯನು ಮಗುವನ್ನು ಹಾಸಿಗೆಯ ಮಧ್ಯದಲ್ಲಿ ಮಲಗಿಸಿದನು.

ಮರದಲ್ಲಿನ ಪಕ್ಷಿಗಳು ಮತ್ತೆ ನಿದ್ರೆಯಿಂದೇಳುವಂತೆ ದನಿಯೇರಿಸಿತು ಮಗು. ಮಡದಿ, ಮಗಳು, ಅಳಿಯ ನಿದ್ರೆಗೆ ಜಾರಿದ್ದರು. ಈಗ ಎದ್ದಿದ್ದದ್ದು ನಾನು ಮತ್ತು ಮಗು ಮಾತ್ರ. ಹಾಸಿಗೆಯಿಂದ ಮಗುವನ್ನು ಎತ್ತಿಕೊಂಡು ಹೊರಬಂದು ಉಯ್ಯಾಲೆಯಲ್ಲಿ ಕುಳಿತು ಜೀಕತೊಡಗಿದೆ. ಮಗುವಿನ ಡಬಲ್ ಜಾಮೂನ್ ಬಟ್ಟಲ ಕಣ್ಣುಗಳು ಸಿಂಗಲ್ ಜಾಮೂನ್ ಬಟ್ಟಲಿನ ಗಾತ್ರಕ್ಕೆ ಇಳಿದವು; ಮಿನಿ ರಸಗುಲ್ಲಾದ ಬಟ್ಟಲಿನ ಗಾತ್ರಕ್ಕೆ ಕ್ಷೀಣಿಸಿದವು; ಕೆಳರೆಪ್ಪೆಯು ಅಯಸ್ಕಾಂತದಂತೆ ಬದಲಾಗಿ ಮೇಲ್ರೆಪ್ಪೆಯನ್ನು ಜಗ್ಗತೊಡಗಿತು; ಮೇಲ್ರೆಪ್ಪೆಯು ಅಂಗಡಿಯ ಶಟರ್‌ಗಳು ಕ್ಲೋಸ್ ಆಗಿ ಅಂಗಡಿಯ ವಸ್ತುಗಳಾವುವೂ ಕಾಣದಂತಾಗಿಸುವಂತೆಯೇ ಕಣ್ಣಾಪಾಪೆಗಳ ಮೇಲೆ ಚಾಚಿಕೊಂಡಿತು. ಮೂಗಿನ ಹೊಳ್ಳೆಗಳು ಸಣ್ಣದಾಗಿ ಅರಳಿ ಶ್ವಾಸೋಚ್ಛ್ವಾಸವು ಮಂದಗತಿಯನ್ನು ತಲುಪಿತು.

ಊಹೂಂ. ಇವಾವುವೂ ಮಗುವಿನ ಕಣ್ಣಿಗೆ ಸಂಬಂಧಿಸಿದ ಬಾಬ್ತಲ್ಲ, ನನ್ನ ಕಣ್ಣುಗಳಿಗೆ ಸಂಬಂಧಿಸಿದವು. ಹಳ್ಳಿಯ ಜನರ ಮೈಮೇಲೆ ದೇವರು ಬಂದಾಗ ಅತ್ತಿತ್ತ ಆಡುವ ಕೊರಳಿನಂತೆ ನನ್ನ ಕೊರಳೂ ನಿದ್ರಾಭಾರಕ್ಕೆ ತೂಗತೊಡಗಿತು. ಕಷ್ಟಪಟ್ಟು ಉಯ್ಯಾಲೆಯಿಂದೆದ್ದು ತಟ್ಟಾಡುತ್ತಲೇ ಮಗುವನ್ನು ಎತ್ತಕೊಂಡು ಬಂದು ನನ್ನ ಹಾಸಿಗೆಯ ಮೇಲೆ ನನ್ನ ಪಕ್ಕದಲ್ಲಿಯೇ ಮಲಗಿಸಿಕೊಂಡು, ನನ್ನ ಪಿಳುಚುಕಣ್ಣುಗಳನ್ನು ಕೀಲಿಸಿ, ಮಗುವಿನತ್ತ ನೋಡಿದೆ.

ತನಗೂ ನಿದ್ರೆಗೂ ಏನೇನೂ ಸಂಬಂಧವಿಲ್ಲ ಎಂಬಂತಿದ್ದವು ಶಿಶುವಿನ ಕಣ್ಣುಗಳು. ಮುಖದಲ್ಲಿ ಮಂದಾನಿಲ ರಗಳೆಯ ಛಾಯೆಯು ಉತ್ಸಾಹ ರಗಳೆಯಾಗಿ ಬದಲಾಗುತ್ತಿರುವುದು ಗೋಚರಿಸಿತು. ನಿದ್ರೆ ಬಂದಿದ್ದ ಮಗುವು ಎಲ್ಲರನ್ನೂ ಮಲಗಿಸಿ, ಅಂತಹ ಸಾಧನೆಯನ್ನು ಗೈದುದಕ್ಕೆ ಕೇಕೆ ಹಾಕುತ್ತಾ ಕುಳಿತಿತ್ತು.

ಮಕ್ಕಳ ಕ್ಯಾನ್ಸರ್ ಆರೈಕೆಯಲ್ಲಿ ಸಂಗೀತ: ಒಂದು ಸಂಶೋಧನಾ ಅನುಭವ

▸ವರಲಕ್ಷ್ಮಿ ಎನ್.

ಜಗತ್ತಿನಾದ್ಯಂತ ಪ್ರತಿ ವರ್ಷ ಸುಮಾರು ನಾಲ್ಕು ಲಕ್ಷಕ್ಕೂ ಹೆಚ್ಚು ಮಕ್ಕಳು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಭಾರತದ ಪರಿಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ, ದೇಶದ ವಿವಿಧ ಕ್ಯಾನ್ಸರ್ ನೋಂದಣಿ ಕೇಂದ್ರಗಳ ವರದಿಯ ಪ್ರಕಾರ, 0 ರಿಂದ 14 ವರ್ಷದ ಮಕ್ಕಳಲ್ಲಿ ಸುಮಾರು ಶೇ.4 ಮತ್ತು 0 ರಿಂದ 19 ವರ್ಷದ ಮಕ್ಕಳಲ್ಲಿ ಸುಮಾರು ಶೇ.6 ಕ್ಯಾನ್ಸರ್ ಪ್ರಕರಣಗಳು ಪತ್ತೆಯಾಗುತ್ತಿವೆ. ಇವುಗಳಲ್ಲಿ ಅಸಂಖ್ಯಾತ ಕುಟುಂಬಗಳ ಕಣ್ಣೀರಿನ ಕಥೆಗಳಿವೆ. ಕ್ಯಾನ್ಸರ್ ರೋಗನಿರ್ಣಯವು ಕೇವಲ ಮಗುವಿನ ದೈಹಿಕ ಆರೋಗ್ಯವನ್ನಷ್ಟೇ ಅಲ್ಲದೆ, ಇಡೀ ಕುಟುಂಬದ ದೈನಂದಿನ ಬದುಕು ಮತ್ತು ಮಾನಸಿಕ ನೆಮ್ಮದಿಯನ್ನು ಅಸ್ತವ್ಯಸ್ತಗೊಳಿಸುತ್ತದೆ. ಈ ಕಠಿಣ ಪಯಣದಲ್ಲಿ ಮಕ್ಕಳು ಮತ್ತು ಅವರ ಪೋಷಕರು ಅನುಭವಿಸುವ ನೋವು, ಅನಿಶ್ಚಿತತೆ, ಆತಂಕ ಮತ್ತು ವಿವರಿಸಲಾಗದ ಒತ್ತಡದ ವ್ಯಥೆ–ಕಥೆಗಳು ಅತ್ಯಂತ ಗಾಢವಾದುದು. ಕ್ಯಾನ್ಸರ್ ಚಿಕಿತ್ಸೆ ಎಂದರೆ ಕೇವಲ ಔಷಧಿ, ಕಿಮೋಥೆರಪಿ ಅಥವಾ ಶಸ್ತ್ರಚಿಕಿತ್ಸೆ ಮಾತ್ರವಲ್ಲ, ಅದು ಮಕ್ಕಳ ಮನಸ್ಸಿನ ಮೇಲೆಯೂ ಭಾರೀ ಪರಿಣಾಮ ಬೀರುತ್ತದೆ. ಆಸ್ಪತ್ರೆ, ಇಂಜೆಕ್ಷನ್, ಪರೀಕ್ಷೆಗಳು, ಅಪರಿಚಿತ ವಾತಾವರಣ – ಇವೆಲ್ಲವೂ ಮಕ್ಕಳಲ್ಲಿ ಆತಂಕ, ಒಂಟಿತನ ಮತ್ತು ಭಯವನ್ನು ಹೆಚ್ಚಿಸುತ್ತವೆ. ಈ ಸಂದರ್ಭದಲ್ಲಿ ಮಕ್ಕಳಿಗೆ ಬೇಕಾಗುವುದು ಕೇವಲ ದೈಹಿಕ ಚಿಕಿತ್ಸೆ ಅಲ್ಲ; ಮನಸ್ಸಿಗೆ ನೆಮ್ಮದಿ ಕೊಡುವ ಮಾನವೀಯ ಸ್ಪರ್ಶ.

ಇದೇ ಹಿನ್ನೆಲೆಯಲ್ಲಿ, ಬೆಂಗಳೂರು ನಗರದ ಒಂದು ಶೆಲ್ಟರ್ ಹೋಂನಲ್ಲಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳಿಗಾಗಿ ಒಂದು ಸಂಗೀತ ಕಾರ್ಯಕ್ರಮವನ್ನು ನಡೆಸಿದ್ದೆ. ಅದು ವೇದಿಕೆ ಮೇಲೆ ನಿಂತು ಹಾಡುವ ಕಾರ್ಯಕ್ರಮವೂ ಅಲ್ಲ, ಪ್ರೇಕ್ಷಕರಿಗಾಗಿ ತಯಾರಿಸಿದ ಪ್ರದರ್ಶನವೂ ಅಲ್ಲ. ಅದು ಮಕ್ಕಳ ಜೊತೆ, ಅವರ ಕಣ್ಣೆದುರು, ಅವರ ನೆಲೆಯಲ್ಲೇ ಕುಳಿತುಕೊಂಡು ನಡೆಸಿದ ಒಂದು ಸರಳ ಸಂಗೀತ ಸಂವಾದ. ಮಕ್ಕಳಿಗೆ ಇಷ್ಟವಾದ ಹಾಡುಗಳನ್ನು ಕೇಳುತ್ತಾ, ಅವರ ಜೊತೆಗೆ ಗುನುಗುತ್ತಾ, ಕೆಲವೊಮ್ಮೆ ತಾಳಕ್ಕೆ ಕೈತಟ್ಟುತ್ತಾ, ಆಟವಾಡುತ್ತಾ ಸಾಗಿದ ಕ್ಷಣಗಳು ಅವು.

ಹಾಡು ಆರಂಭವಾದ ಕೆಲವೇ ಕ್ಷಣಗಳಲ್ಲಿ ಮಕ್ಕಳ ಮುಖದಲ್ಲಿ ಕಂಡ ಬದಲಾವಣೆ ಸ್ಪಷ್ಟವಾಗಿತ್ತು. ಸಾಮಾನ್ಯವಾಗಿ ಆಸ್ಪತ್ರೆಯ ವಾತಾವರಣದಲ್ಲಿ ಮೌನವಾಗಿರುವ, ದಣಿದಂತೆ ಕಾಣುವ ಮಕ್ಕಳು ತಾಳಕ್ಕೆ ಕೈತಟ್ಟಿದರು. ಕೆಲವರು ನಿಧಾನವಾಗಿ ಗುನುಗಲು ಆರಂಭಿಸಿದರು. ಆಸ್ಪತ್ರೆ, ಚಿಕಿತ್ಸೆ, ಇಂಜೆಕ್ಷನ್, ಕಿಮೋಥೆರಪಿ, ಪರೀಕ್ಷೆಗಳ ನಡುವೆ ಸಿಕ್ಕ ಈ ಕ್ಷಣಗಳಲ್ಲಿ ಮಕ್ಕಳು ಸ್ವಲ್ಪ ಹೊತ್ತು ತಮ್ಮ ಕಾಯಿಲೆಯನ್ನು ಮರೆತಂತಾಯಿತು. ಒಬ್ಬ ಮಗು ತನ್ನ ಇಷ್ಟವಾದ ಹಾಡು ಬಂದಾಗ ಕಣ್ಣುಮಿಟುಕಿಸುತ್ತಾ ನಗುತ್ತಿದ್ದರೆ, ಮತ್ತೊಬ್ಬ ಮಗು ತನ್ನ ಇಷ್ಟದ ಹಾಡು ಕೇಳುತ್ತಿದ್ದಂತೆ ತಲೆಯನ್ನು ಮೆಲ್ಲಗೆ ತಟ್ಟಿಕೊಂಡು ನಗುತ್ತಿದ್ದ ದೃಶ್ಯ ಇನ್ನೂ ಮನಸ್ಸಿನಲ್ಲಿ ಉಳಿದಿದೆ. ಆ ಕ್ಷಣಗಳು ನನ್ನನ್ನು ಒಂದು ಆಳವಾದ ಪ್ರಶ್ನೆಯ ಕಡೆಗೆ ಕರೆದೊಯ್ದವು: ''ಸಂಗೀತವು ಮಕ್ಕಳಲ್ಲಿ ಇಷ್ಟು ಬದಲಾವಣೆ ತರುತ್ತಿದ್ದರೆ, ಇದನ್ನು ಚಿಕಿತ್ಸೆ ಭಾಗವಾಗಿ ಯಾಕೆ ಹೆಚ್ಚು ಬಳಸುವುದಿಲ್ಲ?''

ಸಂಗೀತವು ಆಸ್ಪತ್ರೆಯ ಕಠಿಣ ಪರಿಸರದೊಳಗೆ ಮಕ್ಕಳಿಗೂ ಪಾಲಕರಿಗೂ ಒಟ್ಟಿಗೆ ಸಾಂತ್ವನ ನೀಡುವ ಮಾನವೀಯ ಸೇತುವೆಯಾಗಿ ಕೆಲಸ ಮಾಡುತ್ತದೆ.

ಮ್ಯೂಸಿಕ್‌ಥೆರಪಿ

ವಿಶ್ವದ ಅನೇಕ ದೇಶಗಳಲ್ಲಿ ಮ್ಯೂಸಿಕ್ ಥೆರಪಿಯನ್ನು ಕ್ಯಾನ್ಸರ್ ಚಿಕಿತ್ಸೆಯ ಭಾಗವಾಗಿ ಬಳಸಲಾಗುತ್ತಿದೆ. ಸಂಗೀತದ ಮೂಲಕ ಮಕ್ಕಳಲ್ಲಿ ಆತಂಕ ಕಡಿಮೆಯಾಗುವುದು, ನೋವಿನ ಅನುಭವ ತಗ್ಗುವುದು ಮತ್ತು ಆಸ್ಪತ್ರೆಯ ಒತ್ತಡವನ್ನು ಸಹಿಸುವ ಶಕ್ತಿ ಹೆಚ್ಚಾಗುವುದು ಎಂಬುದನ್ನು ಹಲವಾರು ಅಧ್ಯಯನಗಳು ಸೂಚಿಸಿವೆ. ಆದರೆ ಭಾರತದಲ್ಲಿ, ವಿಶೇಷವಾಗಿ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಜೀವನದಲ್ಲಿ ದಿನನಿತ್ಯದ ಸಂಗೀತದ ಪಾತ್ರದ ಬಗ್ಗೆ ಸಂಶೋಧನೆ ಬಹಳ ಕಡಿಮೆ. ಔಷಧಿ , ಶಸ್ತ್ರಚಿಕಿತ್ಸೆ, ಕಿಮೋಥೆರಪಿ ಇವೆಲ್ಲದರ ಬಗ್ಗೆ ಸಾಕಷ್ಟು ಮಾತುಗಳಿವೆ. ಆದರೆ ಮಕ್ಕಳ ಮಾನಸಿಕ ಆರೋಗ್ಯಕ್ಕೆ ಬೇಕಾದ ಆರೈಕೆ ಕುರಿತು, ಅದರಲ್ಲೂ ಸಂಗೀತದಂತಹ ಸರಳ ಮತ್ತು ಸಹಜ ಸಾಧನಗಳ ಕುರಿತು ಹೆಚ್ಚು ಚರ್ಚೆ ನಡೆದಿಲ್ಲ. ಈ ಅನುಭವವೇ ನನ್ನ ಸಂಶೋಧನೆಗೆ ಆಧಾರವಾಯಿತು. ಈ ಅಧ್ಯಯನವು ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಜೀವನದಲ್ಲಿ 'ಎವ್ರಿ ಡೇ ಮ್ಯೂಸಿಕ್ ಎಂಗೇಜ್ಮೆಂಟ್', ಅಂದರೆ ದಿನನಿತ್ಯದ ಸರಳ ಸಂಗೀತ ಚಟುವಟಿಕೆಗಳು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಪಾಲಕರ ದೃಷ್ಟಿಕೋನದಿಂದ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದೆ. ಇಲ್ಲಿ ನಾನು ವೇದಿಕೆಯ ಮೇಲಿನ ಮ್ಯೂಸಿಕ್ ಥೆರಪಿಯ ಬಗ್ಗೆ ಮಾತ್ರ ನೋಡಿಲ್ಲ; ಮನೆಯಲ್ಲೋ, ಆಸ್ಪತ್ರೆಯ ಕೊಠಡಿಗಳಲ್ಲೋ, ಮೊಬೈಲ್ ಫೋನಿನ ಸ್ಪೀಕರ್‌ನಲ್ಲೋ, ತಾಯಿಯ ಗುನುಗು ಲಾಲಿಯಲ್ಲೋ ನಡೆಯುವ ಸಂಗೀತದ ಬಗ್ಗೆ ಕೇಳಿದೆ. ಪಾಲಕರು ತಮ್ಮ ಮಕ್ಕಳನ್ನು ದಿನನಿತ್ಯ ಇಪ್ಪತ್ನಾಲ್ಕು ಗಂಟೆ ನೋಡುತ್ತಿರುತ್ತಾರೆ.



ಚಿಕಿತ್ಸೆಗೂ ಮೊದಲು, ಚಿಕಿತ್ಸೆಯ ಸಮಯದಲ್ಲಿ, ನೋವು, ಆಯಾಸ, ಭಯ ಎಲ್ಲದರ ನಡುವೆ, ಚಿಕಿತ್ಸೆಯ ನಂತರದ ಸಮಯದಲ್ಲೂ ಪಾಲಕರು ಮಕ್ಕಳ ಜೊತೆ ಇರುತ್ತಾರೆ. ಅವರ ಮಾತುಗಳಲ್ಲಿ ಸಂಗೀತದ ಪರಿಣಾಮ ಸ್ಪಷ್ಟವಾಗಿ ಕೇಳಿಬರುತ್ತದೆ.

''ನಾವು ಹಾಡು ಹಾಕಿದಾಗ ಅವನು ನಗುತ್ತಾನೆ, ಶಕ್ತಿಯುತವಾಗಿ ವರ್ತಿಸುತ್ತಾನೆ, ಸುತ್ತಲೂ ಜಿಗಿಯುತ್ತಾನೆ. ಅದು ನನಗೂ ಸಂತೋಷವನ್ನು ನೀಡುತ್ತದೆ. ಅವನು ಚಿಕಿತ್ಸೆ ಪಡೆಯುತ್ತಿರುವಾಗಲು ಆ ಹಾಡಿಗೆ ನಲಿದಾಡುತ್ತಿರುತ್ತಾನೆ'' ಎಂದು ಒಬ್ಬ ತಾಯಿ ಹೇಳಿದರೆ, ''ಕಿಮೋಥೆರಪಿ ಇಂಜೆಕ್ಷನ್ ಸಮಯದಲ್ಲಿ ನಾವು ಭಕ್ತಿಗೀತೆಯನ್ನು ಹಾಕಿದರೆ, ಅವಳು ತುಂಬಾ ಶಾಂತವಾಗಿರುತ್ತಾಳೆ. ಭಕ್ತಿಗೀತೆಗಳು, ಹನುಮಾನ್ ಚಾಲೀಸಾವನ್ನು ಕೇಳಿದಾಗ ಯಾವುದೇ ಚಿಕಿತ್ಸಾ ವಿಧಾನಗಳಿಗೆ ಅವಳು ಧೈರ್ಯದಿಂದ, ಆತ್ಮವಿಶ್ವಾಸದಿಂದ ಕೂರುತ್ತಾಳೆ'' ಎಂದು 9 ವರ್ಷದ ಪುಟ್ಟಿಯ ತಂದೆ–ತಾಯಿ ತಮ್ಮ ಅನುಭವವನ್ನು ಹಂಚಿಕೊಂಡರು. ಈ ಮಾತುಗಳು ಹೇಳುವುದೇನೆಂದರೆ, ಸಂಗೀತ ಮಕ್ಕಳಿಗೆ ಕೇವಲ ಮನೋರಂಜನೆ ಅಲ್ಲ, ಅದು ಭದ್ರತೆಯ ಅನುಭವವನ್ನು ನೀಡುತ್ತದೆ. ಆಸ್ಪತ್ರೆಯ ಅಜ್ಞಾತ ಜಗತ್ತಿನಲ್ಲಿ, ಸಂಗೀತ ಮಕ್ಕಳಿಗೆ ಪರಿಚಿತವಾದ ಧ್ವನಿ, ಮನೆಯ ನೆನಪು, ಮತ್ತು ಸ್ವಲ್ಪ ಹೊತ್ತು ''ನಾನು ರೋಗಿ'' ಅನ್ನುವ ಭಾವನೆಯನ್ನು ಮರೆಸುವ ಒಂದು ಸೇತುವೆಯಾಗಿದೆ.

ಬಹುತೇಕ ಪಾಲಕರು ಸಂಗೀತವನ್ನು ಬಹಳ ಸರಳವಾಗಿ ಬಳಸುತ್ತಿದ್ದಾರೆ – ಮೊಬೈಲಿನಲ್ಲಿ ಹಳೆಯ ಹಾಡುಗಳು, ದೇವರ ಭಜನೆಗಳು, ಸಿನಿಮಾ ಗೀತೆಗಳು, ಮಗು ತಾನೇ ಹಾಡಿದ ಹಾಡುಗಳು ಅಥವಾ ಅಜ್ಜಿಯ ಲಾಲಿ ಹಾಡುಗಳು. ಇವೆಲ್ಲವುಗಳು ಮಕ್ಕಳಿಗೆ ನೆಮ್ಮದಿ ಕೊಡುತ್ತಿವೆ. ಆದರೆ ಇದೇ ಸಮಯದಲ್ಲಿ ಪಾಲಕರು ಒಂದು ಕೊರತೆಯನ್ನೂ ಸೂಚಿಸುತ್ತಾರೆ. ಸಂಗೀತ ಸಹಾಯ ಮಾಡುತ್ತಿದೆ ಎಂಬುದು ಗೊತ್ತಿದ್ದರೂ, ಅದನ್ನು ಹೇಗೆ ಸರಿಯಾಗಿ ಬಳಸಬೇಕು, ಯಾವ ಸಮಯದಲ್ಲಿ, ಯಾವ ರೀತಿಯಲ್ಲಿ ಎಂಬ ಮಾರ್ಗದರ್ಶನ ಅವರಿಗೆ ಇಲ್ಲ. ಮ್ಯೂಸಿಕ್ ಥೆರಪಿ ಮಾಡಲು ವಿಶೇಷ ತರಬೇತಿ ಪಡೆದ ಥೆರಪಿಸ್ಟ್‌ಗಳ ಅಗತ್ಯವಿದೆ. ಇದು ಮಕ್ಕಳ ಆರೈಕೆಯಲ್ಲಿ ಸಂಗೀತವನ್ನು ಗಂಭೀರವಾಗಿ ಸೇರಿಸಬಹುದಾದ ದೊಡ್ಡ ಅವಕಾಶವನ್ನು ತೋರಿಸುತ್ತದೆ. ಕಡಿಮೆ ಖರ್ಚಿನ, ಮಕ್ಕಳಿಗೆ ಇಷ್ಟವಾದ, ಮನಸ್ಸಿಗೆ ನೆಮ್ಮದಿ ನೀಡುವ ಸಂಗೀತ – ಇವೆಲ್ಲವೂ ಕ್ಯಾನ್ಸರ್ ಚಿಕಿತ್ಸೆಯ ಔಷಧಿಗೆ ಪೂರಕವಾಗಿ ಕೆಲಸ ಮಾಡಬಹುದು.

ಈ ಸಂಶೋಧನೆಯ ಮೂಲಕ ಸ್ಪಷ್ಟವಾದದ್ದು ಏನೆಂದರೆ, ಕ್ಯಾನ್ಸರ್ ಕಾಯಿಲೆಗೆ ಚಿಕಿತ್ಸೆ ಪಡೆಯುತ್ತಿರುವ ಮಕ್ಕಳ ಬದುಕಿನಲ್ಲಿ ಸಂಗೀತ ಒಂದು ಕ್ಷಣಿಕ ಬದಲಾವಣೆಯಾಗಿರಬಹುದು, ಆದರೆ ಅದರ ಪರಿಣಾಮ ಆಳವಾದದ್ದು. ಅದು ಮಕ್ಕಳಿಗೆ ಧೈರ್ಯವನ್ನು ನೀಡುತ್ತದೆ, ಮುದುಡಿದ ಜೀವನಕ್ಕೆ ಬಣ್ಣವನ್ನು ಹಚ್ಚುತ್ತದೆ, ಆರಾಮವನ್ನು ನೀಡುತ್ತದೆ. ಪಾಲಕರಿಗೂ ಧೈರ್ಯವನ್ನು ನೀಡುತ್ತಾ, ಒತ್ತಡದ ನಡುವೆ ಒಂದು ಉಸಿರಾಟದ ಅವಕಾಶವಾಗುತ್ತದೆ. ಇದಷ್ಟೇ ಅಲ್ಲ, ಸಂಗೀತವು ಪಾಲಕರಿಗೂ ಒಂದು ಮಹತ್ವದ ನೆಮ್ಮದಿಯ ಸಾಧನವಾಗಿದೆ. ಮಕ್ಕಳ ನೋವು, ಭಯ ಮತ್ತು ಅನಿಶ್ಚಿತತೆಯನ್ನು ಪ್ರತಿದಿನ ಎದುರಿಸುವ ಪಾಲಕರಿಗೆ ಸಂಗೀತವು ಸ್ವಲ್ಪ ಹೊತ್ತು ಮನಸ್ಸನ್ನು ಹಗುರಗೊಳಿಸುವ ಅವಕಾಶವನ್ನು ನೀಡುತ್ತದೆ. ''ಮಗು ನಗುತ್ತಿರುವುದನ್ನು ನೋಡಿದಾಗ ನಮ್ಮ ನೋವು ಕೂಡ ಕ್ಷಣಮಾತ್ರಕ್ಕೆ ಕಡಿಮೆಯಾಗುತ್ತದೆ'' ಎಂಬ ಮಾತುಗಳು ಹಲವಾರು ಪಾಲಕರಿಂದ ಕೇಳಿಬಂದವು. ಮಗುವಿನ ಜೊತೆ ಹಾಡನ್ನು ಹಂಚಿಕೊಳ್ಳುವ ಕ್ಷಣಗಳು ಪಾಲಕರಿಗೂ ನಿಟ್ಟುಸಿರು, ಅಲ್ಪವಾದರೂ ನಿರಾಳತೆಯ ಜಾಗವಾಗುತ್ತವೆ – ಅವು ದುಃಖದ ನಡುವೆ ಆಶಾಕಿರಣವಾಗಿ ಕಾಣಿಸುತ್ತವೆ. ಈ ಕಾರಣದಿಂದ ಸಂಗೀತವು ಆಸ್ಪತ್ರೆಯ ಕಠಿಣ ಪರಿಸರದೊಳಗೆ ಮಕ್ಕಳಿಗೂ ಪಾಲಕರಿಗೂ ಒಟ್ಟಿಗೆ ಸಾಂತ್ವನ ನೀಡುವ ಮಾನವೀಯ ಸೇತುವೆಯಾಗಿ ಕೆಲಸ ಮಾಡುತ್ತದೆ. ಕೆಲವೊಮ್ಮೆ ತಮ್ಮ ಭಾವನೆಗಳನ್ನು ಮಾತುಗಳ ಮೂಲಕ ಹೇಳಲು ಕಷ್ಟವಾಗುವ ಮಕ್ಕಳಿಗೆ, ಹಾಡೇ ಅವರ ಭಾವನೆಯ ಭಾಷೆಯಾಗುತ್ತದೆ.

ಪತ್ರ ಮಿತ್ರ

ಎಐ ಸಮ್ಮೇಳನ: ದೇಶದ ಹೀಯಾಳಿಕೆ ಸರಿಯೆ?

ಇತ್ತೀಚೆಗೆ ನಡೆದ ದಿಲ್ಲಿಯಲ್ಲಿ ನಡೆದ ಕೃತಕ ಬುದ್ಧಿಮತ್ತೆ (Artificial Intelligence) ಸಮ್ಮೇಳನದಲ್ಲಿ, ನೋಯ್ಡಾದ ಗೋಲ್ಗೋಟಿಯಾಸ್ ವಿಶ್ವವಿದ್ಯಾಲಯವು ಪ್ರದರ್ಶಿಸಿದ ಚೀನಾ ತಯಾರಿಕೆಯ ರೋಬೋಟ್ ನಾಯಿಯನ್ನು ತನ್ನದೇ ಉತ್ಪನ್ನ ಎಂದು ಪ್ರದರ್ಶಿಸಿದ ಘಟನೆ ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ರಾಜಕೀಯ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು. ವಿಷಯ ಬಹಿರಂಗವಾದ ನಂತರ ಟೀಕೆಗಳು ಎರಡು ದಿಕ್ಕುಗಳಲ್ಲಿ ಹರಿದವು– ಒಂದು ಕಡೆ ಸಂಸ್ಥೆಯ ಮೇಲೆ ಪ್ರಶ್ನೆ ಗಳು, ಇನ್ನೊಂದು ಕಡೆ ಸಂಪೂರ್ಣ ಭಾರತೀಯ ಎಐ ಸಾಮರ್ಥ್ಯದ ಮೇಲೆಯೇ ಅನುಮಾನ.

ಒಂದು ಖಾಸಗಿ ಸಂಸ್ಥೆಯ ತಪ್ಪು ನಡೆ ಇಡೀ ದೇಶದ ಸಂಪೂರ್ಣ ತಂತ್ರಜ್ಞಾನ ಸಾಮರ್ಥ್ಯವನ್ನು ಪ್ರತಿನಿಧಿಸುವುದಿಲ್ಲ ಎಂಬ ಮೂಲಭೂತ ವಿಚಾರ ಇಲ್ಲಿ ಮಸುಕಾಗಿದೆ. ಯಾವ ಕ್ಷೇತ್ರದಲ್ಲಾದರೂ ಕೆಲವರು ಕೀರ್ತಿ ಪಡೆಯಲು ಅಡ್ಡ ದಾರಿಯನ್ನು ಹುಡುಕುತ್ತಾರೆ; ಅದನ್ನು ಒಂದು ರಾಷ್ಟ್ರದ ವೈಜ್ಞಾನಿಕ ಸಾಮರ್ಥ್ಯದ ಮಾನದಂಡವಾಗಿ ಪರಿಗಣಿಸುವುದು ತರ್ಕಸಮ್ಮತವಲ್ಲ.

ವಿಪಕ್ಷಗಳು ಈ ಘಟನೆಯನ್ನು ಸರ್ಕಾರದ ಮೇಲೆ ದಾಳಿ ಮಾಡಲು ಉಪಯೋಗಿಸುತ್ತಿವೆ. ಸರ್ಕಾರದ ನೀತಿಗಳ ಮೇಲೆ ಪ್ರಶ್ನೆ ಕೇಳುವುದು ಪ್ರಜಾಪ್ರಭುತ್ವದ ಅವಿಭಾಜ್ಯ ಹಕ್ಕು. ಆದರೆ ಒಂದು ಖಾಸಗಿ ಸಂಸ್ಥೆಯ ತಪ್ಪನ್ನು ದೇಶದ ವೈಜ್ಞಾನಿಕ ಮೂಲಸೌಕರ್ಯ ಅಥವಾ ಪ್ರಧಾನಮಂತ್ರಿಯ ವೈಯಕ್ತಿಕ ಸಾಮರ್ಥ್ಯಕ್ಕೆ ತಳುಕು ಹಾಕುವುದು ಅತಿರೇಕವೆನ್ನಬಹುದು.

ವಿಮರ್ಶೆ ಹಾಗೂ ಹೀಯಾಳಿಕೆ – ಇವೆರಡರ ನಡುವೆ ಸೂಕ್ಷ್ಮವಾದ ಗಡಿ ಇದೆ. ಸಾರ್ವಜನಿಕ ಹಿತಕ್ಕಾಗಿ ಪ್ರಶ್ನೆ ಕೇಳುವುದು ಅಗತ್ಯ; ಆದರೆ ರಾಷ್ಟ್ರದ ಸಾಧನೆಗಳನ್ನು ನಿರ್ಲಕ್ಷಿಸಿ ಕೇವಲ ಒಂದು ಘಟನೆ ಆಧಾರವಾಗಿ ದೇಶದ ಸಾಮರ್ಥ್ಯವನ್ನೇ ತಿರಸ್ಕರಿಸುವುದು ನಿರ್ಮಾಣಾತ್ಮಕ ಚರ್ಚೆಯಾಗುವುದಿಲ್ಲ.

ಇಂದು ಭಾರತ ಜಗತ್ತಿನ ಅತಿ ದೊಡ್ಡ ಡಿಜಿಟಲ್ ಮೂಲಸೌಕರ್ಯ ಹೊಂದಿದ ರಾಷ್ಟ್ರಗಳಲ್ಲಿ ಒಂದಾಗಿದೆ. ಯುಪಿಐ ಪಾವತಿ ವ್ಯವಸ್ಥೆ, ಆಧಾರ್ ಆಧಾರಿತ ಸೇವೆಗಳು, ಡಿಜಿಟಲ್ ಪಬ್ಲಿಕ್ ಇನ್‌ಫ್ರಾಸ್ಟ್ರಕ್ಚರ್, ಭಾಷಾ ಮಾದರಿಗಳ ಸಂಶೋಧನೆ, ಸ್ಟಾರ್ಟ್‌ಅಪ್ ಪರಿಸರ ಇವೆಲ್ಲವೂ ಎಐ ಅಭಿವೃದ್ಧಿಗೆ ಬಲವಾದ ನೆಲೆಯನ್ನು ಒದಗಿಸುತ್ತಿವೆ. ಭಾರತೀಯ ಮೂಲದ ವಿಜ್ಞಾನಿಗಳು ಗೂಗಲ್, ಮೈಕ್ರೋಸಾಫ್ಟ್, ಓಪನ್‌ಎಐ ಮುಂತಾದ ಜಾಗತಿಕ ಸಂಸ್ಥೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಅದರರ್ಥ ಎಲ್ಲವೂ ಪರಿಪೂರ್ಣವೆಂದಲ್ಲ. ಭಾರತ ಇನ್ನೂ ಸೆಮಿಕಂಡಕ್ಟರ್ ಉತ್ಪಾದನೆ, ಹಾರ್ಡ್‌ವೇರ್ ರೋಬೋಟಿಕ್ಸ್ ಮತ್ತು ಮೂಲ ಸಂಶೋಧನೆಗಳಲ್ಲಿ ಹೆಚ್ಚಿನ ಹೂಡಿಕೆ ಮಾಡುವ ಅಗತ್ಯವಿದೆ. ಈ ಘಟನೆ ಒಂದು ಎಚ್ಚರಿಕೆಯ ಗಂಟೆಯಂತಿದೆ. ನಾವು 'ಪ್ರಚಾರ'ಕ್ಕಿಂತ 'ಪ್ರಮಾಣಿಕತೆ'ಗೆ ಆದ್ಯತೆ ಕೊಡಬೇಕೆಂದು ನೆನಪಿಸುತ್ತದೆ.

ದೇಶಾಭಿಮಾನ ಎಂದರೆ ತಪ್ಪುಗಳನ್ನು ಮುಚ್ಚುವುದು ಅಲ್ಲ; ತಪ್ಪುಗಳನ್ನು ಒಪ್ಪಿಕೊಂಡು ಸರಿಪಡಿಸುವುದು. ಹಾಗೆಯೇ ವಿರೋಧ ರಾಜಕೀಯ ಎಂದರೆ ದೇಶದ ಸಾಧನೆಗಳನ್ನು ಕಡಿಮೆ ಮಾಡುವುದು ಅಲ್ಲ; ಅವುಗಳನ್ನು ಮತ್ತಷ್ಟು ಬಲಪಡಿಸಲು ಒತ್ತಡ ತರುವುದು.

ಈ ವಿವಾದ ನಮಗೆ ಎರಡು ಪಾಠಗಳನ್ನು ಕಲಿಸುತ್ತದೆ: ಸಂಸ್ಥೆಗಳು ವಿಶ್ವಾಸಾರ್ಹತೆ ಕಾಪಾಡಬೇಕು ಹಾಗೂ ರಾಜಕೀಯ ಚರ್ಚೆ ತಥ್ಯಾಧಾರಿತವಾಗಿರಬೇಕು. ಒಂದು ತಪ್ಪು ಘಟನೆ ಭಾರತ ಎಐ ಭವಿಷ್ಯವನ್ನು ನಿರ್ಧರಿಸುವುದಿಲ್ಲ, ಅದನ್ನು ನಾವು ಹೇಗೆ ಸರಿಪಡಿಸುತ್ತೇವೆ – ಅದೇ ನಮ್ಮ ರಾಷ್ಟ್ರದ ಪರಿಪಕ್ವತೆಯನ್ನು ತೋರಿಸುತ್ತದೆ.

ರಾಷ್ಟ್ರದ ಏಳಿಗೆ ಟೀಕೆಯಿಂದಲ್ಲ, ತಿದ್ದುವ ಮನೋಭಾವದಿಂದ ಸಾಧ್ಯ. ಒಂದು ತಪ್ಪನ್ನು ದೊಡ್ಡದಾಗಿಸುವುದಕ್ಕಿಂತ ಪರಿಹಾರ ಸೂಚಿಸುವುದೇ ದೇಶಭಕ್ತಿ. ಸಾಮಾಜಿಕ ಮಾಧ್ಯಮದ ಕೋಪ ಕ್ಷಣಿಕ; ಆದರೆ ದೇಶದ ಪ್ರತಿಷ್ಠೆ ಶಾಶ್ವತ. ವಿಮರ್ಶೆ ಬೇಕು, ಆದರೆ ಅವಮಾನವಲ್ಲ. ನಿರ್ಮಾಣವೇ ನಿಜವಾದ ರಾಜಕೀಯ.

-ಜಿ.ನಾಗೇಂದ್ರ, ಕಾವೂರು, ಸಂಡೂರು

ತೆರೆಯಿತು ಉ.ಕ. ಭಾಗ್ಯದ ಬಾಗಿಲು

ಉತ್ತರ ಕನ್ನಡದ ಭಾಗ್ಯ ಮನೆ ಬಾಗಿಲಿಗೆ ಬಂದಂತಿದ್ದು, ಎಲ್ಲದಕ್ಕೂ ಉತ್ತರ ಸಿಗುವ ಸಾಧ್ಯತೆಗಳು ಗೋಚರಿಸುತ್ತಿವೆ.

ಇದೇನಪ್ಪಾ, ಹೊಸತು. ಇಲ್ಲಿಯ ತನಕ, ಉತ್ತರವನ್ನೇ ಕಾಣದ ಉತ್ತರಕನ್ನಡದ ಭವಿಷ್ಯವೇ ಬದಲಾಗುತ್ತಿದೆಯೆ ಅಂತ ಅನಿಸಿದರೆ, ಅದಕ್ಕೆ ಉತ್ತರ ಇದೇ ಫೆಬ್ರುವರಿ 22 ಕ್ಕೆ ನಮಗೆಲ್ಲ ಸಿಗಲಿದೆ.

ಅಂದು, ನಮ್ಮ ಮುಖ್ಯಮಂತ್ರಿಯವರು ನಮ್ಮ ಜಿಲ್ಲೆಯ ಪ್ರವಾಸ ಕೈಗೊಳ್ಳಲಿದ್ದು, ಇಲ್ಲಿಯ ತನಕ ಯಾವೆಲ್ಲ ಕಾರಣಗಳಿಂದ ನಾವು ನಿರುತ್ತರರಾಗಿದ್ದೇವೋ ಅವಕ್ಕೆಲ್ಲ ಸಮರ್ಪಕ ಉತ್ತರ ಸಿಗಲಿದೆ. ಬಹು ಚರ್ಚಿತ ಮತ್ತು ಹೋರಾಟಕ್ಕೆ ಎಡೆ ಮಾಡಿಕೊಟ್ಟ 'ಜಿಲ್ಲಾ ಸ್ಪೆಷಾಲಿಟಿ ಆಸ್ಪತ್ರೆ'ಗೆ ಬಂಧಮುಕ್ತಿ ದೊರೆಯುವಂತೆ ಕಾಣುತ್ತಿದೆ. ಮುಖ್ಯಮಂತ್ರಿಗಳು 450 ಹಾಸಿಗೆಯ ಆಸ್ಪತ್ರೆಯ ಕಟ್ಟಡ ಉದ್ಘಾಟಿಸಲಿದ್ದಾರೆ! ಇದು ಬಹಳ ವರ್ಷದ ಕೂಗಾಗಿತ್ತು.

ಇದರ ಜತೆಗೇ ಅಂಕೋಲಾ – ಮಂಜಗುಣಿ, ಗಂಗಾವಳಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಿದ ಸೇತುವೆ ಉದ್ಘಾಟನೆ, ಹಿನಾಪುರದಲ್ಲಿ ಸೇತುವೆ ನಿರ್ಮಾಣ, ಯಲ್ಲಾಪುರ ಪಟ್ಟಣದ ನಿರೀಕ್ಷಣಾ ಮಂದಿರದ ಹೊಸ ಕಟ್ಟಡ ನಿರ್ಮಾಣ, ಮುಂಡಗೋಡಿನಲ್ಲಿ ಹೊಸ ಪ್ರವಾಸಿ ಮಂದಿರದ ಉದ್ಘಾಟನೆ ನಡೆಯಲಿದೆ.

ಈಗ ಹೇಳಿ, ಉತ್ತರ ಕನ್ನಡ ಅಭಿವೃದ್ಧಿ ಪಥದತ್ತ ಸಾಗುತ್ತಿದೆ ಅನ್ನದಿರಲಾದೀತೆ? ಕಾರವಾರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವಿಚಾರವೊಂದೇ ನಮ್ಮ ಜಿಲ್ಲೆಯ ಚಿತ್ರಣ ಬದಲಿಸಬಹುದು. ಅಷ್ಟೊಂದು ಅವಶ್ಯಕತೆಯ ವಿಷಯ. ಈಗ ಅದಕ್ಕೊಂದು ಕಾಯಕಲ್ಪ ಸಿಗುತ್ತಿದೆ ಅಂದಂತಾಯಿತು.

ಇಷ್ಟಕ್ಕೇ ಎಲ್ಲವೂ ಆಗೇ ಹೋಯಿತೆಂದು ಬೀಗುವ ಅಗತ್ಯವೂ ಇಲ್ಲ, ಇದು ಹೊಸ ಕಟ್ಟಡದ ಉದ್ಘಾಟನೆ ಅಷ್ಟೇ. ಆಗಬೇಕಾದ್ದು ಇನ್ನೂ ಸಾಕಷ್ಟಿದೆ. ಆದರೂ ಶುರುವಾಯಿತಲ್ಲ ಎಂಬ ಸಮಾಧಾನ, ಸಂತೋಷ!

ಕಟ್ಟಡವೂ ತಯಾರಾಗಿ, ಸುಸಜ್ಜಿತ ಸಲಕರಣೆ, ವೈದ್ಯರೊಂದಿಗೆ ಪ್ರಾರಂಭಗೊಳ್ಳುವತ್ತ ಇನ್ನು ಮುಂದೆ ನಮ್ಮ ಚಿತ್ತ ಇದ್ದರೆ ಸಾಕೆ ?

-ಶಂಕರನಾರಾಯಣ ಭಟ್, ಮಾಡಗೇರಿ

ಕಿರುಸುದ್ದಿ

ಶಾಲೆಯ ಮೂಲ ಸೌಕರ್ಯ ಪರಿಶೀಲನೆ

ಶ್ರೀನಿವಾಸಪುರ: ಕೋಲಾರ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮೈಲಾರಪ್ಪ ಅವರು ಶ್ರೀನಿವಾಸಪುರ ಪಟ್ಟಣದ ಚಿಂತಾಮಣಿ ರಸ್ತೆಯಲ್ಲಿರುವ ಮೌಲಾನಾ ಆಜಾದ್ ಪಬ್ಲಿಕ್ ಶಾಲೆಗೆ ಭೇಟಿ ನೀಡಿ ಶಾಲೆಯ ಶೈಕ್ಷಣಿಕ ಹಾಗೂ ಮೂಲ ಸೌಕರ್ಯಗಳ ಪರಿಶೀಲನೆ ನಡೆಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಯನ್ನು ಅವರು ಸಮಗ್ರವಾಗಿ ಅವಲೋಕಿಸಿದರು. ಈ ವೇಳೆ ಸರ್ಕಾರದಿಂದ ನೂತನವಾಗಿ ಮಂಜೂರಾದ ಸ್ಮಾರ್ಟ್ ಕ್ಲಾಸ್ ಯೋಜನೆಯಲ್ಲಿ ಅಳವಡಿಸಲಾಗಿರುವ ಡಿಜಿಟಲ್ ಬೋರ್ಡ್‌ಗೆ ಸುಮಾರು ಎರಡುವರೆ ತಿಂಗಳ ಪ್ರಯೋಗಾತ್ಮಕ ಚಾಲನೆ ನೀಡಿದರು. ಶಿಕ್ಷಣಾಧಿಕಾರಿ ಮೈಲಾರಪ್ಪ ಮಾತನಾಡಿ, 2026–27ನೇ ಶೈಕ್ಷಣಿಕ ವರ್ಷದಿಂದ ಸರ್ಕಾರದ ವತಿಯಿಂದ ಉಚಿತವಾಗಿ ಪ್ರಥಮ ಪಿಯುಸಿ ಪಿಸಿಎಂಬಿ (ವಿಜ್ಞಾನ ವಿಭಾಗ) ತರಗತಿಗಳನ್ನು ಆರಂಭಿಸಲಾಗುವುದು ಎಂದು ತಿಳಿಸಿದರು. ಇದೇ ವೇಳೆ ನೀಟ್, ಕೆಸಿಇಟಿ ಹಾಗೂ ಜೆಇಇ ಸೇರಿದಂತೆ ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಯನ್ನು ಪ್ರಥಮ ಪಿಯುಸಿಯಿಂದಲೇ ಪ್ರಾರಂಭಿಸಲಾಗುತ್ತಿದೆ. ದಾಖಲಾತಿಗೆ ಶೀಘ್ರದಲ್ಲೇ ಅರ್ಜಿಗಳನ್ನು ಆಹ್ವಾನಿಸಲಾಗುವುದು ಎಂದು ಮಾಹಿತಿ ನೀಡಿದರು. ಪ್ರಧಾನಮಂತ್ರಿ ಹೊಸ 15 ಅಂಶಗಳ ಕಾರ್ಯಕ್ರಮದ ಜಿಲ್ಲಾ ಸದಸ್ಯ ಶಬ್ಬೀರ್‌ಅಹ್ಮದ್, ಮುಖ್ಯ ಶಿಕ್ಷಕಿ ಅರುಣ, ಶಾಲೆಯ ಎಲ್ಲಾ ಶಿಕ್ಷಕರು ಹಾಗೂ ಪೋಷಕರು ಉಪಸ್ಥಿತರಿದ್ದರು.

ವೇಮಗಲ್- ಕುರುಗಲ್ ಪಪಂ ಆಶ್ರಯ ಸಮಿತಿ ಸಭೆ

ಕೋಲಾರ: ಯಾವುದೇ ವ್ಯಕ್ತಿಗೆ ಸಮಾಜ ಸೇವೆ ಮಾಡಲು, ಜನಪರ ಕಾರ್ಯ ಮಾಡಲು ಅವಕಾಶಗಳು ಸಿಗುವುದು ಬಲು ವಿರಳ, ಇಂತಹ ಪರಿಸ್ಥಿತಿಯಲ್ಲಿ ಪ್ರಮುಖ ಅಧಿಕಾರ ಸ್ಥಾನ ಸಿಕ್ಕಾಗ ಅದರ ಸದುಪಯೋಗ ಮಾಡಿಕೊಂಡು ಜನರ ಮನ ಗೆಲ್ಲಬೇಕು, ದ್ವೇಷ, ಜಗಳ, ಕೋಪ, ಇವೆಲ್ಲವೂ ಕ್ಷಣಿಕ ಜನ ಸೇವೆ ಶಾಶ್ವತ ಎಂದು ಶಾಸಕ ಕೊತ್ತೂರು ಮಂಜುನಾಥ್ ತಿಳಿಸಿದರು. ವೇಮಗಲ್ – ಕುರುಗಲ್ ಪಟ್ಟಣ ಪಂಚಾಯಿತಿಗೆ ಆಶ್ರಯ ಸಮಿತಿ ರಚನೆಯಾದ ನಂತರ ಮೊಟ್ಟ ಮೊದಲ ಬಾರಿಗೆ ಶಾಸಕ ಕೊತ್ತೂರು ಮಂಜುನಾಥ್ ಅಧ್ಯಕ್ಷತೆಯಲ್ಲಿ, ಪಪಂ ಅಧ್ಯಕ್ಷೆ ಅನುಷಾ ಮುನಿರಾಜು ನೇತೃತ್ವದಲ್ಲಿ ಸಭೆ ಆಯೋಜಿಸಲಾಗಿತ್ತು. ಮೊಟ್ಟಮೊದಲ ಬಾರಿ ಸಭೆಗೆ ಆಗಮಿಸಿದ ಆಶ್ರಯ ಸಮಿತಿ ಸದಸ್ಯರಾದ ವೇಣುನಹಳ್ಳಿ ನಾಗೇಶ್, ಬೆಟ್ಟಹೊಸಪುರ ಜಗದೀಶ್, ವೇಮಗಲ್ ಮಂಜುನಾಥ್, ಅಮ್ರೀನ್ ಬಾನು, ರವರನ್ನು ಪಪಂ ವತಿಯಿಂದ ಸ್ವಾಗತಿಸಿ, ಸನ್ಮಾನಿಸಿದರು. ಅಧಿಕಾರ ಸಿಕ್ಕ ಮಾತ್ರ ಸುಮ್ಮನೆ ಕುರುವುದು ಮುಖ್ಯವಲ್ಲ, ತಮಗೆ ಸಿಕ್ಕಿದ ಅಧಿಕಾರದ ಅವಧಿಯಲ್ಲಿ ಏನಾದರೂ ಒಂದು ಸಾಧನೆ ಮಾಡಿ, ಜನರು ನೆನಪಿಸಿಕೊಳ್ಳುವಂತಹ ಕೆಲಸ ಮಾಡಿ ಎಂದು ಆಶ್ರಯ ಸಮಿತಿ ಸದಸ್ಯರಿಗೆ ಶಾಸಕ ಕೊತ್ತೂರು ಮಂಜುನಾಥ್ ಕಿವಿ ಮಾತು ಹೇಳಿದರು. ಪಪಂ ಅಧ್ಯಕ್ಷೆ ಅನುಷಾ ಮುನಿರಾಜು, ಉಪ ತಹಶೀಲ್ದಾರ್ ಹೇಮಲತಾ, ರಾಜಸ್ವ ನಿರೀಕ್ಷಕರಾದ ಮಂಜುನಾಥ್, ಗ್ರಾಮ ಲೆಕ್ಕಾಧಿಕಾರಿಗಳು ಉಪಸ್ಥಿತರಿದ್ದರು.

ಕಾನೂನು ಬದ್ಧವಾಗಿ ಪರಿಹಾರ ನೀಡಲಿ

ಕೋಲಾರ: ತಾಲೂಕಿನ ನರಸಾಪುರದ ದ್ವಿಪಥ ರಸ್ತೆಯಲ್ಲಿ ಡಾಂಬರೀಕರಣಕ್ಕೆ ಕಾನೂನುಬದ್ಧವಾಗಿ ನೋಟಿಸ್ ನೀಡಿ ಪರಿಹಾರ ನೀಡಿದರೆ ಮಾತ್ರ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಳಿಸಲವಕಾಶ ಮಾಡಿಕೊಡಲಾಗುವುದು ಎಂದು ಎಪಿಎಂಸಿ ಮಾಜಿ ಅಧ್ಯಕ್ಷೆ ಕುರ್ಕಿ ರಾಜೇಶ್ವರಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ನಮ್ಮ ಆಸ್ತಿ ಮೇಲೆ ಆರೋಪ ಮಾಡಿ ಖಾತೆ ರದ್ದು ಮಾಡಿ ಜಾಗ ತೆಗೆದುಕೊಂಡಿದ್ದಾರೆ. ಏಕಾಏಕಿ ಕೆಲಸ ಮಾಡಲು ಮುಂದಾದರು. ಬಲವಂತವಾಗಿ ಜಾಗ ತೆಗೆದುಕೊಳ್ಳಲು ಮುಂದಾದರು.

ಕಾರು ಅಪಘಾತ : ಮೂವರಿಗೆ ಗಾಯ

ದಾಬಸ್ ಪೇಟೆ: ಚಾಲಕನ ನಿಯಂತ್ರಣ ತಪ್ಪಿದ ಕಾರು ರಾಷ್ಟ್ರೀಯಹೆದ್ದಾರಿ 48ರ ದಾಬಸ್‌ಪೇಟೆ ಹತ್ತಿರದ ಅಂಚೆಮನೆ ಬಳಿ ಹಳ್ಳಕ್ಕೆ ಬಿದ್ದು ವಿದ್ಯುತ್ ಕಂಬಕ್ಕೆ ತಾಗಿ ನಿಂತಿರುವ ಘಟನೆ ಶನಿವಾರ ಮಧ್ಯಾಹ್ನ ನಡೆದಿದೆ. ಕಾರಿನಲ್ಲಿದ್ದ ಮೂವರಿಗೆ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಾರು ಬೆಂಗಳೂರು ಕಡೆಯಿಂದ ವೇಗವಾಗಿ ತುಮಕೂರು ಕಡೆ ಬರುತ್ತಿದ್ದಾಗ ಬೈಕ್ ಅಡ್ಡ ಬಂದ ಪರಿಣಾಮ ಕಾರು ಬೈಕ್‌ಗೆ ಡಿಕ್ಕಿ ತಪ್ಪಿಸಲು ಹಠಾತ್ ಬ್ರೇಕ್ ಹಾಕಿದ್ದರಿಂದ ಘಟನೆ ನಡೆದಿದೆ ಎಂದು ಸ್ಥಳೀಯರು ಹೇಳಿದರು. ಘಟನೆ ನಡೆಯುತ್ತಿದ್ದಂತೆ ಬೈಕ್ ಸವಾರ ಸ್ಥಳದಿಂದ ಪರಾರಿಯಾಗಿದ್ದಾನೆ. ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದ್ದರೆ ತೀವ್ರ ತರಹದ ಪರಿಣಾಮ ಆಗುತಿತ್ತು . ಅದೃಷ್ಟವಶಾತ್ ಕಾರಿನಲ್ಲಿರುವವರು ಸಾವಿನಿಂದ ಬಚಾವಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದರು. ಘಟನೆ ಸಂಬಂಧ ನೆಲಮಂಗಲ ಸಂಚಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ತನಿಖೆ ನಡೆಸುತ್ತಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರಿನ ಕಸ ಗ್ರಾಮೀಣ ಭಾಗಕ್ಕೆ ನಿರಂತರ ಸಾಗಣೆ | ನರಕಯಾತನೆಯಲ್ಲಿ ಹಳ್ಳಿಗರ ಜೀವನ

ಕಸ ವಿಲೇಗೆ ವೈಜ್ಞಾನಿಕ ಪರಿಹಾರಕ್ಕೆ ಚಿಂತಿಸಲಿ

ಪ್ರದೀಪ್ ದೊಡ್ಡಬಳ್ಳಾಪುರ

ದೊಡ್ಡಬಳ್ಳಾಪುರ: ಕಸದ ಸಮಸ್ಯೆ ಬೆಂಗಳೂರಿನಷ್ಟೇ ಗ್ರಾಮಾಂತರ ಜಿಲ್ಲೆಯನ್ನೂ ಕಾಡುತ್ತಿದೆ. ಕಳೆದ ಹತ್ತು ವರ್ಷಕ್ಕೆ ಹೋಲಿಕೆ ಮಾಡಿದರೆ ಇಂದು ಸಾಕಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ. ಎಲ್ಲೆಡೆ ಕಸ ವಿಲೇವಾರಿ ಸಮಸ್ಯೆ ಕಾಡುತ್ತಿದೆ. ನಾಗರಿಕರು ಕಸ ವಿಲೇವಾರಿ ಮತ್ತು ಘಟಕದ ನಿರ್ವಹಣೆ ಕುರಿತು ನಿತ್ಯವೂ ಪ್ರತಿಭಟನೆ, ವಿರೋಧಗಳು ನಡೆಯುತ್ತಲೇ ಇದೆ.

ಇತ್ತೀಚೆಗೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾದ ಮೇಲೆ ಕಸ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ವಿವಿಧ ಯೋಜನೆಗಳನ್ನು ಜಾರಿಗೆ ತರಲು ಮುಂದಾಗಿದೆ. ಆದರೂ ಕೂಡ ವಿಳಂಬವಾಗುತ್ತಿದೆ. ತಂತ್ರಜ್ಞಾನ ಬಳಸಿಕೊಂಡು ಕಸ ವಿಲೇವಾರಿ ಮತ್ತು ಕಸದಿಂದ ವಿದ್ಯುತ್ ಸೇರಿದಂತೆ ವಿವಿಧ ಆಯಾಮದಲ್ಲಿ ಉಪಯುಕ್ತಗೊಳಿಸಬಹುದಾದ ಚಿಂತನೆಗಳು ನಿರಂತರವಾಗಿ ಅಧಿಕಾರಿಗಳು, ಸಚಿವರುಗಳ ಮಟ್ಟದಲ್ಲೂ ಚಿಂತನೆ ಮುಂದುವರೆದಿದೆ. ಕಳೆದ 20 ವರ್ಷದಿಂದಲು ರಾಜ್ಯದಲ್ಲಿ ಆಳ್ವಿಕೆ ನಡೆಸುತ್ತಿರುವ ಬಿಜೆಪಿ, ಕಾಂಗ್ರೆಸ್ ಸರಕಾರಗಳು ನಡೆಸಿದ ಪ್ರಯತ್ನಗಳು ಸಮರ್ಪಕವಾಗಿಲ್ಲ, ಕಸ ವಿಲೇವಾರಿಗೆ ಕೈಗೊಂಡ ನಿರ್ಧಾರಗಳು ಅವೈಜ್ಞಾನಿಕವಾದ ಕಾರಣ ಕಸ ನಿರ್ವಹಣೆಯಲ್ಲಿ ವಿಫಲವಾದವು. ಇತ್ತೀಚಿಗೆ ಗ್ರಾಮೀಣ ಭಾಗದಲ್ಲಿ ಕಸವನ್ನು ಸುರಿದು ಬರಲಾಗುತ್ತಿದೆ.



ದೊಡ್ಡಬಳ್ಳಾಪುರ ಸುತ್ತಮುತ್ತ ಕಲುಷಿತ ವಾತಾವರಣ

ಪ್ರತಿದಿನ ಬೆಂಗಳೂರಿನಲ್ಲಿ ಸಂಗ್ರಹವಾದ ನೂರಾರು ಟನ್ ಕಸವನ್ನು ದೊಡ್ಡಬಳ್ಳಾಪುರ ಸೇರಿದಂತೆ ಸಮೀಪದ ಗ್ರಾಮಗಳ ಬಳಿ ಕಸವನ್ನು ವಿಲೇವಾರಿ ಮಾಡಲಾಗುತ್ತಿದೆ. ದೊಡ್ಡಬಳ್ಳಾಪುರ ತಾಲೂಕಿನ ಭಕ್ತರಹಳ್ಳಿ, ಸಕ್ಕರೆ ಗೊಲ್ಲಹಳ್ಳಿ , ಹುಲಿಕುಂಟೆ, ಆರೂಡಿ, ಸಾಸಲು ಗ್ರಾಮ ಪಂಚಾಯತಿ ಭಾಗದ ನೀರು, ಗಾಳಿ, ಮಣ್ಣು ಪರಿಸರ ವಿಷಮಯವಾಗಿದೆ. ದನ, ಕರು, ಮೇಕೆ, ಕುರಿಯಂತಹ ಸಾಕುಪ್ರಾಣಿ, ಹಣ್ಣು ತರಕಾರಿಯನ್ನು ಖರೀದಿ ಮಾಡಲು ಜನ ಭಯಪಡುವ ಸ್ಥಿತಿ ನಿರ್ಮಾಣವಾಗಿದೆ.

ಕಸದಿಂದ ಜೈವಿಕ ಗೊಬ್ಬರ ತಯಾರಿಕೆ

ಬೆಂಗಳೂರು ನಗರ ಹಾಗೂ ಬೆಂಗಳೂರು ಸುತ್ತಮುತ್ತಲ ಕಸದ ಸಮಸ್ಯೆಗೆ ಅಂತ್ಯ ಹಾಡಲು ಜಿಬಿಎ ವ್ಯಾಪ್ತಿಯ ವಾರ್ಡ್‌ಗಳ ಸ್ಥಳೀಯವಾಗಿ ಕಸವನ್ನು ವಿಲೇವಾರಿ ಮಾಡಲಾಗುತ್ತಿದೆ. ಈ ಕಸವನ್ನು ಆಯಾ ಭಾಗದಲ್ಲೇ ವಿದ್ಯುತ್ , ಜೈವಿಕ ಗೊಬ್ಬರ ತಯಾರು ಮಾಡಲು ನಾವು ಸಿದ್ಧರಿದ್ದೇವೆ ಎಂದು ಗ್ಲೋಬಲ್ ಗ್ರೀನ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿ ತಿಳಿಸಿದೆ. ಒಟ್ಟಾರೆ, ಸ್ಥಳೀಯವಾಗಿ ಕಸವನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಿದರೆ ಮಾತ್ರ ಕಸದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ಕೂಡಲೇ ರಾಜ್ಯ ಸರ್ಕಾರ ಸಂಬಂಧಪಟ್ಟ ಅಧಿಕಾರಿಗಳು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಮುಂದೆ ಬಂದಿರುವ ಕಂಪನಿಗಳಿಗೆ ಮುಕ್ತ ಅವಕಾಶ ನೀಡಿದರೆ ಕಸದ ಸಮಸ್ಯೆಗೆ ತಾರ್ಕಿಕ ಅಂತ್ಯವಾಡಬಹುದಾಗಿದೆ.

ವೈಜ್ಞಾನಿಕ ವಿಲೇವಾರಿ ಸಮಸ್ಯೆಗೆ ಪರಿಹಾರ

ಜಿಬಿಎ ನೂತನ 240 ವಾರ್ಡ್‌ಗಳಲ್ಲಿ, ಈಗಾಗಲೇ ವಿಭಾಗವಾಗಿರುವ 5 ಪಾಲಿಕೆಯ ವ್ಯಾಪ್ತಿಯಲ್ಲಿ ಕಸ ವಿಲೇವಾರಿ ಮಾಡಲು ಗ್ಲೋಬಲ್ ಗ್ರೀನ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ಕಂಪನಿ ಆಸಕ್ತಿ ವಹಿಸಿ ಮುಂದೆ ಬಂದಿದೆ. ವೈಜ್ಞಾನಿಕವಾಗಿ ಕಸವನ್ನು ವಿದ್ಯುತ್ ಹಾಗೂ ಜೈವಿಕ ಗೊಬ್ಬರ ತಯಾರು ಮಾಡುವುದರಿಂದ ಕಸ ಸಂಗ್ರಹಣೆ , ಸಾಗಾಣಿಕೆ ವೆಚ್ಚ ಕಡಿಮೆ ಯಾಗಲಿದೆ. ಇದಕ್ಕೆ ರಾಜ್ಯ ಸರ್ಕಾರ ಆಸಕ್ತಿ ವಹಿಸಿ ಅವಕಾಶ ನೀಡಬೇಕು.

> ನಮ್ಮ ದೊಡ್ಡಬಳ್ಳಾಪುರ ತಾಲೂಕಿನ ಎಂಎಸ್‌ಜಿಪಿ ಕಸದ ಘಟಕವನ್ನು ಸಂಪೂರ್ಣವಾಗಿ ಮುಚ್ಚಲು. ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಅನೇಕ ಬಾರಿ ಮನವಿ ಮಾಡಿದ್ದರೂ ಸಮಸ್ಯೆ ಬಗೆಹರಿಸಿಲ್ಲ. ಈಗಾಗಲೇ ಕಾನೂನಾತ್ಮಕವಾಗಿ ಹೋರಾಟ ಮಾಡುತ್ತಿದ್ದೇನೆ. ಕಾನೂನಿನ ಮೂಲಕವೇ ಈ ಸಮಸ್ಯೆ ಅಂತ್ಯಗೊಳ್ಳುತ್ತದೆ.
> ■ ಧೀರಜ್ ಮುನಿರಾಜ್, ಶಾಸಕ

ದಂಧೆಯಾಗಿ ಮಾರ್ಪಟ್ಟ ಕಸ

ಅಮೇರಿಕಾ, ರಷ್ಯಾ, ಚೀನಾ ದೇಶದಲ್ಲಿ ಕಸವನ್ನು ಆಯಾ ಭಾಗದಲ್ಲಿ ವೈಜ್ಞಾನಿಕವಾಗಿ ಸಂಸ್ಕರಣೆ ಮಾಡುವ ಮೂಲಕ ವಿಲೇವಾರಿ ಮಾಡುವರೆಂಬ ಮಾಹಿತಿ ಇದೆ. ನಮ್ಮ ಬೆಂಗಳೂರು ಕಸವನ್ನು ಮಾತ್ರ ಪ್ರತಿದಿನ ಲಾರಿಯಲ್ಲಿ ಅದನ್ನು 50 ರಿಂದ 100 ಕಿ.ಮೀ. ದೂರು ಊರಿನ ಬಳಿಗೆ ಹೋಗಿ ಸುರಿದು ಬರುವರು.




ಗ್ರಾಮಗಳ ಸ್ಥಿತಿ ಆಯೋಮಯ

ಬಹುತೇಕ ಗ್ರಾಮಗಳ ಜನರ ಬದುಕು ದುಸ್ತರವಾಗಿದೆ ಸಂಬಂಧ ಪಟ್ಟ ಇಲಾಖೆಯ ಸಚಿವರು, ಅಧಿಕಾರಿಗಳು , ರಾಜಕೀಯ ನಾಯಕರು ಕೇವಲ ತಮ್ಮ ಬೇಳೆ ಬೇಯಿಸಿಕೊಳ್ಳಲು ಕಣ್ಣು ಒರೆಸುವ ಭರವಸೆ ಪ್ರತಿಭಟನೆ ನಾಟಕ ಮಾಡಿದ್ದು ಅಷ್ಟೇ. ಆದರೆ, ಸಮಸ್ಯೆ ಮಾತ್ರ ಇಂದಿಗೂ ಬಗೆಹರಿದಿಲ್ಲ.

ಶನೈಶ್ಚರಸ್ವಾಮಿಗೆ ಬೆಣ್ಣೆ ಅಲಂಕಾರ

ತಾವರೆಕೆರೆ: ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದ ಶ್ರೀ ರಾಮಾವಧೂತರ ಆಶ್ರಮದಲ್ಲಿರುವ ಶ್ರೀ ಅಭಯ ಶನೈಶ್ಚರ ಸ್ವಾಮಿ ದೇವರ ಅರ್ಚಕರಾದ ಸುನೀಲ್ ಶಾಸ್ತ್ರಿ ಅವರು ಮಾಘ ಮಾಸದ ಶನಿವಾರ ಪ್ರಯುಕ್ತ ಮೂರ್ತಿಗೆ ಹೂವು ಜತೆಗೆ ಬೆಣ್ಣೆ ಅಲಂಕಾರ ಮಾಡಿರುವುದು. ದೇವರ ದರ್ಶನ ಪಡೆಯಲು ಬಂದ ಭಕ್ತರಿಗೆ ತೀರ್ಥ ಪ್ರಸಾದದ ಜತೆಗೆ ಅನ್ನದಾಸೋಹ ವಿತರಿಸಲಾಗಿತ್ತು.



ದೇಶಪ್ರೇಮಕ್ಕೆ ಮತ್ತೊಂದು ಹೆಸರೇ ಛತ್ರಪತಿ ಶಿವಾಜಿ



ವಿಜಯಪುರ: ಶಿವಾಜಿ ದೇಶಕಂಡ ಮಹಾನ್ ಹೋರಾಟಗಾರರು. ಶೌರ್ಯದಿಂದ ಸೇನೆಯನ್ನು ಮುನ್ನಡೆಸಿ ಹಿಂದವೀಸಾಮ್ರಾಜ್ಯಕ್ಕೆಹೋರಾಟ ಮಾಡಿದವರೆಂದು ಬಜರಂಗದಳ ಕೋಲಾರ ವಿಭಾಗ ಸಂಯೋಜಕ ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಟೌನ್ ಹಾಲ್ ಸರ್ಕಲ್ ನಲ್ಲಿ ವಿಶ್ವ ಹಿಂದು ಪರಿಷದ್, ಬಜರಂಗದಳದಿಂದ ಛತ್ರಪತಿ ಶಿವಾಜಿ ಜಯಂತಿ ಕಾರ್ಯಕ್ರಮದಲ್ಲಿ ಶಿವಾಜಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಮಾತನಾಡಿ, ಹಿಂದು ಸಮಾಜಕ್ಕೆ ಛತ್ರಪತಿ ಶಿವಾಜಿ ಅವರ ಕೊಡುಗೆ ಅಪಾರವಾಗಿದೆ. ಯುದ್ಧತಂತ್ರಗಾರಿಕೆ, ಸಾಹಸ, ರಾಷ್ಟ್ರ ಭಕ್ತಿಯನ್ನು ಮೈಗೂಡಿಸಿಕೊಂಡಿದ್ದ ಮಹಾರಾಜರಾಗಿದ್ದರು ಎಂದರು. ಶಿವಾಜಿ ಮಹಾರಾಜರ ಬದುಕು, ಜೀವನ ಚರಿತ್ರೆ ಅತ್ಯಮೂಲ್ಯವಾಗಿದೆ. ಅವರು ತಾಯಿ, ಗುರು ಹಾಗೂ ದೈವಿ ಭಕ್ತಿಗೆ ಹೆಚ್ಚು ಮನ್ನಣೆ ನೀಡುತ್ತಿದ್ದರು. ದೇಶದ ಇತಿಹಾಸದಲ್ಲಿ ಕೆಲವೇ ಕೆಲವರಿಗೆ ದೇವರು ಪ್ರತ್ಯಕ್ಷರಾಗಿದ್ದಾರೆ ಎಂದು ಹೇಳಲಾಗುವುದು. 'ಅದರಲ್ಲಿ ಶಿವಾಜಿ ಮಹಾರಾಜರಿಗೆ ತುಳಜಾ ಭವಾನಿ ಪ್ರತ್ಯಕ್ಷಳಾಗಿ ಧರ್ಮ ಹಾಗೂ ನೀತಿ ವಿರುದ್ಧ ನಡೆದುಕೊಳ್ಳುವವರನ್ನು ಸದೆಬಡಿಗೆ ತರಲು ಖಡ್ಗವನ್ನು ನೀಡಿದ್ದರು ಎಂದರು.

ಧರ್ಮ ರಹಿತವಾಗಿ ನಡೆದುಕೊಳ್ಳುವವರನ್ನು ಧರ್ಮದ ದಾರಿಗೆ ಕರೆತರುವ ವ್ಯಕ್ತಿತ್ವ ಅವರಲ್ಲಿತ್ತು. ಶಿವಾಜಿ ಈ ದೇಶ ಕಂಡ ಪರಮ ದೇಶ ಭಕ್ತ. ಶಿವಾಜಿಯ ವ್ಯಕ್ತಿತ್ವ ನಮಗೆಲ್ಲ ಮಾದರಿಯಾಗಿದ್ದಾರೆ. ತಂತ್ರಗಾರಿಕೆಯಿಂದ ಧರ್ಮ ಮತ್ತು ದೇಶವನ್ನು ರಕ್ಷಿಸಿಕೊಳ್ಳುವ ಕೆಲಸವನ್ನು ನಾವೆಲ್ಲ ಕೂಡಿ ಮಾಡಬೇಕಾಗಿದೆ ಎಂದರು. ಬಜರಂಗದಳ ಕಾರ್ಯಕರ್ತರಾದ ಮುನಿಕೃಷ್ಣ, ನರಸಿಂಹ, ಮಹೇಶ್, ರಾಹುಲ್, ರಘು, ದೇವರಾಜ್,ಮನೋಜ್, ನಿರಂಜನ್ ಇದ್ದರು.

ವಾರ್ಡ್‌ಗಳಿಗೆ 2 ಕೋಟಿ ರೂ. ಸಮಾನ ಹಂಚಿಕೆ

ವಿಜಯಪುರ: ಪುರಸಭೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಮೀಸಲಿಟ್ಟಿದ್ದ ಎರಡು ಕೋಟಿ ರೂ. ಅನುದಾನವನ್ನು ಪಟ್ಟಣದ 23 ವಾರ್ಡ್‌ಗಳ ತುರ್ತು ಅಭಿವೃದ್ಧಿ ಕಾಮಗಾರಿಗಳಿಗೆ ಸಮಾನ ಹಂಚಿಕೆ ಮಾಡಲು ಪುರಸಭೆಯ ವಿಶೇಷ ಸಾಮಾನ್ಯ ಸಭೆಯಲ್ಲಿ ಒಮ್ಮತ ಅಭಿಪ್ರಾಯ ಮೂಡಿಬಂತು.

ಪುರಸಭಾ ಅಧ್ಯಕ್ಷೆ ಭವ್ಯಾಮಹೇಶ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಕಟ್ಟಡ ನಿರ್ಮಾಣಕ್ಕೆ ಬಳಕೆಯಾಗದೆ ಅನುದಾನವನ್ನು ಸರ್ಕಾರಕ್ಕೆ ವಾಪಸ್ ಹೋಗುವುದನ್ನು ತಡೆಯಲು, ಸದಸ್ಯರ ಒತ್ತಾಯದ ಮೇರೆಗೆ ನಿರ್ಧಾರ ಕೈಗೊಳ್ಳಲಾಯಿತು.

ಸದಸ್ಯ ಎಂ.ಸತೀಶ್ ಕುಮಾರ್ ಮಾತನಾಡಿ, ಕಳೆದ ನಾಲ್ಕು ವರ್ಷದ ಹಿಂದೆ ಪುರಸಭೆಗೆ ಸ್ವಂತ ಕಟ್ಟಡಕ್ಕಾಗಿ ಎರಡು ಕೋಟಿ ರೂ. ಅನುದಾನ ಮೀಸಲಿಡಲಾಗಿತ್ತು. ವಿವಿಧ ಕಾರಣದಿಂದ ಕಾಮಗಾರಿ ಆರಂಭಗೊಂಡಿರಲಿಲ್ಲ, ಮಾರ್ಚ್ 31ರೊಳಗೆ ಈ ಅನುದಾನ ಬಳಕೆ ಮಾಡದಿದ್ದರೆ ಸರ್ಕಾರಕ್ಕೆ ವಾಪಸ್ ಆಗಲಿದೆ. ಪಟ್ಟಣದ 23 ವಾರ್ಡ್‌ಗಳಲ್ಲಿ ರಸ್ತೆ, ಚರಂಡಿ, ಬೀದಿದೀಪ, ಪೈಪ್‌ಲೈನ್ ಸೇರಿದಂತೆ ವಿವಿಧ ಕಾಮಗಾರಿಗಳು ಬಾಕಿ ಇರುವುದರಿಂದ ಅನುದಾನವನ್ನು ಎಲ್ಲಾ ವಾರ್ಡ್‌ಗಳಿಗೆ ಸಮಾನವಾಗಿ ಹಂಚಿ ತುರ್ತು ಕೆಲಸವನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಇದಕ್ಕೆ ಸದಸ್ಯರಾದ ನಂದಕುಮಾರ್ ಮಾತಿಗೆ, ರಾಜಣ್ಣ, ಮಂಜುಳಾ ಸೇರಿದಂತೆ ಎಲ್ಲ ಸದಸ್ಯರು ಧ್ವನಿಗೂಡಿಸಿದರು.



ವಿಜಯಪುರ ಪುರಸಭೆ ಸಾಮಾನ್ಯ ಸಭೆ: 23 ವಾರ್ಡ್‌ಗಳ ತುರ್ತು ಅಭಿವೃದ್ಧಿಗೆ ನಿರ್ಧಾರ

ಬಯಪ ವತಿಯಿಂದ ನೂತನ ಪುರಸಭೆ ಕಟ್ಟಡಕ್ಕೆ 6 ಕೋಟಿ ರೂ.ಅನುದಾನ ಬರುವ ನಿರೀಕ್ಷೆ ಇರುವುದರಿಂದ ಸದ್ಯದ ಹಣವನ್ನು ವಾರ್ಡ್‌ಗಳಿಗೆ ಬಳಸಲು ಸಭೆ ಒಪ್ಪಿಗೆ ನೀಡಿತು. ಸಭೆಯಲ್ಲಿ ಸಾರ್ವಜನಿಕರ ಇ-ಖಾತೆ ವಿಳಂಬದ ಬಗ್ಗೆ ಸದಸ್ಯರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಆನ್ ಲೈನ್‌ನಲ್ಲಿ ಕಂದಾಯ ಪಾವತಿಸಿದರೂ ಪುರಸಭೆ ದಾಖಲೆಯಲ್ಲಿ ಅಪ್‌ಡೇಟ್ ಆಗುತ್ತಿಲ್ಲ ಎಂದು ಸದಸ್ಯ ನಂದಕುಮಾರ್ ದೂರಿದರು. ವಿಭಾಗ ಪತ್ರ ಹಾಗೂ ಪೌತಿ ಖಾತೆಗಳು ವರ್ಷವಾದರೂ ಆಗುತ್ತಿಲ್ಲ ಎಂದು ಸದಸ್ಯ ಬೈರೇಗೌಡ ಆರೋಪಿಸಿದರು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಆದರೂ ಕೆಲಸ ಆರಂಭಿಸದ ಗುತ್ತಿಗೆದಾರರ ವಿರುದ್ಧ ಸದಸ್ಯ ಹನಿಫುಲ್ಲಾ ಕಿಡಿಕಾರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಾಧಿಕಾರಿ ಸತ್ಯನಾರಾಯಣ, ಕೆಲಸ ಮಾಡದ ಗುತ್ತಿಗೆದಾರರಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅವರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು ಎಂದರು.

ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿಸಲು ತುರ್ತು ಕ್ರಮಕೈಗೊಳ್ಳಲು ಹಾಗೂ ಒಳಚರಂಡಿ, ಬೀದಿದೀಪ ಸೇರಿದಂತೆ ಇತರೆ ಕಾಮಗಾರಿಗಳ ಶಾಶ್ವತ ಪರಿಹಾರಕ್ಕಾಗಿ ಸದಸ್ಯರ ನಿಯೋಗ ಒಟ್ಟಾಗಿ ಸಚಿವ ಕೆ.ಎಚ್.ಮುನಿಯಪ್ಪ ಅವರೊಂದಿಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯಲ್ಲಿ ಉಪಾಧ್ಯಕ್ಷೆ ತಾಜುನ್ನಿಸ ಮಹಬೂಬ್ ಪಾಷಾ, ಸದಸ್ಯರಾದ ಸಿ. ನಾರಾಯಣಸ್ವಾಮಿ, ರವಿ, ಕೇಶವಪ್ಪ, ರಾಜೇಶ್ವರಿ ಭಾಸ್ಕರ್, ಮಂಜುಳಾ ಮುನಿರಾಜು, ಕವಿತಾ ಮುನಿ ಅಂಜಿನಪ್ಪ, ಆಯಿಷಾ, ಎಂ.ನಾರಾಯಣಸ್ವಾಮಿ, ಇಕ್ಬಾಲ್, ಶಿಲ್ಪಾ ಅಜಿತ್, ಶ್ರೀರಾಮ್ ಉಪಸ್ಥಿತರಿದ್ದರು.

ಯಶಪ್ರಧಾಗೆ ಹೊಯ್ಸಳ, ಚೆನ್ನಮ್ಮ ಪ್ರಶಸ್ತಿ ಪ್ರದಾನ

ದೊಡ್ಡಬಳ್ಳಾಪುರ: ಕರ್ನಾಟಕ ಸರ್ಕಾರದಿಂದ ನಡೆಯುವ 2025 –2026ರ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಜಿಲ್ಲಾಮಟ್ಟದ ಪ್ರತಿಷ್ಠಿತ ಪ್ರಶಸ್ತಿಯಾದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಇಲ್ಲಿನ ಉದಯೋನ್ಮುಖಿ ಯೋಗ ಪ್ರತಿಭೆ ನವ್ಯ ಕಲ್ಚರಲ್ ಅಂಡ್ ಸ್ಪೋರ್ಟ್ಸ್ ಅಕಾಡೆಮಿಯ ವಿದ್ಯಾರ್ಥಿನಿ ಎಸ್ .ಎಂ .ಯಶಪ್ರಧಾ ಅವರನ್ನು ಕ್ರೀಡಾ ಕ್ಷೇತ್ರದಲ್ಲಿ ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ ಮತ್ತು ಹತ್ತು ಸಾವಿರ ರೂ. ನಗದು ಬಹುಮಾನ ನೀಡಿ ಗೌರವಿಸಲಾಯಿತು. ಬಹುಮಾನ ಪಡೆದ ವಿದ್ಯಾರ್ಥಿಗೆ ಶಾಸಕ ಧೀರಜ್ ಮುನಿರಾಜ್ , ಕನ್ನಡ ಜಾಗೃತಿ ವೇದಿಕೆಯ ಜಿಲ್ಲಾಧ್ಯಕ್ಷ ನಾಗರಾಜ , ತಾಲೂಕು ಅಧ್ಯಕ್ಷ ಶಶಿಧರ್ ಮತ್ತು ಯೋಗ ಶಿಕ್ಷಕಿ ನವ್ಯಾಶ್ರೀ ಎಂ.ಕೆ ಅಭಿನಂದಿಸಿದರು.



ಗುಣಮಟ್ಟದ ಸೌಕರ್ಯ ಕಲ್ಪಿಸಲಿ



ದೇವನಹಳ್ಳಿ: ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಮೂಲ ಸೌಕರ್ಯಗಳ ಜತೆಗೆ ಓದಲು ಒಳ್ಳೆಯ ವಾತಾವರಣ ಕಲ್ಪಿಸಲಾಗಿದೆ ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯಲ್ಲಿ ದೇವನಹಳ್ಳಿ ಟೌನ್ ನಲ್ಲಿ ಏಳು ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ನೂತನ ಕಟ್ಟಡದ ಉದ್ಘಾಟನೆಯನ್ನು ಸಚಿವರು ನೆರವೇರಿಸಿದ ಬಳಿಕ ಮಾತನಾಡಿ, ಈ ಹಿಂದೆ ನಮ್ಮ ಸರ್ಕಾರ ಹೋಬಳಿಗೊಂದು ವಸತಿ ಶಾಲೆ ಸ್ಥಾಪಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಈಗ ಎಲ್ಲಾ ಹೋಬಳಿಗಳಲ್ಲಿ ವಸತಿ ಶಾಲೆ ಜತೆಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗಿದೆಂದರು. ಹಾಸ್ಟೆಲ್ ಗುಣಮಟ್ಟದ ಆಹಾರ, ಊಟ ಒದಗಿಸಲಾಗುವುದು, ಜತೆಗೆ ಪರಿಣಿತ ಶಿಕ್ಷಕರು ಕೂಡ ಹಾಸ್ಟೆಲ್‌ಗೆ ಬಂದು ಬೋಧನೆ ಮಾಡುವರು. ಹಾಗಾಗಿ ಇಲ್ಲಿ ಉತ್ತಮ ವಿದ್ಯಾಭ್ಯಾಸ ಪಡೆದುಕೊಳ್ಳುವ ಮೂಲಕ ಉನ್ನತ ಹುದ್ದೆಯನ್ನು ಅಲಂಕರಿಸಿ ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ಜಿಪಂ ಸಿಇಒ ಡಾ.ಕೆ.ಎನ್. ಅನುರಾಧಾ, ಗ್ಯಾರಂಟಿ ಸಮಿತಿ ಜಿಲ್ಲಾಧ್ಯಕ್ಷ ರಾಜಣ್ಣ, ಬಯಪ ಅಧ್ಯಕ್ಷ ಶಾಂತಕುಮಾರ್, ಅಧ್ಯಕ್ಷ ಜಗನ್ನಾಥ, ಪುರಸಭೆ ಅಧ್ಯಕ್ಷ ಮುನಿಕೃಷ್ಣ, ಜಿಪಂ ಮಾಜಿ ಸದಸ್ಯ ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪ್ರೇಮಾ, ಸಹಾಯಕ ನಿರ್ದೇಶಕರಾದ ಓಲೇಕಾರ್, ತಹಶೀಲ್ದಾರ್ ಅನಿಲ್, ಇಒ ಶ್ರೀನಾಥ್‌ಗೌಡ ಸೇರಿದಂತೆ ಅಧಿಕಾರಿಗಳು, ಸ್ಥಳೀಯರಿದ್ದರು.

ವೃಷಭಾವತಿ ನೀರಿನ ಪೈಪ್‌ಲೈನ್ ಗುಂಡಿ ಮುಚ್ಚಲು ನಾಗರಿಕರ ಆಗ್ರಹ

ಸಾರ್ವಜನಿಕರ ಜೀವಕ್ಕೆ ಅಪಾಯ ನಿಶ್ಚಿತ

ದಾಬಸ್ ಪೇಟೆ: ನೆಲಮಂಗಲ ತಾಲೂಕಿನ ಸೋಂಪುರ ಹೋಬಳಿಯ ಕರಿಮಣ್ಣೆ ಹಾಗೂ ತಟ್ಟೆಕೆರೆ ಗ್ರಾಮಗಳ ನಡುವಿನ ರಸ್ತೆ ಪಕ್ಕದಲ್ಲಿ ವೃಷಭಾವತಿ ನೀರಿನ ಪೈಪ್ ಲೈನ್ ಕಾಮಗಾರಿಗೆ ತೆಗೆದಿರುವ ಗುಂಡಿಯನ್ನು ಸರಿಯಾಗಿ ಮುಚ್ಚದೆ ಅಪಾಯಕ್ಕೆ ಆಹ್ವಾನ ನೀಡುವಂತಿದೆ.

ತಟ್ಟೆಕೆರೆ ಗ್ರಾಮದ ಮೂಲಕ ಕರಿಮಣ್ಣೆ ಗ್ರಾಮದ ಕಡೆ ಪೈಪ್ ಲೈನ್ ಅಳವಡಿಸಲು ಕಾಮಗಾರಿ ನಡೆಸುವ ವೇಳೆ ನವೆಂಬರ್ 29 ರಂದು ಗ್ರಾಮಸ್ಥರು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದಾಗಿ ಪೈಪ್‌ಲೈನ್ ಕಾಮಗಾರಿಯನ್ನು ನಿಲ್ಲಿಸಲಾಗಿತ್ತು. ಸಾರ್ವಜನಿಕರ ವಿರೋಧದನಡುವೆಗುತ್ತಿಗೆದಾರರುಕಾಮಗಾರಿನಿಲ್ಲಿಸಿ ಹೋಗಿದ್ದಾರೆ. ಆದರೆ, ಕಾಮಗಾರಿಗೆ ತೆಗೆದ ಗುಂಡಿಯನ್ನು ಸರಿಯಾಗಿ ಮುಚ್ಚದೇ ಹೋಗಿರುವುದರಿಂದ ಅಪಾಯ ಆಗಬಹುದು ಎನ್ನುವುದು ಗ್ರಾಮಸ್ಥರ ಆರೋಪವಾಘಿದೆ.

ಮಧುಗಿರಿ ರಸ್ತೆಯಿಂದ ಎಲೆಕ್ಯಾತನಹಳ್ಳಿ ರಸ್ತೆಯನ್ನು ಈ ರಸ್ತೆ ಸಂಪರ್ಕಿಸುತ್ತದೆ. ನಿತ್ಯ ಶಾಲಾ ವಾಹನ, ಸೋಂಪುರ ಕೈಗಾರಿಕಾ ಪ್ರದೇಶಕ್ಕೆ ಹೋಗುವ ಕಾರ್ಮಿಕರು, ಸುತ್ತಮುತ್ತಲ ಗ್ರಾಮದ ಜನರು ಈ ರಸ್ತೆ ಮೂಲಕ ಸಂಚಾರ ಮಾಡುವರು. ರಸ್ತೆ ತಿರುವಿನಲ್ಲೇ ಸುಮಾರು ಹತ್ತು ಅಡಿ ಆಳದ ಗುಂಡಿ ತೆಗೆದು ಬಿಡಲಾಗಿದೆ ಎಂದು ಗ್ರಾಮದ ಸತೀಶ್‌ದೂರುವರು.



ಗುಂಡಿ ಜತೆಗೆ ಕಬ್ಬಿಣದ ಪೈಪ್ ಹಾಕಲಾಗಿದೆ. ಒಂದು ವೇಳೆ ವಾಹನಗಳು ರಸ್ತೆಯಲ್ಲಿ ಚಲಿಸುವಾಗ ಆಕಸ್ಮಿಕವಾಗಿ ಆಯ ತಪ್ಪಿ ಕೆಳಕ್ಕೆ ಬಿದ್ದರೆ ಅನಾಹುತ ಖಂಡಿತ ಎಂದು ಗ್ರಾಮಸ್ಥರ ಆತಂಕವಾಗಿದೆ.

ಈ ರಸ್ತೆಯಲ್ಲಿ ನಾನು ನಿಡವಂದದ ಹತ್ತಿರ ಇರುವ ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತೇನೆ. ತಿಂಗಳಿಂದ ಹೀಗೆ ಗುಂಡಿ ಇದೆ. ರಸ್ತೆ ಬದಿಗೆ ಇದ್ದರೂ ತಡೆಗೋಡೆ ಏನು ಇಲ್ಲ, ಎಚ್ಚರಿಕೆ ನಾಮಫಲಕವೂ ಇಲ್ಲ, ರಾತ್ರಿ ವೇಳೆ ಎಚ್ಚರಿಕೆ ತಪ್ಪಿದರೆ ಅನಾಹುತ ಆಗುತ್ತದೆ ಎಂದರು ಕಾರ್ಮಿಕ ಉಮೇಶ್ ಆರೋಪಿಸಿದರು.

ಗ್ರಾಮದ ಜನರು ಹೆಚ್ಚಾಗಿ ದನಕರು, ಕುರಿ, ಮೇಕೆ ಇದೇ ರಸ್ತೆಯಲ್ಲಿ ಸಾಗುವವು. ಈ ಸಂದರ್ಭದಲ್ಲಿ ಆಯಾತಪ್ಪಿ ಗುಂಡಿಗೆ ಬಿದ್ದರೆ ಕೈಕಾಲು ಮುರಿದುಕೊಳ್ಳುವ ಹಾಗೂ ಜೀವಕ್ಕೆ ಅಪಾಯ ಸಂಭವಿಸುವ ಸಾಧ್ಯತೆ ಇದೆ. ಈ ಅಪಘಾಯಕ್ಕೆ ಯಾರು ಹೊಣೆ ಎನ್ನುತ್ತಾರೆ ಗ್ರಾಮಸ್ಥರ ಪ್ರಶ್ನೆಯಾಗಿದೆ.

ಬಮುಲ್‌ನಿಂದ ವೈದ್ಯಕೀಯ ಪರಿಹಾರ ಚೆಕ್ ವಿತರಣೆ

ಹೈನುಗಾರರ ಹಿತರಕ್ಷಣೆಗೆ ಪ್ರಥಮ ಆದ್ಯತೆ

ಸೂಲಿಬೆಲೆ: ಸಹಕಾರ ಸಂಘಗಳಿಗೆ ಹಾಲು ಪೂರೈಕೆ ಮಾಡುತ್ತಿರುವ ಉತ್ಪಾದಕರ ಆರೋಗ್ಯ ರಕ್ಷಣೆಗೆ ಬಮುಲ್ ಆದ್ಯತೆ ಎಂದು ಬಮುಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡ ಹೇಳಿದರು

ಬೆಂಡಿಗಾನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಹೊಸಕೋಟೆ ತಾಲೂಕಿನ ವಿವಿಧ ಗ್ರಾಮದಲ್ಲಿ ಹಾಲು ಸರಬರಾಜು ಮಾಡುವ ಸಕ್ರಿಯ ಸದಸ್ಯರು ಹಾಗೂ ಅವರ ಅವಲಂಬಿತರಿಗೆ ವೈದ್ಯಕೀಯ ಪರಿಹಾರ ಚೆಕ್ ವಿತರಿಸಿ ಅವರು ಮಾತನಾಡಿ, 2025–26ನೇ ಸಾಲಿನಲ್ಲಿ ಹೈನುಗಾರಿಕೆ ಮಾಡುತ್ತಿರುವ ಕುಟುಂಬದ ಸದಸ್ಯರು ಅನಾರೋಗ್ಯಕ್ಕೆ ತುತ್ತಾಗಿ ಚಿಕಿತ್ಸೆ ಪಡೆದುಕೊಂಡಿದ್ದರೆ ಅಂತಹ ಸದಸ್ಯರು ಹಾಗೂ ಅವರ ಅವಲಂಬಿತ ಕುಟುಂಬ ಸದಸ್ಯರಿಗೆ ವೈದ್ಯಕೀಯ ಪರಿಹಾರ ಚೆಕ್‌ಗಳನ್ನು ನೀಡಲಾಗುತ್ತಿದೆ ಎಂದರು. ನಕ್ಕನಹಳ್ಳಿ, ನಡುವತ್ತಿ, ಬೆಟ್ಟಹಳ್ಳಿ, ಬಿಸನಹಳ್ಳಿ, ಕಮ್ಮಸಂದ್ರ, ಬಿಸನಹಳ್ಳಿ, ಎಂ.ಸತ್ಯವಾರ ಗ್ರಾಮದಲ್ಲಿ, ಅನಾರೋಗ್ಯಕ್ಕೆ ತುತ್ತಾಗಿ ಚಿಕಿತ್ಸೆ ಪಡೆದ 8 ಮಂದಿಗೆ ಚಿಕಿತ್ಸೆಗೆ ಅನುಗುಣವಾಗಿ 15, 20, 25 ಸಾವಿರದಂತೆ ಒಟ್ಟು 8ಮಂದಿಗೆ 2 ಲಕ್ಷ ರೂ. ಹಾಗೂ ಮರಣ ಹೊಂದಿದ ಸದಸ್ಯರ ನಾಮಿನಿಗೆ ಪರಿಹಾರ ಚೆಕ್ ನೀಡಲಾಗಿದೆ ಎಂದರು. ಹೊಸಕೋಟೆ ಶಿಬಿರ ಉಪವ್ಯವಸ್ಥಾಪಕ ಶ್ರೀರಾಮ್ ಮಾತನಾಡಿ, ಬಮುಲ್ ಟ್ರಸ್ಟ್‌ನಿಂದ ಹಾಲು ಉತ್ಪಾದಕರಿಗೆ ಬಮುಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡರ ಅನುದಾನದಲ್ಲಿ ವರ್ಷಕ್ಕೆ ಸುಮಾರು 15 ಲಕ್ಷದಷ್ಟು ವೈದ್ಯಕೀಯ ವೆಚ್ಚದ ಪರಿಹಾರವನ್ನು ಹೊಸಕೋಟೆ ತಾಲೂಕಿನ ಹಾಲು ಉತ್ಪಾದಕರಿಗೆ ನೀಡುತ್ತಿದ್ದೇವೆಂದು ಹೇಳಿದರು.



ಒಳರೋಗಿಯಾಗಿ ಹಾಲು ಉತ್ಪಾದಕರು ಚಿಕಿತ್ಸೆಯನ್ನು ಪಡೆದುಕೊಂಡಿದ್ದರೆ ಅಂಥವರಿಗೆ ವೈದ್ಯಕೀಯ ನೆರವು ನೀಡಲಾಗುತ್ತಿದೆ. ಉತ್ಪಾದಕರು ಗುಣಮಟ್ಟ ಹಾಲನ್ನು ಪೂರೈಕೆ ಮಾಡಬೇಕು. ಇದರಿಂದ ಆರ್ಥಿಕವಾಗಿ ಉತ್ಪಾದಕರಿಗೂ ಹಾಗೂ ಒಕ್ಕೂಟಕ್ಕೂ ಅನುಕೂಲವಾಗಲಿದೆ ಎಂದರು.

ಬೆಂಗಳೂರು ಹಾಲು ಒಕ್ಕೂಟದ ವೈದ್ಯ ಡಾ.ಸಂತೋಷ್ ಕುಮಾರ್ ಡಿ.ಎಂ. ಮಾತನಾಡಿ, ಫೆಬ್ರವರಿಯಿಂದ ಮಾರ್ಚ್ ತಿಂಗಳಲ್ಲಿ ಹಾಲು ಉತ್ಪಾದನೆಯ ಗುಣಮಟ್ಟದಲ್ಲಿ ಕಡಿಮೆಯಾಗುತ್ತಿದೆ. ಈ ತಿಂಗಳಲ್ಲಿ ಗುಣಮಟ್ಟವನ್ನು ಹೈನುಗಾರರು ಕಾಪಾಡುವತ್ತ ಗಮನಹರಿಸಬೇಕೆಂದು ಸಲಹೆ ನೀಡಿದರು.

ಕಿರುಸುದ್ದಿ

ಪಟಾಲಮ್ಮ ದೇವಿಗೆ ಹೂವಿನ ಅಲಂಕಾರ

• ತಾವರೆಕೆರೆ: ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದೇವತೆ ಶ್ರೀ ಪಟಾಲಮ್ಮ ದೇವಿ ಹಾಗೂ ಮುತ್ಯಾಲಮ್ಮ ದೇವಿಗೆ ಮಾಘ ಮಾಸದ ಶುಕ್ರವಾರದ ಪ್ರಯುಕ್ತ ದೇವಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆಯಿಂದಲೇ ಭಕ್ತರು ದೇವಾಲಯಕ್ಕೆ ಬಂದು ದೇವರ ದರ್ಶನ ಪಡೆದರು.



ಮಹಾಮಂಗಳಾರತಿ ನಂತರ ತೀರ್ಥ ಪ್ರಸಾದವನ್ನು ಅರ್ಚಕ ಪ್ರವೀಣ್ ಅವರು ವಿತರಣೆ ಮಾಡಿದರು.

ಸುಗಮ ವಾಹನ ಸಂಚಾರಕ್ಕೆ ವ್ಯವಸ್ಥೆ



• ಬೆಂಗಳೂರು: ಪ್ರಯಾಣಿಕರಿಗೆ ಹಾಗೂ ಸುಗಮ ಸಂಚಾರ ವ್ಯವಸ್ಥೆಗೆ ಅನುಕೂಲವಾಗುವಂತೆ, ಕೆ-ರೈಡ್ ರೈಲ್ವೆ ಕಲ್ಪಿಸಿದ ಬಾಣಸವಾಡಿ ರೈಲ್ವೆ ನಿಲ್ದಾಣದ ಸಮೀಪದ ಅಂಡರ್‌ಪಾಸ್ ಬಳಿ ಮತ್ತೊಂದು ಅಂಡರ್ ಪಾಸ್ ನಿರ್ಮಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಸಚಿವ ಕೆ.ಜೆ.ಜಾರ್ಜ್ ಚರ್ಚಿಸಿ ಸ್ಥಳ ಪರಿಶೀಲಿಸಿದರು.

ಬಾಣಸವಾಡಿ ರೈಲ್ವೆ ಅಂಡರ್ ಪಾಸ್ ಕಾಮಗಾರಿ ಪರಿಶೀಲನೆ

ಸುಗಮ ವಾಹನ ಸಂಚಾರಕ್ಕೆ ಬೇಕಾದ ವ್ಯವಸ್ಥೆಯಲ್ಲಿ ಯಾವುದೇ ತೊಡಕುಗಳು ಆಗಬಾರದು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವಿವಿಧ ಕಾಮಗಾರಿಗಳ ಪರಿಶೀಲನೆ ನಡೆಸಿದ ಅವರು, ಕಾಲಮಿತಿಯಲಿ ಅಭಿವೃದ್ಧಿಕಾರ್ಯಗಳನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ಸ್ಥಳೀಯರ ಸಮಸ್ಯೆಗಳನ್ನು ಆಲಿಸಿದರಲ್ಲದೆ, ಅಭಿವೃದ್ಧಿ ಕಾಮಗಾರಿಗಳು ಮುಂದಗತಿಯಲ್ಲಿ ನಡೆಯುತ್ತಿರುವ ಬಗ್ಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಬಾಣಸವಾಡಿ ಓಎಂಬಿಆರ್ ಲೇಔಟ್, ಕಲ್ಯಾಣನಗರ, ಎಚ್‌ಆರ್‌ಬಿಆರ್ ಲೇಔಟ್ ಹಾಗೂ ಲಿಂಗರಾಜಪುರಂನ ಕೆಎಸ್‌ಎಫ್‌ಸಿ ಲೇಔಟ್‌ನ ಪೀನಿಯಲ್ ಚರ್ಚ್ ಭಾಗಗಳಲ್ಲಿ ನಿರ್ಮಿಸಲಾಗುತ್ತಿರುವ ಚರಂಡಿ ವ್ಯವಸ್ಥೆಯ ನಿರ್ಮಾಣ ಕಾಮಗಾರಿ, ಕಮ್ಮನಹಳ್ಳಿಯ ಎ.ಕೆ.ಕಾಲೋನಿಗೆ ಹೊಂದಿಕೊಂಡಿರುವ ಸೇನಾ ವಿಹಾರ ಆವರಣ, ಜಾನಕಿರಾಮ ಲೇಔಟ್ ಹಾಗೂ ಎಂ.ಎಸ್.ನಗರದ ಜೈಭಾರತ್ ಕಾಲೊನಿಯಲ್ಲಿ ಒಳಚರಂಡಿ ವ್ಯವಸ್ಥೆ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿ ಅಗತ್ಯ ಸಲಹೆ ನೀಡಿದರು. ಕಮ್ಮನಹಳ್ಳಿಯ ಡಾ.ರಾಜ್ ಕುಮಾರ್ ಪಾರ್ಕ್ ಹಾಗೂ ಅದರ ಸುತ್ತಮುತ್ತಲಿನ ರಸ್ತೆಗಳ ಉನ್ನತೀಕರಣ ಕಾಮಗಾರಿ ಪರಿಶೀಲಿಸಿ, ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಿ. ಪಾರ್ಕ್‌ನಲ್ಲಿ ವಾಕಿಂಗ್ ಪಾಥ್, ಓಪನ್ ಜಿಮ್ ಮತ್ತು ಶೌಚಾಲಯ ವ್ಯವಸ್ಥೆ, ಮ್ಯಾಪಿಂಗ್ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ರೂಪಿಸಬೇಕೆಂದು ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ನಿರ್ದೇಶನ ನೀಡಿದರು.

ಪ್ರತಿಭಟನಾನಿರತ ಬಿಜೆಪಿ ಕಾರ್ಯಕರ್ತರ ಬಂಧನ | ಪೊಲೀಸ್ ಬಂದೋಬಸ್ತ್

ಕಾಂಗ್ರೆಸ್ ಕಚೇರಿಗೆ ಬಿಜೆಪಿ ಮುತ್ತಿಗೆ

• ಮೈಸೂರು: ನವದೆಹಲಿಯಲ್ಲಿ ಅಂತಾರಾಷ್ಟ್ರೀಯ ಎಐ ಸಮ್ಮೇಳನ ನಡೆಯುತ್ತಿದ್ದ ಸಂದರ್ಭದಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಕೆಲವು ಮುಖಂಡರು, ಕಾರ್ಯಕರ್ತರು ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ದೇಶದ ಹಿರಿಮೆಗೆ ಮಸಿ ಬಳಿಯುವ ಪ್ರಯತ್ನ ನಡೆಸಿರುವುದನ್ನು ಖಂಡಿಸಿ, ಶನಿವಾರ ನಗರದಲ್ಲಿರುವ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಹೊರಟ ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರನ್ನು ಪೊಲೀಸರು ಬಂಧಿಸಿದ ಘಟನೆ ನಡೆಯಿತು.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು. ದೇಶಕ್ಕೆ ಅವಮಾನ ಎಸಗಿದವರ ವಿರುದ್ಧ ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

ವಿಶ್ವಮಟ್ಟದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚುತ್ತಿರುವ ಸಂದರ್ಭದಲ್ಲಿ, ಎಐ ಶೃಂಗಸಭೆಯಂತಹ ದೊಡ್ಡ ಜಾಗತಿಕ ವೇದಿಕೆಯಲ್ಲಿ, ಪ್ರತಿಭಟನೆ ಸೋಗಿನಲ್ಲಿ ಕಾಂಗ್ರೆಸ್ ಪಕ್ಷ ತನ್ನ ಹತಾಶೆ, ಅಸಹನೆಯನ್ನು, ಕೆಟ್ಟ ರೀತಿಯಲ್ಲಿ ಬೀದಿಗೆ ತಂದಿದೆ. ಅಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸುವ ಮೂಲಕ ಜಾಗತಿಕವಾಗಿ ದೇಶಕ್ಕೆ ಅವಮಾನ ಮಾಡುವ ಕೆಲಸ ಮಾಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ವಿದೇಶಿ ಗಣ್ಯರ ಮುಂದೆ ಅಸಭ್ಯ ಪ್ರದರ್ಶನದ ಮೂಲಕ ದೇಶದ ಘನತೆಗೆ ಕುಂದುಂಟು ಮಾಡುವ ಕಾಂಗ್ರೆಸ್ಸಿನ ಅಸಭ್ಯ ನಡೆ ಅತ್ಯಂತ ಖಂಡನೀಯ. ಎಲ್ಲಕಡೆ ಕುಸಿಯುತ್ತಿರುವ ಕಾಂಗ್ರೆಸ್ ತಲೆ ಕೆಟ್ಟು, ದೇಶಕ್ಕಿಂತ ಸ್ವಾರ್ಥವೇ ಲೇಸು ಎನ್ನುವ ದುಸ್ಥಿತಿ ಬಂದಿದೆ ಎಂದು ಕಿಡಿಕಾರಿದರು. ದೇಶದ ಜನತೆ ಕಾಂಗ್ರೆಸ್ ಪಕ್ಷದ ಈ ಅಸಭ್ಯ ವರ್ತನೆಯನ್ನು ಎಂದಿಗೂ ಕ್ಷಮಿಸರು.ಅಧಿಕಾರ ಲಾಲಸೆ, ಅಸಹನೆಗಳಿಂದ ದೇಶದ ಘನತೆಗೆ ಮಸಿ ಬಳಿವ ಕಾಂಗ್ರೆಸ್ಸಿನ ಇಂತಹ ಅಸಭ್ಯ ಕುತಂತ್ರಗಳಿಗೆ ಧಿಕ್ಕಾರ ಎಂದು ಘೋಷಣೆಗಳನ್ನು ಕೂಗಿದರು.





> ▸▸ ಪ್ರತಿಭಟನೆ ಸೋಗಿನಲ್ಲಿ ಕಾಂಗ್ರೆಸ್ ತನ್ನ ಹತಾಶೆ, ಅಸಹನೆಯನ್ನು ಬೀದಿಗೆ ತಂದಿದೆ.
>
> ▸▸ ದೇಶದ ಜನತೆ ಕಾಂಗ್ರೆಸ್ ನ ಈ ಅಸಹ್ಯ ವರ್ತನೆಯನ್ನು ಎಂದಿಗೂ ಕ್ಷಮಿಸಲಾರರು.

ಬಳಿಕ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಲು ಹೊರಟರು. ಈ ವೇಳೆ ಮೆಟ್ರೋಪೋಲ್ ವೃತ್ತದ ಬಳಿಯೇ ಕಾರ್ಯಕರ್ತರನ್ನು ತಡೆದ ಪೊಲೀಸರು ಬಂಧಿಸಿದರು.

ಈ ವೇಳೆ ಪೊಲೀಸರು ಹಾಗೂ ಕಾರ್ಯಕರ್ತರ ನಡುವೆ ತಳ್ಳಾಟ,ನೂಕಾಟ ನಡೆಯಿತು. ನಂತರ,ಪೊಲೀಸರು ಎಲ್ಲರನ್ನು ವಾಹನಕ್ಕೆ ತುಂಬಿ ಕರೆದೊಯ್ದರು.

ಮೈಸೂರು ನಗರ ಮತ್ತು ಗ್ರಾಮಾಂತರ ಬಿಜೆಪಿ ಯುವ ಮೋರ್ಚಾದ ವತಿಯಿಂದ ನಡೆದ ಈ ಪ್ರತಿಭಟನೆಯಲ್ಲಿ ಯುವ ಮೋರ್ಚಾ ನಗರ ಅಧ್ಯಕ್ಷ ಆರ್. ರಾಕೇಶ್ ಗೌಡ, ಗ್ರಾಮಾಂತರ ಅಧ್ಯಕ್ಷ ಅರ್ಜುನ್ ಪಾರ್ಥ, ಪ್ರಧಾನ ಕಾರ್ಯದರ್ಶಿಗಳಾದ ಡಿ ಲೋಹಿತ್, ಆರ್ ಸಚಿನ್, ಬಿ ಎಂ ರಘು, ಸೋಮಸುಂದರ್, ರುದ್ರ ಮೂರ್ತಿ, ಜಿಪಂ ಮಾಜಿ ಸದಸ್ಯ ಬಿ.ಎನ್.ಸದಾನಂದ, ರಾಜ್ಯ ಕಾರ್ಯಕಾರಿಣಿ ಸದಸ್ಯ ಗಿರಿಧರ್, ನಗರ ಉಪಾಧ್ಯಕ್ಷ ಅರುಣ್ ಕುಮಾರ್ ಗೌಡ, ಶ್ರೀಕಂಠಮೂರ್ತಿ, ಮಂಡಲ ಅಧ್ಯಕ್ಷ ಪೈಲ್ವಾನ್ ಟಿ. ರವಿ, ಸ್ಮಾರ್ಟ್ ಮಂಜು, ವೇಲು, ಸಂತೋಷ್, ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಪರೀಕ್ಷಿತ್ ರಾಜೇ ಅರಸ್ ,ಜೋಗಿ ಮಂಜು, ಕೃಷ್ಣಮೂರ್ತಿ, ರಾವತ್ ಡಾನ್, ಬದರೀಶ್, ಯುವ ಮೋರ್ಚಾ ಪದಾಧಿಕಾರಿಗಳಾದ ಉಮೇಶ್, ಪುನೀತ್, ಮನು, ಚೇತನ್, ಕಿರಣ್‌ನಾಯ್ಡು, ನವೀನ್‌ಶೆಟ್ಟಿ, ಧನರಾಜ್, ಅರ್ಜುನ್, ಮೋಹನ್, ನವೀನ್ ರಾಜ್, ಕಾರ್ತಿಕ್ ಮರಿಯಪ್ಪ, ನಾಣಿಗೌಡ ಮತ್ತಿತರರಿದ್ದರು. ಬಂಧಿತರನ್ನು ಕೆಲಕಾಲದ ನಂತರ ಬಿಡುಗಡೆ ಮಾಡಲಾಯಿತು.

ಚಿಕ್ಕಗೊಂಡನಹಳ್ಳಿ ತೋಟದಲ್ಲಿ ಚಿರತೆ ಸೆರೆ

• ಚನ್ನರಾಯಪಟ್ಟಣ: ತಾಲ್ಲೂಕಿನ ಚಿಕ್ಕಗೊಂಡನಹಳ್ಳಿ ಗ್ರಾಮದ ತೋಟವೊಂದರಲ್ಲಿ ಅರಣ್ಯ ಇಲಾಖೆಯು ಇರಿಸಿದ್ದ ಬೋನಿನಲ್ಲಿ ಗಂಡು ಚಿರತೆ ಸೆರೆಯಾಗಿದೆ.

ಕಳೆದ 2 ತಿಂಗಳಿಂದ ಗ್ರಾಮದ ಸುತ್ತಮುತ್ತಲ ಹಳ್ಳ- ಕೊಳ್ಳದ ಪ್ರದೇಶ ಹಾಗೂ ತೋಟದ ಸಾಲಿನಲ್ಲಿ ಚಿರತೆ ಕಾಣಿಸಿಕೊಳ್ಳುತ್ತಿದ್ದು ಸ್ಥಳೀಯರಲ್ಲಿ ಆತಂಕ ಮನೆ ಮಾಡಿತ್ತು.

ಜಾನುವಾರುಗಳು ಹಾಗೂ ಬೀದಿ ನಾಯಿಗಳ ಮೇಲೆ ಚಿರತೆ ದಾಳಿ ಮಾಡುತ್ತಿದ್ದು ಈ ಬಗ್ಗೆ ಸ್ಥಳೀಯರು ದೂರು ನೀಡಿದ ಹಿನ್ನೆಲೆಯಲ್ಲಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪ್ರಭು ಎಂಬುವವರ ತೋಟದಲ್ಲಿ ಕಳೆದ 2 ದಿನಗಳ ಹಿಂದೆ ಬೋನುವೊಂದನ್ನು ಅಳವಡಿಸಿದ್ದರು.

ಗುರುವಾರ ಮಧ್ಯರಾತ್ರಿ ಸುಮಾರಿನಲ್ಲಿ ಆಹಾರ ಹುಡುಕುತ್ತಾ ಬಂದಿರುವ 3 ವರ್ಷದ ಗಂಡು ಚಿರತೆಯು ಕಡೆಗೂ ಬೋನಿಗೆ ಬಿದ್ದಿದೆ. ಸೂಕ್ತ ಯೋಜನೆ ರೂಪಿಸಿ ಚಿರತೆಯನ್ನು ಬೋನಿಗೆ ಬೀಳಿಸುವಲ್ಲಿ ಅರಣ್ಯ ಇಲಾಖೆಯವರು ಯಶಸ್ವಿಯಾಗಿದ್ದು, ಇದರಿಂದ ಗ್ರಾಮಸ್ಥರು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ.



2012ರಿಂದ ಈವರೆಗೆ ಇದೆ ವ್ಯಾಪ್ತಿಯಲ್ಲಿ ಒಟ್ಟು ನಾಲ್ಕು ಚಿರತೆಗಳನ್ನು ಸೆರೆ ಹಿಡಿದಂತಾಗಿದೆ. ಸದ್ಯಕ್ಕೆ ಇಲಾಖೆಯಲ್ಲಿ 9 ಬೋನುಗಳಿವೆ. ದೂರು ಬಂದ ವ್ಯಾಪ್ತಿ ಯಲ್ಲಿ ಅಳವಡಿಸಲಾಗಿದೆ. ಕಾರ್ಯಾಚರಣೆಯಲ್ಲಿ ಇಲಾಖೆಯ ಜೊತೆಗೆ ಸಾರ್ವಜನಿಕರ ಸಹಕಾರ ಮುಖ್ಯ ಎಂದು ವಲಯ ಅರಣ್ಯ ಅಧಿಕಾರಿ ಖಲಂದರ್ ತಿಳಿಸಿದರು.

ವಿದ್ಯಾರ್ಥಿಗಳಿಗೆ ಕಲಾ ತರಬೇತಿ ಸಮಾರೋಪ ಸಮಾರಂಭ

ಕಲೆ-ಸಂಸ್ಕೃತಿ ಮೈಗೂಡಿಸಿಕೊಳ್ಳಲಿ

• ಮೈಸೂರು: ಸಂಗೀತ ನಾಟಕ, ಕ್ರೀಡೆ, ಇವುಗಳಿಗೆ ಯಾವುದೇ ಜಾತಿ ಬೇದ ಇಲ್ಲ, ಧರ್ಮಾತೀತವಾಗಿ ಎಲ್ಲವನ್ನು ಮೀರಿ ಬೆಳೆದು ಬಂದಿರುವಂತಹದ್ದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಬಿ.ರಂಗೇಗೌಡ ಹೇಳಿದರು.

ನಗರದ ಕಲಾಮಂದಿರದಲ್ಲಿ ಜಿಲ್ಲಾಡಳಿತ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉಪಯೋಜನೆಯಲ್ಲಿ ವಿದ್ಯಾರ್ಥಿಗಳ ನಿಲಯಗಳ ವಿದ್ಯಾರ್ಥಿಗಳಿಗೆ ಆಯೋಜಿಸಲಾಗಿದ್ದ ಕಲಾ ತರಬೇತಿ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಕಲೆ ಮತ್ತು ಸಂಸ್ಕೃತಿ ಮೈಗೂಡಿಸಿಕೊಂಡರೆ, ಅದು ಬದುಕನ್ನು ಸುಂದರವಾಗಿ ಕಟ್ಟಿಕೊಡುತ್ತದೆ. ಆ ಶಕ್ತಿ ಕಲೆಗೆ ಇದೆ ಎಂದರು.

ಕಲೆಯನ್ನು ಓದುವ ಜತೆಯಲ್ಲಿ ಕಲೆಯನ್ನು ಮೈಗೂಡಿಸಿಕೊಳ್ಳಲಿ, ಬಾಲ್ಯದಿಂದ ಪ್ರೌಢಾವಸ್ಥೆಗೆ ಬರುವ ಮಕ್ಕಳು ಮನಸ್ಸನ್ನು ಬೇರೆ ಕಡೆ ಚಂಚಲಗೊಳಿಸದೆ ಓದಿನ ಕಡೆ ಕೇಂದ್ರೀಕರಿಸಬೇಕು. ಯಾವುದೇ ಆಕರ್ಷಣೆಗೆ ಒಳಗಾಗಬೇಡಿ. ಒಳ್ಳೆಯ ಸಂಸ್ಕಾರ, ಸಂಸ್ಕೃತಿಯನ್ನು ಪ್ರತಿಯೊಂದು ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಅಳವಡಿಕೊಳ್ಳಬೇಕು ಎಂದು ಸಲಹೆ ನೀಡಿದರು.



ತರಬೇತುದಾರ ದೇವನಂದ ವರಪ್ರಸಾದ್ ಮಾತನಾಡಿ, ಜಾನಪದ ಕಲೆಯು ಒಬ್ಬರಿಂದ ಒಬ್ಬರು ಕೇಳಿ ಹಾಡುವುದರ ಮೂಲಕ ಬೆಳೆದು ಬಂದಿದೆ. ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕಲೆಯ ಬಗ್ಗೆ ತರಬೇತಿ ನೀಡಲು ಇಲಾಖೆ ಗಳು ಉತ್ತಮ ಕಾರ್ಯಕ್ರಮ ಆಯೋಜಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳಲಿ ಎಂದರು.

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸರಿಯಾದ ತರಬೇತಿ ಸಿಕ್ಕರೆ ಮಕ್ಕಳು ಮುಂದೆ ಬೆಳೆಯುತ್ತಾರೆ. ಕಲಾ ತರಬೇತಿಯಂತಹ ಕಾರ್ಯಕ್ರಮಗಳನ್ನು ಸದುಪಯೋಗ ಮಾಡಿಕೊಂಡರೆ, ಜೀವನದಲ್ಲಿ ಮುಂದೆ ಬರಲು ಸಹಾಯಕ ಆಗಲಿದೆ. ಕಲೆಗಳನ್ನು ಕಲಿತಾಗ ತನ್ನಲ್ಲಿನ ಚೈತನ್ಯ ಹೊರ ಬರುತ್ತದೆ ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನಿಲಯ ಪಾಲಕಿ ಮೋಹನ ಕುಮಾರಿ ಕೆ. ಎಸ್ ಉಪಸ್ಥಿತರಿದ್ದರು. ಇದೇ ವೇಳೆ ವಿದ್ಯಾರ್ಥಿಗಳು ವಿವಿಧ ನೃತ್ಯ ಪ್ರದರ್ಶನ ನೀಡಿದರು.

ರಂಗಭೂಮಿ ಶಿಕ್ಷಕರ ನೇಮಕ: ಸಿಎಂ

ಈ ಪ್ರಮಾಣದ ಸಿಬ್ಬಂದಿಗೆ ತಿಂಗಳಿಗೆ ಸುಮಾರು 50 ಕೋಟಿ ರೂ. ವೆಚ್ಚವಾಗಲಿದೆ. ಇದು ರಾಜ್ಯದ ಖಜಾನೆಗೆ ದೊಡ್ಡ ಹೊರೆಯಾಗಲಿದೆ ಎಂದು ಸರ್ಕಾರ ಹೇಳಿದೆ ಎಂದು ತಿಳಿದು ಬಂದಿದೆ.

ಪೌರಕಾರ್ಮಿಕರು ಮತ್ತು ಸ್ವಚ್ಛತಾ ಸಿಬ್ಬಂದಿಯನ್ನು ಹೊರತುಪಡಿಸಿ, ಐಎಎಸ್, ಕೆಎಎಸ್ ಸೇರಿದಂತೆ ವಿವಿಧ ವರ್ಗಗಳ ಅಂದರೆ ಗ್ರೂಪ್ ಎ, ಬಿ, ಸಿ,ಡಿ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿ ಸುಮಾರು 6,500 ಜನ ಅಗತ್ಯವಿದೆ ಎಂದು ಅಂದಾಜಿಸಲಾಗಿತ್ತು. ಆದರೆ, ಕೆಲ ಇಲಾಖೆಗಳು ಅಗತ್ಯಕ್ಕಿಂತ ಹೆಚ್ಚು ಸಿಬ್ಬಂದಿ ಬೇಡಿಕೆ ಇಟ್ಟಿರುವುದು ಕಂಡುಬಂದಿದ್ದು, ಈಗಿರುವ ಸಿಬ್ಬಂದಿಯನ್ನು ಸಮರ್ಪಕವಾಗಿ ಬಳಸಿದರೆ ಪ್ರಸ್ತಾವಿತ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿಮೆ ಮಾಡಬಹುದು ಎಂದು ಜಿಬಿಎ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಸಿಬ್ಬಂದಿ ಹಾಗೂ ಅಧಿಕಾರಿಗಳ ನೇಮಕಾತಿ ಪ್ರಸ್ತಾವನೆಯು ಸಚಿವರು, ಕಾನೂನು ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೇರಿದಂತೆ ಹಲವು ಹಂತಗಳನ್ನು ದಾಟಿದ ಬಳಿಕ ಅಂತಿಮವಾಗಿ ಹಣಕಾಸು ಇಲಾಖೆಯ ಅನುಮೋದನೆ ಪಡೆಯಬೇಕಿದೆ.ಆದರೆ ಸರ್ಕಾರ ಈಗಾಗಲೆ ಪ್ರಸ್ತಾವನೆಗೆ ಆಕ್ಷೇಪ ಎತ್ತಿದ್ದು,ಮುಂದಿನ ವಾರ ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಜಿಬಿಎ ತಿಳಿಸಿದೆ.

> ಪಾಲಿಕೆಯ ಎಲ್ಲಾ ವಿಧದ ಆದಾಯದ ಮೂಲಗಳಿಂದ ಸಂಗ್ರಹವಾಗುವ ಮೊತ್ತದ ಶೇ. 60 ರಷ್ಟು ಹಣವನ್ನು ಕೇವಲ ಅಧಿಕಾರಿ, ನೌಕರರ ವೇತನ,ಇಪಿಎಫ್,ಇಎಸ್ಐ,ಪಿಂಚಣಿಗಳಿಗೆಂದೇ ವಿನಿಯೋಗಿಸಬೇಕಾದ ಅನಿವಾರ್ಯ ಪರಿಸ್ಥಿತಿ ಉದ್ಭವವಾಗುತ್ತದೆ. ಇದರಿಂದ ಅಭಿವೃದ್ಧಿ ಕಾರ್ಯಗಳು, 17 ಇಲಾಖೆಗಳಿಗೆ ಸಂಬಂಧಿಸಿದ ನಿರ್ವಹಣೆ ಕಾರ್ಯಗಳಿಗೆ ಅಗತ್ಯವಿರುವ ಅನುದಾನಗಳನ್ನು ಕ್ರೋಢೀಕರಿಸಲು ಅಸಾಧ್ಯವಾಗುತ್ತದೆ.
> ■ **ಎನ್.ಆರ್. ರಮೇಶ್,** ಬಿಜೆಪಿ ನಾಯಕ

ಬೆಳ್ಳಂದೂರು ಮೆಟ್ರೊ ನಿಲ್ದಾಣ ನಾಮಕರಣ ಹಕ್ಕಿಗೆ ಒಪ್ಪಂದ

• **ಬೆಂಗಳೂರು:** ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತ ಮತ್ತು ಪ್ರೆಸ್ಟೀಜ್ ಗ್ರೂಪ್ ನಡುವೆ ಶನಿವಾರ ಹಂತ-2ಎ ಹೊರ ವರ್ತುಲ ರಸ್ತೆ ಕಾರಿಡಾರ್ ಬೆಳ್ಳಂದೂರು ಮೆಟ್ರೊ ನಿಲ್ದಾಣದ ನಾಮಕರಣ ಹಕ್ಕುಗಳ ಒಪ್ಪಂದಕ್ಕೆ ಸಹಿ ಹಾಕಿದೆ.



ಈ ಒಪ್ಪಂದದಂತೆ ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾದ ದಿನಾಂಕದಿಂದ 30 ವರ್ಷಗಳ ಕಾಲ ನಿಲ್ದಾಣವನ್ನು ಪ್ರೆಸ್ಟೀಜ್ ಬೆಳ್ಳಂದೂರು ಮೆಟ್ರೊ ನಿಲ್ದಾಣ ಎಂದು ಕರೆಯಲಾಗುತ್ತದೆ. ನಾಮಕರಣ ಹಕ್ಕುಗಳು ಮತ್ತು ಇತರೆ ಅನುಕೂಲಗಳಿಗೆ ಸಂಬಂಧಿಸಿದ ಒಪ್ಪಂದದ ಮೌಲ್ಯ 80 ಕೋಟಿ ರೂ. ಆಗಿದ್ದು, ಮೆಟ್ರೊ ನಿಲ್ದಾಣದಿಂದ ಅವರ ಆವರಣಕ್ಕೆ ಸಂಪರ್ಕಿಸುವ ವಿಶೇಷ ಪಾದಚಾರಿ ಮೇಲ್ಸೇತುವೆ ಆಯ್ಕೆ ಮಾಡಿದಲ್ಲಿ ಹೆಚ್ಚುವರಿ 10 ಕೋಟಿ ರೂ.ಪಾವತಿಸಬೇಕಾಗುತ್ತದೆ. ಇದರಿಂದ ಒಟ್ಟು ಸಹಭಾಗಿತ್ವದ ಮೌಲ್ಯ 190 ಕೋಟಿ ರೂ. ಆಗುತ್ತದೆ.

ಸಮ್ಮೇಳನ



ನಗರದ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯ ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನ-2026ರ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ ಚಂದ್ ಗೆಹ್ಲೋಟ್, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ. ಸುಧಾಕರ್ ಸೇರಿದಂತೆ ಅನೇಕ ವಿಶ್ವವಿದ್ಯಾಲಯಗಳ ಕುಲಪತಿಗಳು ಭಾಗವಹಿಸಿದ್ದರು.

ಏಪ್ರಿಲ್ ಮೂರನೇ ಭಾನುವಾರ ಬೃಹತ್ ಕಾರ್ಯಕ್ರಮ | ಪಾಲಿಕೆ ಕೆಡಿಪಿ ಸಭೆಯಲ್ಲಿ ಡಿಸಿಎಂ ಡಿಕೆಶಿ ಭಾಗಿ
10ಲಕ್ಷ ನಾಗರಿಕರಿಗೆ ಸ್ಥಳದಲ್ಲೇ ಇ-ಖಾತಾ

• **ಬೆಂಗಳೂರು:** ನಗರದ ಸುಮಾರು 10 ಲಕ್ಷ ನಾಗರಿಕರಿಗೆ ಒಂದೇ ದಿನ, ಒಂದೇ ಸ್ಥಳದಲ್ಲಿ ಇ-ಖಾತಾ ವಿತರಿಸುವ ಬೃಹತ್ ಕಾರ್ಯಕ್ರಮವನ್ನು ಏಪ್ರಿಲ್ 3ನೇ ಭಾನುವಾರ ಹಮ್ಮಿಕೊಳ್ಳಲಾಗುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಕೇಂದ್ರ ಕಚೇರಿಯಲ್ಲಿ ಜಿಬಿಎ ಮತ್ತು ಐದು ಪಾಲಿಕೆಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಜಿಬಿಎ ವ್ಯಾಪ್ತಿಯ ಆಸ್ತಿಗಳ ದಾಖಲೆಯನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಣಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಏಪ್ರಿಲ್ ಮೂರನೇ ವಾರದ ಭಾನುವಾರ ಸುಮಾರು 10 ಲಕ್ಷ ನಾಗರಿಕರಿಗೆ ಒಂದೇ ದಿನ, ಒಂದೇ ಸ್ಥಳದಲ್ಲಿ ಇ-ಖಾತಾ ವಿತರಿಸುವ ಬೃಹತ್ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು.

ರಸ್ತೆ ಕಾಮಗಾರಿ ಪೂರ್ಣಕ್ಕೆ ಏಪ್ರಿಲ್ ಗಡುವು: ಬೆಂಗಳೂರಿನ ರಸ್ತೆಗಳ ಸುಧಾರಣೆಗಾಗಿ ಒಟ್ಟು 2,671 ಕೋಟಿ ರೂ. ಅನುದಾನವನ್ನು ಮೀಸಲಿಡಲಾಗಿದೆ. ಏಪ್ರಿಲ್ ಅಂತ್ಯದೊಳಗೆ ನಗರದ ಎಲ್ಲಾ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಕಾಮಗಾರಿಗಳ ಗುಣಮಟ್ಟ ಮತ್ತು ಸ್ಥಳವನ್ನು ಪರಿಶೀಲಿಸಲು ಜಿಪಿಎಸ್ ಆಧಾರಿತ ತಂತ್ರಜ್ಞಾನ ಬಳಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಕಾಲುವೆಗಳ ಅಭಿವೃದ್ಧಿ: ವಿಶ್ವ ಬ್ಯಾಂಕ್ ನೆರವಿನೊಂದಿಗೆ 1,600 ಕೋಟಿ ರೂ. ವೆಚ್ಚದಲ್ಲಿ ರಾಜಕಾಲುವೆ ಮತ್ತು ಚರಂಡಿ ವ್ಯವಸ್ಥೆ ಸುಧಾರಣೆ ನಡೆಸಲಾಗುವುದು. ಬೀದಿ ಬದಿ ವ್ಯಾಪಾರಿಗಳ ನೆರವು ನೀಡುವ ನಿಟ್ಟಿನಲ್ಲಿ ಸುಮಾರು 30,000 ಫಲಾನುಭವಿಗಳಿಗೆ ತಳ್ಳುವ ಗಾಡಿ, ತ್ರೀ-ವೀಲರ್ ಮತ್ತು ಫೋರ್-ವೀಲರ್ ವಾಹನಗಳನ್ನು ವಿತರಿಸುವ ಮೂಲಕ ಫುಟ್‌ಪಾತ್ ಮುಕ್ತಗೊಳಿಸುವ ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ತೆರಿಗೆ ಬಾಕಿ: ನಗರದ ಪ್ರಮುಖ ವಾಣಿಜ್ಯ ಮಳಿಗೆಗಳು ಮತ್ತು ಕೆಲ ಪ್ರಭಾವಿ ವ್ಯಕ್ತಿಗಳು ಕೋಟ್ಯಂತರ ರೂಪಾಯಿ ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಸರ್ಕಾರ ಈಗಾಗಲೇ ಬಡ್ಡಿ ಮತ್ತು ದಂಡ ಮನ್ನಾ ಮಾಡಿ ತೆರಿಗೆ ಪಾವತಿಸಲು ಅವಕಾಶ ನೀಡಿದೆ. ಇದರ ಮೂಲಕ ಸುಮಾರು 1,200 ಕೋಟಿ ರೂಪಾಯಿ ತೆರಿಗೆ ಸಂಗ್ರಹವಾಗಿದೆ.ತೆರಿಗೆ ಕಟ್ಟದವರ ಆಸ್ತಿಗಳನ್ನು ಹರಾಜು ಹಾಕುವ ಪ್ರಕ್ರಿಯೆ ನಡೆಯುತ್ತಿದೆ. ಯಾರೇ ಪ್ರಭಾವಿಗಳಿದ್ದರೂ ತೆರಿಗೆ ಕಟ್ಟಲೇಬೇಕು, ಇದರಲ್ಲಿ ಮಾನವೀಯತೆ ಪ್ರಶ್ನೆಯಿಲ್ಲ ಎಂದು ಎಚ್ಚರಿಸಿದರು.

> ಬೆಂಗಳೂರಿನ ತ್ಯಾಜ್ಯ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನಗರದಿಂದ ಸುಮಾರು 40 ಕಿ.ಮೀ ವ್ಯಾಪ್ತಿಯಲ್ಲಿ ಗುಡ್ಡಗಾಡು ಪ್ರದೇಶಗಳ ಬಳಿ 100 ಎಕರೆ ಜಾಗ ಖರೀದಿಸಲು ಸರ್ಕಾರ ನಿರ್ಧರಿಸಿದೆ. ಜಮೀನು ನೀಡಲು ಸಿದ್ಧರಿರುವ ರೈತರು ಅಥವಾ ಭೂಮಾಲೀಕರು ಜಿಬಿಎ ಅಥವಾ ಜಿಲ್ಲಾಧಿಕಾರಿಗಳನ್ನು ಸಂಪರ್ಕಿಸಬಹುದು.
> ■ **ಡಿ.ಕೆ.ಶಿವಕುಮಾರ್,** ಉಪ ಮುಖ್ಯಮಂತ್ರಿ



- ಬೆಂಗಳೂರು ಬಿಸಿನೆಸ್ ಕಾರಿಡಾರ್ ಯೋಜನೆಗಾಗಿ ಆಸ್ತಿ ಕಳೆದುಕೊಂಡವರಿಗೆ ತ್ವರಿತವಾಗಿ ಟಿಡಿಆರ್ ನೀಡಲು ಪ್ರತ್ಯೇಕ ವಿಭಾಗ
- ಪೌರಕಾರ್ಮಿಕರ ಕೆಲಸವನ್ನು ಸುಲಭಗೊಳಿಸಲು ಎಲ್ಲಾ ಪಾಲಿಕೆಗಳಲ್ಲಿ ಸಣ್ಣ ಗಾತ್ರದ ರಸ್ತೆ ಗುಡಿಸುವ ಯಂತ್ರಗಳನ್ನು ಖರೀದಿಸಲು ಸೂಚನೆ

ಶೀಘ್ರದಲ್ಲೇ ಹೊಸ ಲಾಂಛನ ಬಿಡುಗಡೆ

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಐದು ಪಾಲಿಕೆಗಳ ನೂತನ ಲಾಂಛನಗಳನ್ನು ಅಂತಿಮಗೊಳಿಸಲಾಗಿದ್ದು, ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು.ಬನಶಂಕರಿ ದೇವಸ್ಥಾನದ ಎದುರು ಪ್ರಾಧಿಕಾರದ ಮೊದಲ ಮಾದರಿ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲು ತೀರ್ಮಾನಿಸಲಾಗಿದೆ ಎಂದು ಉಪ ಮುಖ್ಯಮಂತ್ರಿಗಳು ಹೇಳಿದರು.

ಬಿ-ಖಾತಾ ದಾಖಲೆಗಳ ಪರಿಶೀಲನೆ

ಬಿ-ಖಾತಾವನ್ನು ಎ-ಖಾತಾವಾಗಿ ಪರಿವರ್ತಿಸಲು ಸುಮಾರು 7,000 ಅರ್ಜಿಗಳು ಬಂದಿವೆ. ಪ್ರತಿ ಅರ್ಜಿಯನ್ನು ಸ್ಥಳ ಪರಿಶೀಲನೆ ನಡೆಸಿದ ನಂತರವಷ್ಟೇ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಯಾವುದೇ ತಪ್ಪು ದಾಖಲೆಗಳಿಗೆ ಅವಕಾಶವಿಲ್ಲದಂತೆ ಎಚ್ಚರಿಕೆ ವಹಿಸಲಾಗುತ್ತಿದೆ ಎಂದು ಡಿ.ಕೆ.ಶಿವಕುಮಾರ್ ತಿಳಿಸಿದರು.

ಕಿರುಸುದ್ದಿ

ತಳಮಟ್ಟದ ವಾಸ್ತವ ಸಮಸ್ಯೆಗೆ ಸ್ಪಂದನೆ



• **ಬೆಂಗಳೂರು:** ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಕಸವನಹಳ್ಳಿ ವಾರ್ಡ್‌ನಲ್ಲಿ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಪಾದಯಾತ್ರೆ ಮೂಲಕ ಸಮಗ್ರ ಪರಿಶೀಲನೆ ನಡೆಸಿದರು. ಸಂಚಾರ ದಟ್ಟಣೆ, ಮೂಲಸೌಕರ್ಯ ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಸ್ಥಳೀಯರ ಸಮಸ್ಯೆಗಳ ಕುರಿತಂತೆ ತಳಮಟ್ಟದ ವಾಸ್ತವಿಕ ಸ್ಥಿತಿಗತಿಯನ್ನು ಅರಿತರು.

ಸರ್ಜಾಪುರ ರಸ್ತೆಯ ಅಗ್ನಿಶಾಮಕ ಠಾಣೆ ಬಳಿಯ ದಟ್ಟಣೆ: ಸರ್ಜಾಪುರ ರಸ್ತೆಯಲ್ಲಿರುವ ಅಗ್ನಿಶಾಮಕ ಠಾಣೆಯ ಬಳಿ ಪೀಕ್ ಅವರ್‌ಗಳಲ್ಲಿ ಉಂಟಾಗುವ ತೀವ್ರ ಸಂಚಾರ ದಟ್ಟಣೆ ನಿವಾರಣೆಗೆ ಹಾಗೂ ಪಾದಚಾರಿಗಳ ಅನುಕೂಲಕ್ಕಾಗಿ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಂಚಾರ ಪೊಲೀಸ್ ಮತ್ತು ನಗರ ಪಾಲಿಕೆ ಎಂಜಿನಿಯರ್‌ಗಳಿಗೆ ಸೂಚಿಸಿದರು. ಸರ್ಜಾಪುರದಿಂದ ಹೊಸೂರು ರಸ್ತೆಗೆ ತಿರುಗುವ ಜಂಕ್ಷನ್‌ನಲ್ಲಿ ದಟ್ಟಣೆ ನಿವಾರಿಸಲು, ರಸ್ತೆ ವಿಸ್ತರಣೆಗಾಗಿ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಾಣಿಜ್ಯ ಮಳಿಗೆಗಳ ಒತ್ತುವರಿ ತಕ್ಷಣ ತೆರವು: ಕೈಕೊಂಡ್ರಹಳ್ಳಿ ಬಸ್ ನಿಲ್ದಾಣದ ಸಮೀಪ ವಾಣಿಜ್ಯ ಮಳಿಗೆಗಳು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿದ್ದು, ತಕ್ಷಣವೇ ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದರು.

ಸುಧಾರಿತ ತ್ಯಾಜ್ಯ ವಿಲೇವಾರಿ: ದೈನಂದಿನ ಕಸವನ್ನು ನಿಯಮಿತವಾಗಿ ಮತ್ತು ಅಚ್ಚುಕಟ್ಟಾಗಿ ತೆರವುಗೊಳಿಸುವಂತೆ ಘನತ್ಯಾಜ್ಯ ನಿರ್ವಹಣಾ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ತ್ಯಾಜ್ಯದ ಉತ್ತಮ ವಿಲೇವಾರಿಗಾಗಿ ಮತ್ತು ನೈರ್ಮಲ್ಯ ಕಾಪಾಡಲು ವಾರ್ಡ್‌ನಾದ್ಯಂತ ಆಟೋ-ಟಿಪ್ಪರ್‌ಗಳ ಸಂಖ್ಯೆಯನ್ನು ತಕ್ಷಣವೇ ಹೆಚ್ಚಿಸುವಂತೆ ಸೂಚಿಸಿದರು.

ಫೆ.27ರವರೆಗೆ ಅರ್ಜಿ ಸಲ್ಲಿಕೆಗೆ ಅವಧಿ ವಿಸ್ತರಣೆ

• **ಬೆಂಗಳೂರು:** ಇಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಲಿದ್ದು, ಇದಕ್ಕೆ ಅರ್ಜಿ ಸಲ್ಲಿಸುವ ಕೊನೆ ದಿನಾಂಕವನ್ನು ಮತ್ತೊಮ್ಮೆ ಫೆ.27 ರವರೆಗೆ ವಿಸ್ತರಿಸಲಾಗಿದೆ. ಇದು ಕೊನೆಯ ಅವಕಾಶವಾಗಿದ್ದು, ಈ ಅವಧಿ ನಂತರ ಪುನಃ ದಿನಾಂಕ ವಿಸ್ತರಣೆ ಇರುವುದಿಲ್ಲ. ಹೀಗಾಗಿ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ [illegible] ತಿಳಿಸಿದ್ದಾರೆ. ಈವರೆಗೆ 3.18 ಲಕ್ಷ ಮಂದಿ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಿದ್ದು, ಇನ್ನೂ ಅನೇಕರು ಫೆ.22ರ ಕೊನೆ ದಿನಾಂಕವನ್ನು ವಿಸ್ತರಿಸುವಂತೆ ಕೋರಿದ್ದಾರೆ. ಆ ಪ್ರಕಾರ ಅರ್ಜಿ ಸಲ್ಲಿಸಲು ಫೆ.27 ಹಾಗೂ ಶುಲ್ಕ ಪಾವತಿಗೆ ಮಾ.3ರವರೆಗೆ ಅವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಿರುವವರ ಪೈಕಿ 2.18 ಲಕ್ಷ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆ ಸ್ಯಾಟ್ಸ್ ಮೂಲಕ ಆನ್‌ಲೈನ್‌ನಲ್ಲಿ ಆಗಿದೆ. ಕಾಲೇಜು ಹಂತದಲ್ಲಿ 1.08 ಲಕ್ಷ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ.

9 ಡ್ರೀಮ್ಸ್ ಸಂಸ್ಥೆಯ ಸಿಎಂ ಕಪ್ 2026ಕ್ಕೆ ಚಾಲನೆ
ಪ್ರತಿವರ್ಷವೂ ಪಂದ್ಯಾವಳಿ ಆಯೋಜಿಸಲಿ

• **ಬೆಂಗಳೂರು:** ಸಿಎಂ ಕಪ್ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ಒಬ್ಬರಿಗೊಬ್ಬರು ಪರಿಚಯವಾಗುವಂತಾಗಿದೆ. ಈ ರೀತಿಯ ಪಂದ್ಯಾವಳಿಗಳು ಪ್ರತಿ ವರ್ಷ ಆಯೋಜನೆಗೊಳ್ಳಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಭಿಪ್ರಾಯಪಟ್ಟರು.

9 ಡ್ರೀಮ್ಸ್ ಸಂಸ್ಥೆಯಿಂದ ಆಯೋಜಿಸಲಾಗಿರುವ ವಿನೂತನ ಮಾದರಿಯ ಸಿಎಂ ಕಪ್ 2026ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನಪ್ರತಿನಿಧಿಗಳು, ಅಧಿಕಾರಿಗಳು ಸೇರಿದಂತೆ ವಿವಿಧ ಕ್ಷೇತ್ರದ ಪ್ರಮುಖರು ಆಟಗಾರರಾಗಿ ಕಣಕ್ಕಿಳಿದಿರುವುದು ಉತ್ತಮ ವಿಚಾರ. ಈ ಪಂದ್ಯಾವಳಿಯಲ್ಲಿ ಪಾಲ್ಗೊಳ್ಳುವ ಅವರ ಮೂಲಕ ಕೆಲಸದ ಒತ್ತಡದಿಂದ ಕೊಂಚ ಹೊರಬರುವಂತಾಗಿದೆ. ಈ ರೀತಿಯ ಪಂದ್ಯಾವಳಿಗಳು ಪ್ರತಿ ವರ್ಷ ಆಯೋಜನೆಗೊಳ್ಳಬೇಕು ಎಂದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಬಂಗಾರಪ್ಪ, ಕರ್ನಾಟಕ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಕೆ. ಗೋವಿಂದರಾಜು, ಮುಖ್ಯಮಂತ್ರಿ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಸಚಿವ ಜಮೀರ್ ಅಹಮದ್ ಖಾನ್ ಅವರ ಮಾಧ್ಯಮ ಸಂಯೋಜಕ ಲಕ್ಷ್ಮೀನಾರಾಯಣ, ತೆಂಗಿನ ನಾರು ಮಂಡಳಿ ಅಧ್ಯಕ್ಷ ನಟರಾಜ್ ಜಾನಕಿರಾಮ್ ಸೇರಿದಂತೆ ಇತರರಿದ್ದರು.



8 ತಂಡಗಳ ನಡುವೆ ಸ್ಪರ್ಧೆ

ಪಂದ್ಯಾವಳಿಯ ಮೊದಲ ದಿನ ಲೀಗ್ ಹಂತದ ಪಂದ್ಯಗಳು ನಡೆದಿವೆ. ಎಂಟು ತಂಡಗಳ ನಡುವೆ ಜಿದ್ದಾಜಿದ್ದಿನ ಹೋರಾಟಕ್ಕೆ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಂಗಳವೇ ಸಾಕ್ಷಿಯಾಯಿತು.

ಬಿಜೆಪಿ ಯುವ ಮುಖಂಡ ಡಾ.ನಿರಂತರ ಗಣೇಶ್ ಆರೋಪ
ಕೆರೆಗಳ ಬಫರ್ ಝೋನ್ ಕಡಿತ ಕ್ರಮವಲ್ಲ

• **ಬೆಂಗಳೂರು:** ರಿಯಲ್ ಎಸ್ಟೇಟ್ ಒತ್ತಡಕ್ಕೆ ಮಣಿದಿರುವ ಕಾಂಗ್ರೆಸ್ ಸರ್ಕಾರ ಕೆರೆಗಳ ಬಫರ್ ಝೋನ್ ಕಡಿತ ಮಾಡಿದೆ. ಇದರಿಂದ ಜೀವವೈವಿಧ್ಯತೆಗೆ ಧಕ್ಕೆ ಆಗಲಿದೆ ಎಂದು ಬಿಜೆಪಿ ಯುವ ಮುಖಂಡ ಡಾ. ನಿರಂತರ ಗಣೇಶ್ ತಿಳಿಸಿದ್ದಾರೆ.



ಕೆರೆಗಳ ಬಫರ್ ಜೋನ್ ಕಡಿಮೆ ಮಾಡಿರುವ ಹೊಸ ತಿದ್ದುಪಡಿ ಕಾಯ್ದೆಯಲ್ಲಿ ಕೆರೆಗಳ ಗಾತ್ರಕ್ಕೆ ಅನುಗುಣವಾಗಿ 3 ಮೀಟರ್‌ನಿಂದ 30 ಮೀಟರ್ ವರೆಗೂ ಮಾತ್ರ ಬಫರ್ ಝೋನ್ ಇರಲಿದೆ. ಇದರಿಂದ ಕೆರೆ ಸುತ್ತ ವಾಣಿಜ್ಯ ಚಟುವಟಿಕೆಗೆ ಅವಕಾಶ ಸಿಗಲಿದೆ. ಕೆರೆಗಳ ಒತ್ತುವರಿಯಾಗುವ ಸಾಧ್ಯತೆ ಕೂಡ ಇದೆ. ಬೆಂಗಳೂರು ಜನತೆಗೆ ನಾಡಪ್ರಭು ಕೆಂಪೇಗೌಡರು, ಕೆರೆಗಳನ್ನು ನಿರ್ಮಿಸಿ ನಗರದ ಜನತೆಯ ದಾಹ ನೀಗಿಸಲು ಕಾರಣೀಭೂತರಾಗಿದ್ದರು. ಆದರೀಗ ಕೆರೆಗಳನ್ನೇ ನುಂಗಿ ಹಾಕುವ ಹುನ್ನಾರ ಮಾಡಲಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕೆರೆಗಳ ಒತ್ತುವರಿಗಳನ್ನು ಸರ್ಕಾರ ತೆರವುಗೊಳಿಸುವ ಬದಲು ಕಾನೂನುಬದ್ಧಗೊಳಿಸುತ್ತಿದೆ. ರಾಜ್ಯ ಸರ್ಕಾರವೇ ಬಿಲ್ಡರ್‌ಗಳಿಗೆ ಬಫರ್ ಝೋನ್‌ನಲ್ಲಿ ಕಟ್ಟಡ, ರಸ್ತೆ ನಿರ್ಮಿಸಿ ಒತ್ತುವರಿಗೆ ಪ್ರೋತ್ಸಾಹ ನೀಡುತ್ತಿದೆ. ಸಾವಿರ ಕೆರೆಗಳ ನಾಡು ಎನಿಸಿಕೊಂಡಿದ್ದ ಬೆಂಗಳೂರಿನಲ್ಲೀಗ ಬೆರಳೆಣಿಕೆಯಷ್ಟು ಕೆರೆಗಳಿವೆ ಎಂದರು.

ಬೆಂಗಳೂರು ಸಮುದ್ರಮಟ್ಟದಿಂದ 3000 ಅಡಿಯಷ್ಟು ಎತ್ತರದಲ್ಲಿದೆ. ಹಾಗಾಗಿ ಇಲ್ಲಿ ನದಿಗಳ ಹರಿವು ಇಲ್ಲ, ನದಿಗಳ ಹರಿವು ಇಲ್ಲದ ಕಾರಣದಿಂದ ನೀರಿನ ಅಗತ್ಯ ಪೂರೈಸಲು ಕೆರೆ, ಕುಂಟೆಗಳ ನಿರ್ಮಾಣ ಮಾಡಲಾಗಿತ್ತು. ಬಿಬಿಎಂಪಿ ವ್ಯಾಪ್ತಿಯಲ್ಲಿ 183 ಕೆರೆಗಳಿವೆ.

ಇವುಗಳಲ್ಲಿ 11 ಕೆರೆಗಳಷ್ಟೇ 100ಎಕರೆ ಮೀರಿವೆ. ಹೀಗಾಗಿ ಹೊಸ ತಿದ್ದುಪಡಿ ಕಾಯ್ದೆ ಪ್ರಕಾರ 11 ಕೆರೆಗಳಿಗೆ ಮಾತ್ರ 30 ಮೀಟರ್ ಬಫರ್ ಝೋನ್ ಹೊಂದಿರಲಿದೆ. ಸಣ್ಣ ಕೆರೆಗಳ ಬಫರ್ ಜೋನ್ ಕಡಿಮೆ ಆಗಲಿದೆ. ಇದು ಒತ್ತುವರಿ ಮತ್ತು ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸುಗಮ ಹಾದಿಯಾಗಲಿದೆ ಎಂದರು.

ರಾಹುಲ್‌ಗಾಂಧಿಯಿಂದ ದೇಶದ ಪ್ರತಿಷ್ಠೆಗೆ ಧಕ್ಕೆ

• **ಬೆಂಗಳೂರು:** ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕರಾಗಿ ವಿಫಲವಾಗಿರುವ ರಾಹುಲ್ ಗಾಂಧಿ ಹೊರಗೆ ದೇಶದ ಪ್ರತಿಷ್ಠೆಗೆ ಧಕ್ಕೆ ತರುತ್ತಿದ್ದಾರೆ ಎಂದು ಮಾಜಿ ಶಾಸಕ ಎಚ್.ಎಂ.ರಮೇಶ್ ಗೌಡ ಆರೋಪಿಸಿದರು.

ಹೊಸದಿಲ್ಲಿಯಲ್ಲಿ ನಡೆದ ಜಾಗತಿಕ ಎಐ ಶೃಂಗಸಭೆಗೆ ಅಡ್ಡಿ ಉಂಟು ಮಾಡಲು ಕಾಂಗ್ರೆಸ್ ಕಾರ್ಯಕರ್ತರು ಅರೆಬೆತ್ತಲಾಗಿ ಪ್ರತಿಭಟನೆ ನಡೆಸಿದ್ದನ್ನು ಹಾಗೂ ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ರಾಜ್ಯ ಸರ್ಕಾರ ನಿರ್ಬಂಧ ವಿಧಿಸಿರುವುದರ ವಿರುದ್ಧ ಖಂಡಿಸಿ ಶನಿವಾರ ಫ್ರೀಡಂ ಪಾರ್ಕ್‌ನಲ್ಲಿ ಜೆಡಿಎಸ್ ಕಾರ್ಯಕರ್ತರು ಮೇಣದಬತ್ತಿ ಅಂಟಿಸಿ ಪ್ರತಿಭಟನೆಯ ನಡೆಸಿದರು. ಈ ವೇಳೆ ಮಾತನಾಡಿದ ಅವರು, ಕಾಂಗ್ರೆಸ್ ಕಾರ್ಯಕರ್ತರ ವರ್ತನೆ ಸರಿಯಲ್ಲ, ಅವರು ದೇಶದ ಕೀರ್ತಿಗೆ ಧಕ್ಕೆ ತಂದಿದ್ದಾರೆ. ಇದು ಅಕ್ಷಮ್ಯ ಎಂದು ಕಿಡಿಕಾರಿದರು. ವಿವಿಧ ದೇಶಗಳ ಅಧ್ಯಕ್ಷರು, ಪ್ರಧಾನಿಗಳು ಹಾಗೂ ಜಗತ್ತಿನ ಖ್ಯಾತ ಐಟಿ, ಎಐ ಕಂಪನಿಗಳು ಭಾಗಿಯಾಗಿರುವ ಜಾಗತಿಕ ಶೃಂಗಸಭೆ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಶರ್ಟ್ ಬನಿಯನ್ ಬಿಚ್ಚಿ ಅರೆಬೆತ್ತಲಾಗಿ ಪ್ರತಿಭಟನೆ ನಡೆಸಿರುವುದು ಖಂಡನೀಯ.

ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ 140 ಕೋಟಿ ಜನರ ಪ್ರತಿನಿಧಿ. ಈವರೆಗೂ ದೇಶದಲ್ಲಿ ನಡೆದಿರದ ಶೃಂಗಸಭೆ ಇದಾಗಿದೆ. ದೇಶದಲ್ಲಿ ನಶಿಸಿ ಹೋಗುತ್ತಿರುವ ಕಾಂಗ್ರೆಸ್ ಪಕ್ಷ ಇಂತಹ ಕೆಲಸಕ್ಕೆ ಬಾರದ ಪ್ರತಿಭಟನೆಗಳಿಂದ ಇನ್ನಷ್ಟು ಪಾತಾಳಕ್ಕೆ ಕುಸಿಯುತ್ತಿದೆ. ಆ ಪಕ್ಷಕ್ಕೆ ದೇಶದ ಅಭಿವೃದ್ಧಿ ಬೇಕಿಲ್ಲ, ಕ್ಷುಲ್ಲಕ ಕಾರಣಗಳಿಂದ ದೇಶದ ಪ್ರತಿಷ್ಠೆಯನ್ನು ಹಾಳು ಮಾಡುತ್ತಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಪತ್ರಕರ್ತರಿಗೆ ನಿರ್ಬಂಧ; ಆಡಳಿತಾರೂಢ ಕಾಂಗ್ರೆಸ್ ವಿಧಾನಸೌಧದಲ್ಲಿ ವರದಿ ಮಾಡುವ ಪತ್ರಕರ್ತರಿಗೆ ನಿರ್ಬಂಧ ವಿಧಿಸಿರುವ ಸರ್ವಾಧಿಕಾರಿ ಮನೋಭಾವ ಆಗಿದೆ. ಕಾಂಗ್ರೆಸ್ ಪಕ್ಷವು ಇನ್ನೂ ತುರ್ತು ಪರಿಸ್ಥಿತಿಯ ಮನಸ್ಥಿತಿಯಿಂದ ಹೊರ ಬಂದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮನೆಯಲ್ಲಿದ್ದ ಚಿನ್ನಾಭರಣ ಕಳವು: ಬಂಧನ

• **ಬೆಂಗಳೂರು:** ಕುಟುಂಬ ಸಹಿತ ಪ್ರವಾಸಕ್ಕೆ ತೆರಳಿದಾಗ ಮನೆಯಲ್ಲಿಟ್ಟಿದ್ದ ಚಿನ್ನಾಭರಣವನ್ನು ಕಳ್ಳತನ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಯಲಹಂಕ ಉಪನಗರ ಠಾಣೆ ಪೊಲೀಸರು ಬಂಧಿಸಿ, 2.20 ಲಕ್ಷ ರೂ. ಮೌಲ್ಯದ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಹಾಸನ ಮೂಲದ ನಂಜೇಶ (39) ಬಂಧಿತ, ಆರೋಪಿಯು ಬ್ಯಾಲಕೆರೆಯ ಜಯಲಕ್ಷ್ಮಮ್ಮ ಲೇಔಟ್‌ನಲ್ಲಿ ವಾಸವಿದ್ದು, ಯಲಹಂಕದ ಅಟ್ಟೂರು 1ನೇ ಮುಖ್ಯರಸ್ತೆ ನಿವಾಸಿ ರೋಜಿ ಫ್ರಾನ್ಸಿಸ್ ಎಂಬುವರು ಕುಟುಂಬದೊಂದಿಗೆ ತಮಿಳುನಾಡಿದ ಪ್ರವಾಸಕ್ಕೆ ತೆರಳಿದ್ದರು. ಆ ವೇಳೆ ನಂಜೇಶ್, ಮುಂಬಾಗಿಲನ್ನು ಕಬ್ಬಿಣದ ಆಯುಧದಿಂದ ಮೀಟಿ ಒಳನುಗ್ಗಿ ಕಬೋರ್ಡ್ ತೆಗೆದು ಅದರಲ್ಲಿದ್ದ 3.70 ಲಕ್ಷ ರೂ. ಬೆಲೆಬಾಳುವ ಚಿನ್ನಾಭರಣಗಳನ್ನು ಕದ್ದು, ಪರಾರಿಯಾಗಿದ್ದನು.

ರೋಜಿ ಅವರು ಪ್ರವಾಸ ಮುಗಿಸಿಕೊಂಡು ಮನೆಗೆ ಬಂದಾಗ ಕಳ್ಳತನವಾಗಿರುವುದು ಕಂಡುಬಂದಿದೆ. ತಕ್ಷಣ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಪೊಲೀಸರು ಘಟನಾ ಸ್ಥಳದ ಸ್ಥಳೀಯ ಸಿಸಿ ಕ್ಯಾಮೆರಾಗಳನ್ನು ಪರಿಶೀಲಿಸಿ, ಮಾಹಿತಿಯನ್ನು ಕಲೆಹಾಕಿ ಆರೋಪಿಯನ್ನು ಬಂಧಿಸಿ, 2.20 ಲಕ್ಷ ರೂ. ಮೌಲ್ಯದ 15.60 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದಾರೆ. ಯಲಹಂಕ ಉಪನಗರ ಠಾಣೆ ಇನ್‌ಸ್ಪೆಕ್ಟರ್ ಸುಧಾಕರ್ ರೆಡ್ಡಿ ಹಾಗೂ ಸಿಬ್ಬಂದಿ ತಂಡ ಪ್ರಕರಣವನ್ನು ಪತ್ತೆ ಹಚ್ಚಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಾಮೋಹಳ್ಳಿ ಶ್ರೀಪಟ್ಟಾಲದಮ್ಮದೇವಿ ಪುನರ್ ಪ್ರತಿಷ್ಠಾಪನೆ
ಒಗ್ಗಟ್ಟಿನಿಂದ ಗ್ರಾಮದೇವತೆ ಆರಾಧಿಸಿ

• **ಕೆಂಗೇರಿ:** ರಾಜಕೀಯ ಪಕ್ಷಗಳಿಗೆ ಯಾವುದೇ ಪ್ರತ್ಯೇಕ ದೇವರಿಲ್ಲ ಆದ್ದರಿಂದ, ಎಲ್ಲರೂ ಪಕ್ಷಾತೀತವಾಗಿ ಹಾಗೂ ಜಾತ್ಯತೀತವಾಗಿ ಧಾರ್ಮಿಕ ಕೈಂಕರ್ಯದಲ್ಲಿ ಪಾಲ್ಗೊಂಡು ಗ್ರಾಮ ದೇವತೆಯನ್ನು ಆರಾಧನೆ ಮಾಡಬೇಕು ಎಂದು ಹರಿಹರ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀ ನರಸಿಂಹ ಪೀಠಾಧ್ಯಕ್ಷ ಶ್ರೀ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ರಾಮೋಹಳ್ಳಿಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಪಟ್ಟಾಲದಮ್ಮ ದೇವಿಯ ಪುನರ್ ಪ್ರತಿಷ್ಠಾಪನೆ ಮತ್ತು ಬ್ರಹ್ಮ ಕಲಶೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಗ್ರಾಮ ದೇವತೆಯುಗಳ ದೇವಾಲಯಗಳು ಧಾರ್ಮಿಕ ಶ್ರದ್ಧೆಯ ಪ್ರತೀಕವಾದದ್ದಾಗಿದೆ. ಭಕ್ತರ ಹೃದಯದಲ್ಲಿ ದೇವರ ಪ್ರತಿಷ್ಠಾಪನೆ ಆಗಬೇಕು ಎಂದು ಕರೆ ನೀಡಿದರು.

ಸ್ಫಟಿಕಪುರಿ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ಡಾ.ನಂಜಾವಧೂತ ಸ್ವಾಮೀಜೀ ಮಾತನಾಡಿ, ಭೂಮಿಯ ಮೇಲೆ ಮಾನವ ಜನ್ಮ ಬಹಳ ದೊಡ್ಡದು, ಜೀವನದ ಪ್ರತಿಕ್ಷಣವೂ ಅಮೂಲ್ಯವಾದುದು, ದೇವರು ನಮಗೆ ಕೊಟ್ಟ ಅವಕಾಶಕ್ಕಾಗಿ ನಾವು ಜಾತ್ಯತೀತ ಮತ್ತು ಪಕ್ಷಾತೀತವಾಗಿ ಸತ್ಕರ್ಮ, ಸತ್ಕಾರ್ಯ ಮಾಡಿ ಮಾನವ ಜನ್ಮವನ್ನು ಸಾರ್ಥಕತೆ ಗೊಳಿಸಬೇಕು ಎಂದು ತಿಳಿಸಿದರು.



ರಾಮೋಹಳ್ಳಿ ಗ್ರಾಪಂ ಅಧ್ಯಕ್ಷ ಜಿ.ಮಹೇಶ್, ಮಾಜಿ ಅಧ್ಯಕ್ಷೆ ರೂಪಾವೇಣುಗೋಪಾಲ್, ಬಿಜೆಪಿ ರಾಜ್ಯಕಾರ್ಯಕಾರಿಣಿ ಸದಸ್ಯ ಆರ್.ಪಿ.ಪ್ರಕಾಶ್, ಚೇತನ್, ರವಿಕುಮಾರ್, ಯಲ್ಲಪ್ಪ, ಎಂ.ರುದ್ರೇಶ್, ಮರಿಸ್ವಾಮಿ, ಚಲನಚಿತ್ರ ನಿರ್ಮಾಪಕ ಉಮಾಪತಿ, ಆರ್.ಪಿ. ಶ್ರೀನಿವಾಸ್, ರಾಮೋಹಳ್ಳಿ ಮಧ್ವ ನಾರಾಯಣ ಆಶ್ರಮದ ಶ್ರೀ ವಿಶ್ವಭೂಷಣ ತೀರ್ಥರು, ರಾಮಕೃಷ್ಣ ಯೋಗಾಶ್ರಮದ ಶ್ರೀ ಯೋಗೇಶ್ವರಾನಂದ ಮಹಾಸ್ವಾಮಿ ಉಪಸ್ಥಿತರಿದ್ದರು.

ತೆರಿಗೆ ಪಾವತಿಸದ ಆಸ್ತಿ ಹರಾಜು

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವಿವಿಧ ಪಾಲಿಕೆಗಳಲ್ಲಿ ಆಸ್ತಿ ತೆರಿಗೆ ಪಾವತಿಸದ ಆಸ್ತಿಗಳ ಹರಾಜು ಪ್ರಕ್ರಿಯೆಯನ್ನು ಶನಿವಾರ ಆಯಾ ಪಾಲಿಕೆ ಕಚೇರಿಯಲ್ಲಿ ನಡೆಸಲಾಯಿತು.

ಬೆಂಗಳೂರು ಉತ್ತರ ನಗರ ಪಾಲಿಕೆಯ ಆಸ್ತಿ ತೆರಿಗೆ ಪಾವತಿಸದ 107ಆಸ್ತಿಯಿಂದ ಬಾಕಿ ಇರುವ 2.49 ಕೋಟಿ ರೂ. ವಸೂಲಿ ಮಾಡಲು ನಡೆದ ಹರಾಜು ಪ್ರಕ್ರಿಯೆಯಲ್ಲಿ ಸುಮಾರು 10ಕ್ಕಿಂತ ಹೆಚ್ಚು ಬಿಡ್ಡುದಾರರು ಭಾಗವಹಿಸಿದ್ದರು.

ಪ್ರಕ್ರಿಯೆಯಲ್ಲಿ 2 ಆಸ್ತಿಗಳನ್ನು ಹರಾಜು ಮೂಲಕ ಖರೀದಿಸಲಾಗಿದೆ. ಎರಡು ಆಸ್ತಿಯಿಂದ 1,44,60,000 ರೂ. ವಸೂಲಾಗಿದೆ.

ಪೂರ್ವ ಪಾಲಿಕೆಯಲ್ಲಿ 5 ಆಸ್ತಿಗಳು ಹರಾಜಾಗಿದ್ದು, 5,62,86,800 ರೂ.ಗಳು ವಸೂಲಾಗಿದೆ.

ಜಿಬಿಎ ಐದು ಪಾಲಿಕೆಯಿಂದ ಸುಮಾರು 7,000 ಆಸ್ತಿಗಳಿಂದ 437 ಕೋಟಿ ರೂ.ಗಳಷ್ಟು ಆಸ್ತಿ ತೆರಿಗೆ ಬಾಕಿ ಉಳಿದಿದೆ. ಉಳಿದ ಆಸ್ತಿಗಳನ್ನು ಮುಂದಿನ ದಿನಗಳಲ್ಲಿ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು ಎಂದು ಜಿಬಿಎ ತಿಳಿಸಿದೆ.

82 ಅಭ್ಯರ್ಥಿಗಳಿಗೆ ಅನುಕಂಪ ಆಧಾರಿತ ನೌಕರಿ ಪತ್ರ ವಿತರಣೆ
ಬಿಎಂಟಿಸಿ ನೌಕರರಿಗೆ ವಿಮೆ ಸೌಲಭ್ಯ

• **ಬೆಂಗಳೂರು:** ಅಪಘಾತದಲ್ಲಿ ಅಥವಾ ಸ್ವಾಭಾವಿಕವಾಗಿ ಮೃತಪಟ್ಟ ಬಿಎಂಟಿಸಿ ನೌಕರ ಅವಲಂಬಿತ ಕುಟುಂಬಕ್ಕೆ ನೀಡಲಾಗಿರುವ ವಿಮಾ ಪರಿಹಾರ ಮೊತ್ತವನ್ನು ಮಕ್ಕಳ ವಿದ್ಯಾಭ್ಯಾಸ, ನಿವೇಶನ ಖರೀದಿ ಇನ್ನಿತರ ಉತ್ತಮ ಕಾರ್ಯಕ್ಕೆ ಬಳಸಿಕೊಳ್ಳಲಿ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಬಿಎಂಟಿಸಿಯಿಂದ ಶನಿವಾರ ಶಾಂತಿನಗರದಲ್ಲಿನ ಬಿಎಂಟಿಸಿ ಕೇಂದ್ರ ಕಚೇರಿ ಆವರಣದಲ್ಲಿ ಹಮ್ಮಿಕೊಂಡ 82 ಅಭ್ಯರ್ಥಿಗಳಿಗೆ ಅನುಕಂಪ ಆಧಾರಿತ ನೇಮಕಾತಿ ಆದೇಶ ಪತ್ರ ವಿತರಣೆ, 15 ಕುಟುಂಬಕ್ಕೆ 4.34 ಕೋಟಿ ರೂ.ಗಳ ಪರಿಹಾರ ಮೊತ್ತ ವಿತರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಆಕಸ್ಮಿಕ ಅಪಘಾತ, ಸಹಜವಾಗಿ ಮೃತಪಟ್ಟ ಸಂಸ್ಥೆಯ ಸಿಬ್ಬಂದಿ ಕುಟುಂಬದ ನೆರವಿಗೆ ಬ್ಯಾಂಕ್ ಮೂಲಕ 1.50 ಕೋಟಿ ರೂ. ವಿಮಾ ಸೌಲಭ್ಯ ಕಲ್ಪಿಸಿದೆ. ಅದರಂತೆ ಅಪಘಾತದಲ್ಲಿ ಮೃತಪಟ್ಟ ಮೂವರು ನೌಕರ ಕುಟುಂಬಕ್ಕೆ ಒಟ್ಟು 3 ಕೋಟಿ ರೂ. ಪರಿಹಾರ ವಿಮಾ ಹಣ ಹಾಗೂ ಸ್ವಾಭಾವಿಕ ಅಥವಾ ಇನ್ನಿತರ ಕಾರಣದಿಂದ ಮೃತಪಟ್ಟ ಐದು ನೌಕರ ಕುಟುಂಬಕ್ಕೆ ತಲಾ 10 ಲಕ್ಷ ರೂ. ಗುಂಪು ವಿಮಾ ಪರಿಹಾರ ನೀಡಲಾಗಿದೆ ಎಂದರು.

2025 ರ ಪರಿಷ್ಕೃತ ಯೋಜನೆಯಡಿ ಒಟ್ಟು 7 ಅವಲಂಬಿತ ಕುಟುಂಬಕ್ಕೆ 12 ಲಕ್ಷ ರೂ. ವಿಮಾ ಪರಿಹಾರ ಮೊತ್ತ ನೀಡಲಾಗಿದೆ. ಹಣವನ್ನು ಮಕ್ಕಳ ವಿದ್ಯಾಭ್ಯಾಸ, ನಿವೇಶನ ಖರೀದಿ ಇನ್ನಿತರ ಉತ್ತಮ ಕಾರ್ಯಕ್ಕೆ ಸದುಪಯೋಗಪಡಿಸಿಕೊಳ್ಳುವಂತೆ ತಿಳಿಸಿದರು.



ಬಿಎಂಟಿಸಿ ನಿಗಮದ ಅಧ್ಯಕ್ಷ ವಿ.ಎಸ್.ಆರಾಧ್ಯ ಮಾತನಾಡಿ, ಸರ್ಕಾರವು ಸಾರಿಗೆ ನೌಕರರ ಹಿತಕಾಯಲು ಬದ್ಧವಾಗಿದೆ. ಮೃತ ನೌಕರ ಕುಟುಂಬದ ಆರ್ಥಿಕ ಸುಧಾರಣೆಗೆ ಸಂಸ್ಥೆ ಹಾಗೂ ವಿವಿಧ ಬ್ಯಾಂಕ್ ವತಿಯಿಂದ ವಿಮಾ ಪರಿಹಾರ ನೀಡಿದೆ ಎಂದರು. ಕಾರ್ಯಕ್ರಮದಲ್ಲಿ ಪ್ರಯಾಣಿಕ ಸ್ನೇಹಿ ಮತ್ತು ಪ್ರಾಮಾಣಿಕ ಸೇವೆ ನೀಡಿದ ಸಿಬ್ಬಂದಿಗೆ ನಗದು ಪುರಸ್ಕಾರದೊಂದಿಗೆ ಸನ್ಮಾನಿಸಿ ಪ್ರಶಂಸಿಸಲಾಯಿತು. ಸಂಸ್ಥೆಯ ಉಪಾಧ್ಯಕ್ಷ ಎಂ. ನಿಕೇತ್ ರಾಜ್, ವ್ಯವಸ್ಥಾಪಕ ನಿರ್ದೇಶಕ ಕೆ.ಬಿ. ಶಿವಕುಮಾರ್, ನಿರ್ದೇಶಕ ಅಬ್ದುಲ್ ಅಹಮದ್, ಕೆನರಾ ಬ್ಯಾಂಕಿನ ಉಪ ಪ್ರಧಾನ ವ್ಯವಸ್ಥಾಪಕ ಕೆ. ಕಲಿ ಮುಂತಾದವರು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆ ಬಹುಮಾನ ವಿತರಣಾ ಸಮಾರಂಭ, ಬೆಳಗ್ಗೆ 10, ಸ್ಥಳ: ದಿ ಮಿಥಿಕ್ ಸೊಸೈಟಿ, ಬೆಂಗಳೂರು.
- ಅರಸು 60 ಕಾರ್ಯಕ್ರಮ, ಬೆಳಗ್ಗೆ 10.30, ಸ್ಥಳ: ಕನ್ನಡ ಭವನ
- ಗಿರೀಶ್ ಕಾಸರವಳ್ಳಿ ಚಲನಚಿತ್ರೋತ್ಸವ, ಸಂಜೆ 5, ಸ್ಥಳ: ಕೆವಿ ಸುಬ್ಬಣ್ಣ ಆಪ್ತ ರಂಗಮಂದಿರ, ಕುಮಾರ ಸ್ವಾಮಿ ಲೇಔಟ್
- ಭಗವಂತನ ಮರಣ ನಾಟಕ ಪ್ರದರ್ಶನ, ಸಂಜೆ 6.30 ಸ್ಥಳ:ರವೀಂದ್ರ ಕಲಾಕ್ಷೇತ್ರ

ಇಂದಿನ ಪಂದ್ಯ

ಇಂಗ್ಲೆಂಡ್ VS ಶ್ರೀಲಂಕಾ
ಮಧ್ಯಾಹ್ನ 3 (ಪಲ್ಲೆಕೆಲೆ)


ಭಾರತ VS ದ. ಆಫ್ರಿಕಾ
ಸಂಜೆ 7 (ಅಹಮದಾಬಾದ್)

ಕಿರುಸುದ್ದಿ

ತಿಲಕ್ ನಮಗೆ ಬೇಕಾದಂತೆ ಆಡುತ್ತಿದ್ದಾರೆ: ಸೂರ್ಯ

ಅಹಮದಾಬಾದ್: ತಿಲಕ್ ವರ್ಮಾ ಅವರಿಗೆ ನಿಧಾನವಾಗಿ ಬ್ಯಾಟಿಂಗ್ ಮಾಡಲು ಹೇಳಿದ್ದೇ ನಾವು. ಮ್ಯಾನೇಜ್ಮೆಂಟ್ ಅವರಿಗೆ ಹೇಳಿದ ರೀತಿಯಲ್ಲಿ ಆಡುತ್ತಿದ್ದಾರೆ ಎಂದು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ತಿಳಿಸಿದರು.

ದ.ಆಫ್ರಿಕಾ ವಿರುದ್ಧದ ಸೂಪರ್-8ರ ಪಂದ್ಯಕ್ಕೂ ಮುನ್ನ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಪಿಚ್‌ಗಳು ಸ್ಥಿತಿಗಳು ಬೇರೆಯಾಗಿವೆ. ದೊಡ್ಡ ದೊಡ್ಡ ಸ್ಕೋರ್‌ಗಳು ಪೇರಿಸುವುದು ಅಷ್ಟೊಂದು ಸುಲಭವಲ್ಲ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ತಿಲಕ್ ವರ್ಮಾ ಅವರಿಗೆ ನಾವೇ ಹಾಗೆ ಆಡಲು ಹೇಳಿದ್ದೇವೆ.



ಪವರ್‌ಪ್ಲೇನಲ್ಲೇ ಅವರಿಗೆ ಬ್ಯಾಟಿಂಗ್ ಸಿಕ್ಕರೆ ಅವರು ತಮಗೆ ಬೇಕಾದಂತೆ ಆಡಲಿ. ಆದರೆ ಎರಡು ವಿಕೆಟ್‌ಗಳು ಬೇಗನೇ ಬಿದ್ದರೆ ವಿಕೆಟ್ ಉಳಿಸಿಕೊಂಡು ಜೊತೆಯಾಟ ನಿರ್ಮಿಸುವ ಕೆಲಸ ಅವರಿಗೆ ನೀಡಲಾಗಿದೆ. ಅದರ ಪ್ರಕಾರವೇ ಅವರು ಆಡುತ್ತಿದ್ದಾರೆ ಎಂದರು. ಅಭಿಷೇಕ್ ಶರ್ಮ ಅವರ ಲಯದ ಬಗ್ಗೆ ಮಾತನಾಡುತ್ತಾ, ಅಭಿ ನಮ್ಮ ತಂಡಕ್ಕಾಗಿ ಏನು ಮಾಡಿದ್ದಾರೆ ಎಂಬುದು ಹೇಳಿ ತಿಳಿಸಬೇಕಾಗಿಲ್ಲ, ಒಂದೆರಡು ಪಂದ್ಯದಲ್ಲಿ ಲಯದಲ್ಲಿ ಕಾಣಿಸಿಕೊಳ್ಳದೆ ಹೋದರೆ ಅವರ ಅವಕಾಶ ಕಸಿದುಕೊಳ್ಳಬೇಕಾಗಿಲ್ಲ, ಅವರ ಆಟದ ಮೇಲೆ ನಮಗೆ ಭರವಸೆಯಿದೆ ಎಂದರು. ಸಂಜುಗೆ ಅವಕಾಶ ಸಿಗಲಿದೆಯೇ ಎಂಬ ಪ್ರಶ್ನೆಗೆ, ಯಾರ ಬದಲಿಗೆ? ತಿಲಕ್ ಅವರ ಬದಲಿಗೆ ಆಡಿಸಲಾಗುವುದೇ ಎಂದು ನಕ್ಕ ಅವರು, ಅವಕಾಶ ನೀಡಲಾಗಲ್ಲ ಎಂಬ ವಿಷಯ ತಿಳಿಸಿದರು.

ಹಾಕಿ: ಭಾರತಕ್ಕೆ ಮತ್ತೊಂದು ಸೋಲು

ಹೊಸದಿಲ್ಲಿ: ಎಫ್‌ಐಎಚ್ ಪ್ರೋ ಲೀಗ್ ಪಂದ್ಯಾವಳಿಯಲ್ಲಿ ಭಾರತದ ನೀರಸ ಪ್ರದರ್ಶನ ಸ್ಪೇನ್ ಪಂದ್ಯದ ವರೆಗೂ ವಿಸ್ತಾರಗೊಂಡಿದ್ದು, 0–2ರಿಂದ ಸೋಲು ಕಂಡಿದೆ. ಮೊದಲ ಲೆಗ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಭಾರತ ಹೊಸ ವರ್ಷ ಹೊಸ ಪ್ರದರ್ಶನದೊಂದಿಗೆ ಮುನ್ನಡೆ ಸಾಧಿಸುವ ಪ್ರಯತ್ನದಲ್ಲಿತ್ತು. ಆದರೆ ಸತತ ಮೂರನೇ ಪಂದ್ಯದಲ್ಲೂ ತೀರಾ ಹಿನ್ನಡೆ ಅನುಭವಿಸಿದೆ. ಶನಿವಾರದ ಪಂದ್ಯದಲ್ಲಿ ಮೊದಲಿನಿಂದಲೂ ಸಿಕ್ಕ ಅವಕಾಶ ಬಳಸಿಕೊಳ್ಳದೆ, ಹೆಣಗಾಡಿದ ಹರ್ಮನ್‌ಪ್ರೀತ್ ಪಡೆ ಎರಡು ಬಾರಿ ಗೋಲನ್ನು ಬಿಟ್ಟುಕೊಟ್ಟಿತು. ಗೋಲುಪೆಟ್ಟಿಗೆಗೆ ಚೆಂಡನ್ನು ನೂಕಿದ ಸ್ಪೇನ್ ಮುಂದಿನ ಪಂದ್ಯದಲ್ಲಿ ರಕ್ಷಣಾತ್ಮಕ ಆಟದೊಂದಿಗೆ ಮಿಂಚಿತು. ಸ್ಪೇನ್ ಪರ ಸ್ಟ್ರೈಕರ್ ಇಗ್ನಾಸಿಯೋ ಅಬಾಜೊ ಮತ್ತು ಇಗ್ನಾಸಿಯೋ ಕೊಬೋಸ್ ತಲಾ ಒಂದು ಗೋಲು ಗಳಿಸಿದರು. ಮೊದಲ ಕ್ವಾರ್ಟರ್‌ನಲ್ಲಿ ಮೊದಲ ಗೋಲು ಮೂಡಿ ಬಂದರೆ ಮೂರನೇ ಕ್ವಾರ್ಟರ್‌ನಲ್ಲಿ ಮತ್ತೊಂದು ಗೋಲು ಮೂಡಿ ಬಂತು. ಮಧ್ಯದಲ್ಲಿ ಹತ್ತಾರು ಅವಕಾಶ ಪಡೆದರೂ ಕೈಚೆಲ್ಲಿತು ಭಾರತ.

ಫುಟ್‌ಬಾಲ್: ಬಂಗಾಳಕ್ಕೆ ಗೆಲುವು

ಕೋಲ್ಕತ್ತಾ: ಇಲ್ಲಿ ನಡೆಯುತ್ತಿರುವ ಇಂಡಿಯನ್ ಸೂಪರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಈಸ್ಟ್ ಬಂಗಾಳ ಎಫ್‌ಸಿ ತಂಡವು ಸ್ಪೋರ್ಟಿಂಗ್ ಕ್ಲಬ್ ದಿಲ್ಲಿ ವಿರುದ್ಧ ವಿರುದ್ಧ 4–1 ಅಂಕಗಳ ಭರ್ಜರಿ ಗೆಲುವು ಸಾಧಿಸಿ. ಸಾಲ್ಟ್ ಲೇಕ್ ಸ್ಟೇಡಿಯಂನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಯೂಸುಫ್ ಎಜ್ಜೆಜ್ಜಾರಿ ಎರಡು ಗೋಲು ಹೊಡೆದು ಗೆಲುವಿನ ಹೀರೋ ಎನಿಸಿದರು. ಪಂದ್ಯದ ನಾಲ್ಕನೇ ನಿಮಿಷದಲ್ಲೇ ಆಗಸ್ಟಿನ್ ಲೋಲ್ರೋಚಿನಾ ಅತಿಥಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಮೂರು ನಿಮಿಷಗಳಲ್ಲೇ ಎಡ್ಮಂಡ್ ಲಾಲ್ರಿಂದಿಕಾ ಸಮಬಲ ಸಾಧಿಸಿ ಈಸ್ಟ್ ಬೆಂಗಾಲ್‌ಗೆ ಆತ್ಮವಿಶ್ವಾಸ ತುಂಬಿದರು. 12ನೇ ನಿಮಿಷದಲ್ಲಿ ಸ್ಪೇನ್ ಆಟಗಾರ ಯೂಸೂಫ್ ಪೆನಾಲ್ಟಿ ಮೂಲಕ ತಂಡಕ್ಕೆ ಮುನ್ನಡೆ ತಂದರು. ಮೊದಲಾರ್ಧ ಅಂತ್ಯಕ್ಕೆ ಐದು ನಿಮಿಷ ಬಾಕಿ ಇರುವಾಗ ಮತ್ತೊಮ್ಮೆ ಗೋಲು ದಾಖಲಿಸಿ 3–1 ಮುನ್ನಡೆ ಸಾಧಿಸಿದರು. ಈ ಜಯದೊಂದಿಗೆ ಈಸ್ಟ್ ಬೆಂಗಾಲ್ ಎರಡು ಪಂದ್ಯಗಳಲ್ಲಿ ಎರಡು ಗೆಲುವು ಸಾಧಿಸಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಭಾರತಕ್ಕಿಂದು ಮೊದಲ ಪಂದ್ಯ | ಅಭಿಷೇಕ್‌ಗೆ ಲಯದ ಚಿಂತೆ | ವಿಶ್ವಾಸದಲ್ಲಿ ದ. ಆಫ್ರಿಕಾ

ಅಜೇಯ ಭಾರತಕ್ಕೆ ಆಫ್ರಿಕಾ ಸವಾಲು

ಅಹಮದಾಬಾದ್: ಶನಿವಾರದಂದು ಆರಂಭಗೊಂಡಿರುವ ಸೂಪರ್-8 ಪಂದ್ಯಗಳಿಗಾಗಿ ಹಾಲಿ ಚಾಂಪಿಯನ್ಸ್, ಈ ಬಾರಿಯ ಫೇವರಿಟ್ಸ್ ಭಾರತೀಯರು ಅಣಿಯಾಗುತ್ತಿದ್ದಾರೆ. ಯುಎಸ್‌ಎ, ನಮೀಬಿಯಾ, ನೆದರ್ಲೆಂಡ್ಸ್ ತಂಡಗಳನ್ನು ಸೋಲಿಸಿ ಗೆಲುವಿನ ನಾಗಾಲೋಟ ಮುಂದುವರಿಸಿರುವ ಸೂರ್ಯಕುಮಾರ್ ಯಾದವ್ ಪಡೆಗೆ ಹಂತದ ಮೊದಲ ಪಂದ್ಯದಲ್ಲಿ ಹಾಲಿ ರನ್ನರ್-ಅಪ್ ದಕ್ಷಿಣ ಆಫ್ರಿಕಾ ಎದುರಾಗುತ್ತಿದೆ.

ಫೈನಲ್ ಸೋಲಿನ ಹೊರತಾಗ್ಯೂ ಕಳೆದ ಎರಡು ವರ್ಷಗಳಲ್ಲಿ ಭಾರತದೊಂದಿಗೆ ಸೋತ ಸರಣಿಗಳ ಸೇಡು ತೀರಿಸಿಕೊಳ್ಳುವುದಕ್ಕೆ ಚಡಪಡಿಸುತ್ತಿದೆ ದ.ಆಫ್ರಿಕಾ ಪಡೆ. ಇತ್ತ ಸೋಲಿಲ್ಲದ ಸರದಾರನಂತೆ ಬಂದ ತಂಡಗಳನ್ನೆಲ್ಲಾ ಮಟ್ಟಹಾಕಿ ಮುನ್ನುಗ್ಗಿರುವ ಭಾರತ ಆತ್ಮವಿಶ್ವಾಸದೊಂದಿಗೆ ಸಿದ್ಧವಾಗಿದೆ. ಸೂಪರ್-8ರ ಈ ಪಂದ್ಯವು ಸೆಮಿ ಹಾದಿ ತೋರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ.

ಗೆಲುವು ಅನಿವಾರ್ಯ: ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಂಡಿವೆ. ಎಂಟು ತಂಡಗಳು ತೀವ್ರ ಪೈಪೋಟಿಗಾಗಿ ಸಿದ್ಧವಾಗಿವೆ. ಒಂದು ಗುಂಪಿನಲ್ಲಿ 4 ತಂಡಗಳಿವೆ, ಎರಡು ತಂಡಗಳು ಸೆಮಿಗೆ ಮುನ್ನಡೆಯಲಿವೆ. ಅಂದರೆ ಒಂದು ತಂಡಕ್ಕೆ ಮೂರು ಪಂದ್ಯಗಳನ್ನು ಗೆಲ್ಲುವ ಅವಕಾಶವಿದೆ. ಒಂದು ತಂಡ ಎರಡು ಪಂದ್ಯಗಳನ್ನು ಗೆದ್ದು ಮುನ್ನಡೆಯಲಿದೆ. ಇದೇ ವೇಳೆ ಭಾರತ ಇರುವ ಗುಂಪಿನಲ್ಲಿ ವೆಸ್ಟ್ ಇಂಡೀಸ್ ಮತ್ತು ದ.ಆಫ್ರಿಕಾದೊಂದಿಗೆ ಬಲಿಷ್ಠ ಜಿಂಬಾಬ್ವೆ ತಂಡವನ್ನೂ ಭಾರತ ಎದುರಿಸಬೇಕಿದೆ. ಈ ನಿಟ್ಟಿನಲ್ಲಿ ಸೆಮಿಗಾಗಿ ಮೊದಲಿನಿಂದಲೂ ಗೆಲ್ಲುವುದು ಅನಿವಾರ್ಯವಾಗಿದೆ.

ಇಶಾನ್ ಕಿಶನ್ ದೊಡ್ಡ ಪಾತ್ರ ವಹಿಸುತ್ತಿದ್ದಾರೆ. ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಳ್ಳಲು ಅವರನ್ನು ಬಿಟ್ಟರೆ ಮುಂದಿನ ಪಂದ್ಯದಲ್ಲಿ ಅವರು ಆಡಿದ್ದೇ ಆಟ!. ಸ್ಫೋಟಕ ಬ್ಯಾಟಿಂಗ್‌ಗೆ ತತ್ತರಿಸಿ ಹೋದ ತಂಡಗಳು ಸೋಲೇ ಕಂಡಿವೆ. ಮೂರನೇ ಕ್ರಮಾಂಕದಲ್ಲಿ ಬರುವ ತಿಲಕ್ ವರ್ಮಾ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಸ್ಟ್ರೈಕ್‌ರೇಟ್‌ನಲ್ಲಿ ಹಿಂದುಳಿದಿದ್ದಾರೆ. ಸೂರ್ಯ ಕೂಡ ಅನುಭವಿಸುತ್ತಿದ್ದದ್ದು ಅದೇ. ಸೆಟ್ ಆದರೆ ದೊಡ್ಡ ದೊಡ್ಡ ತಂಡಗಳನ್ನು ದಂಡಿಸಬಹುದಾದ ಆಟಗಾರರಾದರೂ ಸ್ಟ್ರೈಕ್‌ರೇಟ್ ಸಮಸ್ಯೆ ಎದುರಿಸುತ್ತಿದ್ದಾರೆ ಮಧ್ಯಮ ಕ್ರಮಾಂಕಿತ ಈ ಇಬ್ಬರು ಬ್ಯಾಟಿಗರು. ತಂಡಕ್ಕೆ ಆನೆ ಬಲ ತಂದಿರುವ ಶಿವಂ ದುಬೆ ತಮ್ಮ ಸ್ಥಾನದಲ್ಲಿ ನೀಡಬೇಕಾದ ಎಲ್ಲಾ ಕೊಡುಗೆಗಳನ್ನು ನೀಡಿದ್ದಾರೆ. ಒಮ್ಮೆ ಬೌಲರ್ ಆಗಿ, ಒಮ್ಮೆ ಫೀಲ್ಡರ್ ಆಗಿ, ಬ್ಯಾಟಿಂಗ್‌ನಲ್ಲೂ ಎರಡು ತರಹದ ಬ್ಯಾಟಿಂಗ್. ಒಂದು ಕಡೆ ಫಿನಿಶರ್, ಒಂದು ಕಡೆಯ ಜವಾಬ್ದಾರಿಯಿಂದ ಆಡಿ ಆಸರೆಯಾಗುತ್ತಿದ್ದಾರೆ. ಮುಂದೆ ರಿಂಕು ಸಿಂಗ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್... ಭಾರತೀಯರ ಸರಹದ್ದೇ ಮುಗಿಯಲ್ಲ, 8 ವಿಕೆಟ್ ಬಿದ್ದರೂ ಬ್ಯಾಟಿಂಗ್ ಬಲವೇ ಕುಗ್ಗಲ್ಲ, ಬೌಲಿಂಗ್ ವಿಚಾರದಲ್ಲೂ ಅದೇ. ಬೂಮ್ರಾ ಲಯಕ್ಕೆ ಮರಳಿದ್ದಾರೆ. ಹಾರ್ದಿಕ್ ಪಾಂಡ್ಯ ತಮ್ಮ ಆಕ್ರಮಣಕಾರಿ ಬೌಲಿಂಗ್‌ನೊಂದಿಗೆ ಭರವಸೆಯನ್ನಿಟ್ಟಿದ್ದಾರೆ. ಇನ್ನು ಲಯದಲ್ಲಿರುವ ವರುಣ್ ಚಕ್ರವರ್ತಿ ಮ್ಯಾಜಿಕ್ ಮಾಡುವುದಕ್ಕೆ ಸಿದ್ಧವಾಗಿದ್ದಾರೆ. ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್ ಕೂಡ ಇದ್ದಾರಲ್ಲ, ಅವರ ಬೌಲಿಂಗ್ ಕೂಡ ವಿಶ್ವಾಸ ಹೆಚ್ಚಿಸಿದೆ.

ದ.ಆಫ್ರಿಕಾಗೆ ಸೇಡಿನ ತವಕ: ಕೈಗೆ ಬಂದ ತುತ್ತು ಬಾಯಿಗೆ ಸಿಗಲೇ ಇಲ್ಲ ಎಂಬಂತೆ ಕಳೆದ ಬಾರಿ ವಿಶ್ವಕಪ್ ಫೈನಲ್‌ನಲ್ಲಿ ದ.ಆಫ್ರಿಕಾ ಬಾಯಿಯಿಂದ ಟ್ರೋಫಿ ಕಸಿದುಕೊಂಡಿತ್ತು ಭಾರತ. ಅಂತಿಮ ಕ್ಷಣದಲ್ಲಿ ಅಂದರೆ ಇನ್ನೇನು ಪಂದ್ಯವನ್ನು ಗೆದ್ದುಬಿಟ್ಟೆವು ಅನ್ನುವಷ್ಟರಲ್ಲಿ ಪಂದ್ಯ ಹೊಳಿಸಿ ಗೆದ್ದು ನೀಡಬಾರದ ಆಘಾತ ಭಾರತ ನೀಡಿತ್ತು. ಇದಕ್ಕಾಗಿ ಪ್ರತಿರೋಧಿಸುವ ಹೆಜ್ಜೆಯಲ್ಲಿ ಆಫ್ರಿಕಾ ಅದೇ ವರ್ಷ ಭಾರತದೊಂದಿಗೆ ಸರಣಿಯಾಡಿತ್ತು, ಟಿ20ಯಲ್ಲೇ. ಅಲ್ಲಿಂದ ಶುರುವಾಯಿತು. ಅಭಿಷೇಕ್ ಶರ್ಮ ಅಬ್ಬರ. ಅವರ ಆಟಕ್ಕೆ ಆ ಸರಣಿಯನ್ನು ಭಾರತ ಗೆದ್ದು ಬೀಗಿತ್ತು. ಇದೆಲ್ಲವೂ ಪರಿಗಣನೆಗೆ ತೆಗೆದುಕೊಂಡಿರುವ ದ.ಆಫ್ರಿಕಾ ಭಾರತದೊಂದಿಗೆ ಸೇಡು ತೀರಿಸಿಕೊಳ್ಳುವ ತವಕದಲ್ಲಿದೆ, ಉತ್ಸಾಹದಲ್ಲಿದೆ.



ಪಿಚ್

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣವು ಬ್ಯಾಟಿಗರಿಗೆ ಲಾಭ ತರುವ ಕ್ರೀಡಾಂಗಣವೆಂದು ಹೇಳಲಾಗುತ್ತದೆ. ಹೆಚ್ಚಿನ ಬೌನ್ಸ್ ಇದೆ. ಸ್ವಿಂಗ್ ಸಿಕ್ಕರೂ ತಿಳಿದುಕೊಂಡು ಬ್ಯಾಟಿಂಗ್ ಮಾಡಬಹುದು. ಆದರೆ ಸ್ಪಿನ್ನರ್‌ಗಳಿಗೆ ಅಕ್ಷರಶಃ ಬೆಂಬಲ ನೀಡುತ್ತದೆ ಅಹಮದಾಬಾದ್. ಬ್ಯಾಟಿಂಗ್ ಮಾಡಬಹುದಾದ ಭರವಸೆಯೊಂದಿಗೆ ಇಬ್ಬನಿ ಕೂಡ ಪಾತ್ರ ವಹಿಸಲಿದೆ, ಹೀಗಾಗಿ ಬೌಲಿಂಗ್ ಆಯ್ಕೆಯೇ ಬೆಸ್ಟ್ ಅನ್ನುತ್ತಾರೆ ಎಕ್ಸ್‌ಪರ್ಟ್ಸ್.

ತಂಡಗಳು

ಭಾರತ: ಇಶಾನ್ ಕಿಶನ್, ಅಭಿಷೇಕ್ ಶರ್ಮ, ತಿಲಕ್ ವರ್ಮಾ, ಸೂರ್ಯಕುಮಾರ್ ಯಾದವ್ (ನಾಯಕ), ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರಿಂಕು ಸಿಂಗ್, ಅಕ್ಷರ್ ಪಟೇಲ್, ಕುಲ್ದೀಪ್ ಯಾದವ್, ವರುಣ್ ಚಕ್ರವರ್ತಿ, ಜಸ್ಪ್ರೀತ್ ಬುಮ್ರಾ, ಸಂಜು ಸ್ಯಾಮ್ಸನ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಅರ್ಷದೀಪ್. ವಾಷಿಂಗ್ಟನ್ ಸುಂದರ್.

ದ.ಆಫ್ರಿಕಾ: ಏಡನ್ ಮಾರ್ಕ್ರಾಮ್ (ನಾಯಕ), ಕ್ವಿಂಟನ್ ಡಿ ಕಾಕ್, ಡೆವಾಲ್ಡ್ ಬ್ರೆವಿಸ್, ಡೇವಿಡ್ ಮಿಲ್ಲರ್, ಮಾರ್ಕೊ ಜಾನ್ಸೆನ್, ಕೇಶವ ಮಹಾರಾಜ್, ಕಗಿಸೊ ರಬಾಡ, ಕ್ವೆನಾ ಮಫಕಾ, ಲುಂಗಿ ಎನ್ಗಿಡಿ, ಜೇಸನ್ ಸ್ಮಿತ್, ಜಾರ್ಜ್ ಲಿಂಡೆ, ಕಾರ್ಬಿನ್ ಬಾಷ್, ಅನ್ರಿಚ್ ನೋಕಿಯ, ಟ್ರಿಸ್ಟಾನ್ ಸ್ಟಬ್ಸ್, ರ್ಯಾನ್ ರಿಕೆಲ್ಟನ್

ಇಂಗ್ಲೆಂಡ್-ಶ್ರೀಲಂಕಾ ಪಂದ್ಯ

ಭಾರತ ಮತ್ತು ದ.ಆಫ್ರಿಕಾ ತಂಡಗಳು ಕದನಕ್ಕೆ ಪ್ರವೇಶಿಸುವ ಮುನ್ನವೇ ಇಂಗ್ಲೆಂಡ್ ಮತ್ತು ಶ್ರೀಲಂಕಾ ತಂಡವನ್ನು ಮುಖಾಮುಖಿಯಾಗಲಿವೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಉಭಯ ತಂಡಗಳು ಉತ್ತಮ ಪ್ರದರ್ಶನ ನೀಡಿವೆ. ಭರವಸೆಯಲ್ಲಿವೆ. ಪಲ್ಲೆಕೆಲೆ ಕ್ರೀಡಾಂಗಣ ಈ ಪಂದ್ಯಕ್ಕೆ ಆತಿಥ್ಯ ನೀಡಲಿದೆ.

3ನೇ ಪಂದ್ಯ: ಭಾರತಕ್ಕೆ ಜಯ | ಮಂಧಾನ ಆಟಕ್ಕೆ ಬೆಚ್ಚಿದ ಆಸೀಸ್

10 ವರ್ಷ ಬಳಿಕ ಸರಣಿ ವಶ

ಅಡಿಲೇಡ್ (ಆಸ್ಟ್ರೇಲಿಯಾ): ಮಹಿಳೆಯರ ಕ್ರಿಕೆಟ್ ಇತಿಹಾಸವೇ ನೆನಪಿಡುವಂತಹ ಪಂದ್ಯದಲ್ಲಿ ಭಾರತ ತಂಡದ ಉಪನಾಯಕಿ ಸ್ಮೃತಿ ಮಂಧಾನ ತಮ್ಮ ತಂಡವನ್ನು ಆಸ್ಟ್ರೇಲಿಯಾ ಮಣ್ಣಲ್ಲಿ ಗೆಲ್ಲಿಸಿದರು.

ಪುರುಷರ ವಿಶ್ವಕಪ್ ಮಧ್ಯೆ ಭಾರತ ಹಾಗೂ ಆಸ್ಟ್ರೇಲಿಯಾ ತಂಡದ ಮಹಿಳೆಯರು ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಮುಖಾಮುಖಿಯಾಗಿದ್ದರು. ಈ ಮೂರು ಪಂದ್ಯಗಳ ಪೈಕಿ ಮೊದಲನೇಯದ್ದನ್ನು ಭಾರತ ಗೆದ್ದರೆ ಎರಡನೇ ಪಂದ್ಯವನ್ನು ಆಸ್ಟ್ರೇಲಿಯಾ ತಂಡ ಗೆದ್ದು ಸರಣಿಯನ್ನು ಕುತೂಹಲಕಾರಿ ನಿರ್ಣಾಯಕ ಹಂತಕ್ಕೆ ಕೊಂಡೊಯ್ದಿದ್ದರು. ಶನಿವಾರ ನಡೆದ ಪಂದ್ಯದಲ್ಲಿ ಭಾರತ 17 ರನ್‌ನಿಂದ ಗೆದ್ದು ಬೀಗಿತು. ಇದರೊಂದಿಗೆ 10 ವರ್ಷ ಬಳಿಕ ಆಸ್ಟ್ರೇಲಿಯಾ ಮಣ್ಣಲ್ಲಿ ಸರಣಿ ಗೆದ್ದು ಮೆರೆದಾಡಿತು.

ಮೂರನೇ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತ್ತು. ದೊಡ್ಡ ಸವಾಲೊಂದನ್ನು ಬೆನ್ನತ್ತಿದ ಆಸ್ಟ್ರೇಲಿಯಾ 9 ವಿಕೆಟ್ ಕಳೆದುಕೊಂಡು 159 ರನ್‌ಗಳಿಸಿ ಸೋಲೊಪ್ಪಿಕೊಂಡಿತು. ಸರಣಿ ಬಿಟ್ಟುಕೊಟ್ಟಿತು.

ಮಂಧಾನ ಭಾರತ ಪರ ಭರ್ಜರಿ ಬ್ಯಾಟಿಂಗ್ ಮಾಡಿ ಮಿಂಚಿದರು. ಪಂದ್ಯದ ರೂವಾರಿ ಎನಿಸಿಕೊಂಡರು. ಆಸ್ಟ್ರೇಲಿಯಾದಲ್ಲಿ ಭಾರತ ಆಟಗಾರ್ತಿಯರು ಮಾಡದ ದಾಖಲೆಯೊಂದನ್ನು ಮಾಡಿ ಸಂಭ್ರಮಪಟ್ಟರು. ಇದಕ್ಕಾಗಿ ಪಂದ್ಯ ಶ್ರೇಷ್ಠ ಪ್ರಶಸ್ತಿ ದೊರೆಯಿತು. ಶ್ರೇಯಾಂಕಾ ಪಾಟೀಲ್ 3 ವಿಕೆಟ್ ಪಡೆದು ಗೆಲುವಿನಲ್ಲಿ ಮಿಂಚಿದರು.

ಮಂಧಾನ ಮಿಂಚಿನಾಟ: ಬ್ಯಾಟಿಂಗ್‌ಗಿಳಿದ ಭಾರತಕ್ಕೆ ಭರ್ಜರಿ ಆರಂಭ ಸಿಕ್ಕಿತು. ಅಸಾಮಾನ್ಯ ಬ್ಯಾಟಿಂಗ್ ಮಾಡಿದ ಮಂಧಾನ ಆಸ್ಟ್ರೇಲಿಯಾ ಬೌಲರ್‌ಗಳ ಕಿವಿ ಹಿಂಡಿದರು. ಆದರೆ ಮತ್ತೊಂದು ಬದಿಯಲ್ಲಿ ಶಫಾಲಿ 7 ರನ್‌ಗಳಿಗೆ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗಿಳಿದ ಜೆಮಿಮಾ ರಾಡ್ರಿಗ್ಸ್ ಮಂಧಾನ ಆಟಕ್ಕೆ ತಕ್ಕ ಸಾಥ್ ನೀಡುವ ಜವಾಬ್ದಾರಿ ಮೈಗೆತ್ತಿಕೊಂಡರು. ಸೆಟ್ ಆಗುವ ಔಪಚಾರಿಕತೆ ಪೂರೈಸಿಕೊಂಡ ಮಂಧಾನ ಸ್ಫೋಟಕ ಬ್ಯಾಟಿಂಗ್ ಮಾಡತೊಡಗಿದರು. 8 ಬೌಂಡರಿ, 3 ಸಿಕ್ಸರ್ ಬಾರಿಸಿದರು ಮಂಧಾನ. ಅವರ ಬ್ಯಾಟಿಂಗ್ ಜತೆಗೆ ಆಸ್ಟ್ರೇಲಿಯಾಗೆ ರಾಡ್ರಿಗ್ಸ್ ಆಟ ತಡೆಯುವುದೂ ತೀರಾ ಕಷ್ಟ ಅನ್ನಿಸಿತು. ನಿಧಾನವಾಗಿ ಬ್ಯಾಟಿಂಗ್ ಮಾಡಿದ ಅವರು, ಮಂಧಾನಗೆ ಬೌಂಡರಿ ಬಾರಿಸುವ ಜವಾಬ್ದಾರಿ ಇಟ್ಟು ತಾವು ಸಿಂಗಲ್‌ಗಳ ಪ್ರವಾಹ ಹರಿಸಿದರು. ಇತ್ತ ಮಂಧಾನ 55 ಬಾಲ್‌ಗಳಲ್ಲಿ 82 ರನ್‌ಗಳಿಸಿ ಅರ್ಧಶತಕ ತಪ್ಪಿಸಿಕೊಂಡರು. ರಾಡ್ರಿಗ್ಸ್ 59 ರನ್‌ಗೆ ಆಟ ನಿಲ್ಲಿಸಿದರು.

ಗುರಿ ಬೆನ್ನತ್ತಿದ ಆಸೀಸ್ ನಲುಗಿತು. ಯಾರೊಬ್ಬರೂ ತಂಡವನ್ನು ಗೆಲುವಿನ ದಡಕ್ಕೆ ಸೇರಿಸುವ ಬ್ಯಾಟಿಂಗ್ ಮಾಡಲಿಲ್ಲ, ಆದಾಗ್ಯೂ ಆಸ್ಟ್ರೇಲಿಯಾದ ಹೋಪ್ ಉಳಿಸಿದ ಗಾರ್ಡನರ್ ಮಧ್ಯಮ ಕ್ರಮಾಂಕದಲ್ಲಿ 57 ರನ್‌ಗಳನ್ನು ಬಾರಿಸಿದರು. ಭಾರತ ಪರ ಶ್ರೀ ಚರಣಿ, ಶ್ರೇಯಾಂಕಾ ಪಾಟೀಲ್ ಮೂರು ವಿಕೆಟ್ ಪಡೆದರೆ, ರೆಡ್ಡಿ 2, ಠಾಕೂರ್ ಒಂದು ವಿಕೆಟ್ ಪಡೆದರು.



ಭಾರತ ದಾಖಲೆ

ಈ ಸರಣಿ ಗೆಲುವಿನೊಂದಿಗೆ ಭಾರತ ಎರಡನೇ ಬಾರಿಗೆ ಆಸ್ಟ್ರೇಲಿಯಾ ತಂಡವನ್ನು ಆಸ್ಟ್ರೇಲಿಯಾ ಮಣ್ಣಲ್ಲೇ ಸೋಲಿಸಿದರು. ಈ ಹಿಂದೆ 2016ರಲ್ಲಿ ಭಾರತ ಈ ಸಾಧನೆ ಮಾಡಿತ್ತು. 10 ವರ್ಷ ಬಳಿಕ ಮತ್ತೊಮ್ಮೆ ಇತಿಹಾಸವಾಯಿತು.

ಸಂಕ್ಷಿಪ್ತ ಸ್ಕೋರ್

ಭಾರತ 20 ಓವರ್‌ಗಳಲ್ಲಿ 176/6: ಮಂಧಾನ 82, ರಾಡ್ರಿಗ್ಸ್ 59; ಅನಾಬೆಲ್ 34/2

ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 159/9: ಗಾರ್ಡನರ್ 57; ಶ್ರೇಯಾಂಕಾ 22/3, ಚಾರಣಿ 32/3

ಮಳೆಯಲ್ಲಿ ಮುಳುಗಿದ ಪಾಕ್-ಕಿವೀಸ್ ಪಂದ್ಯ

ಕೊಲಂಬೋ: ಶ್ರೀಲಂಕಾದಲ್ಲಿ ನಡೆಯಬೇಕಿದ್ದ ನ್ಯೂಜಿಲೆಂಡ್ ಹಾಗೂ ಪಾಕಿಸ್ತಾನ ನಡುವಿನ ಸೂಪರ್-8ರ ಮೊದಲ ಪಂದ್ಯ ನಡೆಸಲು ಮಳೆ ಅಪ್ಪಣೆ ನೀಡಲಿಲ್ಲ. ಈ ಬಾರಿಯ ವಿಶ್ವಕಪ್ ಪಂದ್ಯಾವಳಿಯಲ್ಲಿ ಎರಡನೇ ಬಾರಿಗೆ ಪಂದ್ಯವೊಂದು ರದ್ದಾಯಿತು.

ಲೀಗ್ ಹಂತದ ಪಂದ್ಯಗಳ ಮುಕ್ತಾಯಗೊಂಡ ನಂತರ ಸೂಪರ್-8ರ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಬೇಕಿದ್ದವು. ಆದರೆ ಶ್ರೀಲಂಕಾದ ಕೊಲಂಬೋದಲ್ಲಿ ಬೆಳಗ್ಗೆಯಿಂದಲೇ ಅಲ್ಪ ಮಳೆ, ಮಳೆಯ ವಾತಾವರಣ ಕಾಣಿಸಿಕೊಂಡಿತ್ತು. ಸಂಜೆಯಾದ ತಕ್ಷಣ ಮಳೆ ಬರುವ ಸಂಭವ ಹೆಚ್ಚಿಸಿತು. ಅಷ್ಟೊತ್ತಿಗಾಗಲೇ ಪಂದ್ಯವನ್ನು ನೋಡಲಿಕೆ ಬಂದ ಸಹಸ್ರಾರು ಅಭಿಮಾನಿಗಳು ತಮ್ಮ ಚೇರ್‌ಗಳಲ್ಲಿ ಕೂತಿದ್ದರು. ಟಾಸ್ ಮಾಡಲಾಯಿತು. ಜನರು ಖುಷಿಯಾದರು. ಇನ್ನೇನು ಪಂದ್ಯ ಆರಂಭವಾಯಿತು ಎನ್ನುವಷ್ಟರಲ್ಲಿ ಮಳೆಯ ಆಟ ಶುರುವಾಯಿತು. ಮಳೆಯ ರಭಸಕ್ಕೆ ಪಂದ್ಯವೇ ತತ್ತರಿಸಿ ಹೋಯಿತು.

ಮೊದಲಿಗೆ ಪಂದ್ಯದ ಓವರ್ ಕಡಿತ ಆರಂಭಕ್ಕೆ 8:15 ಸಮಯ ಕೊಟ್ಟು ಪಂದ್ಯಕ್ಕಾಗಿ ಕಾಯಲಾಯಿತು. ಕನಿಷ್ಠ 5 ಓವರ್ ಪಂದ್ಯಕ್ಕಾಗಿ ರಾತ್ರಿ 10:16ಕ್ಕೆ ಕೊನೆ ಸಮಯ ನೀಡಲಾಗಿತ್ತು. ಆದರೆ ಬಿಟ್ಟೂಬಿಡದ ಮಳೆ ಪಂದ್ಯವನ್ನು ತೊಳೆಯಿತು. ತಂಡಗಳನ್ನು ಒತ್ತಡಕ್ಕೆ ದೂಡಿತು. ಅಭಿಮಾನಿಗಳಿಗೆ ನಿರಾಸೆ ಮೂಡಿಸಿತು.

ಇಬ್ಬರಿಗೂ ಒಂದು ಅಂಕ: ಸೂಪರ್-8ರ ಮೊದಲ ಪಂದ್ಯವೇ ರದ್ದಾಗಿದೆ. ಈ ಬೆನ್ನಲ್ಲೇ ನ್ಯೂಜಿಲೆಂಡ್ ಮತ್ತು ಪಾಕ್ ತಂಡಗಳಿಗೆ ತಲಾ ಒಂದು ಅಂಕ ನೀಡಲಾಯಿತು. ಎರಡನೇ ಗುಂಪಿನಲ್ಲಿ ಉಭಯ ತಂಡಗಳು ಒಂದು ಪಂದ್ಯ ಗೆಲ್ಲುವ ಅವಕಾಶ ಕಳೆದುಕೊಂಡಿವೆ. ಆದರೆ ಒಂದು ಹಂತದಲ್ಲಿ ಮುನ್ನಡೆಯನ್ನೂ ಸಾಧಿಸಿವೆ.



ಕತಾರ್ ಓಪನ್: ಫೈನಲ್‌ಗೆ ಅಲ್ಕರಾಜ್

ದೋಹಾ: ವಿಶ್ವ ನಂ.1 ಟೆನಿಸ್ ಆಟಗಾರ ಆಸ್ಟ್ರೇಲಿಯಾ ಓಪನ್ ವಿಜೇತ ಕಾರ್ಲೋಸ್ ಅಲ್ಕರಾಜ್ ತನ್ನ ಅಜೇಯ ಸರಣಿಯನ್ನು ಮುಂದುವರಿಸಿ, ಹಾಲಿ ಚಾಂಪಿಯನ್ ಆಂಡ್ರೆ ರುಬ್ಲೆವ್ ವಿರುದ್ಧ 7–6(3), 6–4 ಅಂಕಗಳ ಗೆಲುವು ಸಾಧಿಸಿ ಕತಾರ್ ಓಪನ್ ಫೈನಲ್‌ಗೆ ಪ್ರವೇಶಿಸಿದ್ದಾರೆ. ಕಳೆದ 13 ಟೂರ್ನಿಗಳಲ್ಲಿ ಇದು ಅವರ 12ನೇ ಫೈನಲ್ ಪ್ರವೇಶವಾಗಿದೆ.

ಮೊದಲ ಸೆಟ್‌ನಲ್ಲಿ ರುಬ್ಲೆವ್ 14 ಅನಾಯಾಸ ಬ್ಯಾಕ್‌ಹ್ಯಾಂಡ್ ದೋಷಗಳನ್ನು ಮಾಡಿದ್ದರೂ, ನಿಖರ ಫೋರ್‌ಹ್ಯಾಂಡ್ ಹೊಡೆತಗಳಿಂದ ಸೆಟ್‌ನ್ನು ಟೈಬ್ರೇಕ್‌ಗೆ ಕೊಂಡೊಯ್ದರು. ಆದರೆ ಟೈಬ್ರೇಕ್‌ನಲ್ಲಿ ಅಲ್ಕರಾಜ್ 6–3 ಮುನ್ನಡೆ ಸಾಧಿಸಿ ಶಾಂತ ಮನಸ್ಸಿನಿಂದ ಸೆಟ್ ಕಬಳಿಸಿದರು. ನಿರಾಶರಾದ ರುಬ್ಲೆವ್ ಕೋಪದಲ್ಲಿ ರಾಕೆಟ್ ನೆಲಕ್ಕೆ ಬಡಿದು ಸ್ಟ್ರಿಂಗ್ ಮುರಿದ ಘಟನೆ ಗಮನಸೆಳೆಯಿತು. ಎರಡನೇ ಸೆಟ್‌ನಲ್ಲಿ ಅಲ್ಕರಾಜ್ 5–3 ಮುನ್ನಡೆ ಪಡೆದು ಪಂದ್ಯ ಸರ್ವ್ ಮಾಡಲು ಬಂದಾಗ, ವಿಶ್ವ ನಂ.14 ರುಬ್ಲೆವ್ ಮೂರು ಮ್ಯಾಚ್ ಪಾಯಿಂಟ್‌ಗಳನ್ನು ಉಳಿಸಿ ಬ್ರೇಕ್ ಹಿಂದಕ್ಕೆ ಪಡೆದರು. ಆದರೂ ಮುಂದಿನ ಗೇಮ್‌ನಲ್ಲಿ ಮತ್ತೆ ಬ್ರೇಕ್ ಸಾಧಿಸಿದ ಅಲ್ಕರಾಜ್, ಒಟ್ಟು ಆರನೇ ಮ್ಯಾಚ್ ಪಾಯಿಂಟ್‌ನಲ್ಲಿ ರುಬ್ಲೆವ್ ಬ್ಯಾಕ್‌ಹ್ಯಾಂಡ್ ಔಟ್ ಆಗುತ್ತಿದ್ದಂತೆ ಜಯವನ್ನು ಖಚಿತಪಡಿಸಿದರು. 22 ವರ್ಷದ ಅಲ್ಕರಾಜ್ ಈ ಸೀಸನ್‌ನಲ್ಲಿ 11ನೇ ನಿರಂತರ ಜಯ ದಾಖಲಿಸಿದ್ದಾರೆ. ಇತ್ತೀಚಿನ ನಾಲ್ಕು ಗ್ರ್ಯಾಂಡ್ ಸ್ಲ್ಯಾಮ್‌ಗಳಲ್ಲಿ ಫೈನಲ್ ಪ್ರವೇಶಿಸಿ ಮೂರನ್ನು ಗೆದ್ದಿರುವ ಅವರು, ಪ್ರತಿ ಪಂದ್ಯಕ್ಕೂ ನಾನು ಸಿದ್ಧವಾಗಿ ಇಳಿಯುತ್ತೇನೆ. ನನ್ನ ಆಟದ ಮೇಲಿನ ಗಮನ ಮತ್ತು ಪರಿಶ್ರಮ ಫಲ ನೀಡುತ್ತಿದೆ, ಎಂದು ಹೇಳಿದ್ದಾರೆ.

ಏಷ್ಯಾಕಪ್ ಫೈನಲ್‌ನಲ್ಲಿಂದು ಭಾರತ-ಬಾಂಗ್ಲಾ

ಬ್ಯಾಂಕಾಕ್: ಪುರುಷರ ವಿಶ್ವಕಪ್ ವಿಚಾರಕ್ಕೆ ಸಂಬಂಧಿಸಿದಂತೆ ಭಾರತ ಹಾಗೂ ಬಾಂಗ್ಲಾ ನಡುವೆ ಉದ್ವೇಗ ಸೃಷ್ಟಿಯಾಗಿರುವ ಬೆನ್ನಲ್ಲೇ ಬ್ಯಾಂಕಾಕ್‌ನಲ್ಲಿ ನಡೆಯುತ್ತಿರುವ ಮಹಿಳೆಯರ ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್ ಫೈನಲ್ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಶ್ರೀಲಂಕಾದೊಂದಿಗಿನ ಪಂದ್ಯದಲ್ಲಿ ಆಲ್‌ರೌಂಡ್ ಆಟ ಪ್ರದರ್ಶಿಸಿರುವ ಭಾರತ ಸೆಮಿನಲ್ಲಿ ಭರ್ಜರಿ ಗೆಲುವು ಸಾಧಿಸಿದೆ. ಇದರೊಂದಿಗೆ ಫೈನಲ್‌ಗಾಗಿ ಕಾಯುತ್ತಿದ್ದ ಬಾಂಗ್ಲಾದೊಂದಿಗಿನ ಪಂದ್ಯಕ್ಕೆ ಅಣಿಯಾಗಿದೆ. ಒಂದು ಕಡೆ ಭಾರತ ಹಾಗೂ ಬಾಂಗ್ಲಾ ಕ್ರಿಕೆಟ್ ಸಂಸ್ಥೆಗಳ ನಡುವೆ ಭಾರೀ ಪೈಪೋಟಿ ಎದ್ದಿದೆ. ಪುರುಷರ ವಿಶ್ವಕಪ್‌ನಲ್ಲಿ ಬಾಂಗ್ಲಾ ತಂಡವನ್ನು ಹೊರಹಾಕಲಾಗಿದೆ. ಇದೇ ವೇಳೆ ಈ ಎರಡೂ ತಂಡಗಳು ಮುಖಾಮುಖಿಯಾಗಲಿರುವುದು ಕುತೂಹಲ ಮೂಡಿಸಿದೆ. ಪೂರ್ಣ ಪಂದ್ಯಾವಳಿ ಬ್ಯಾಂಕಾಕ್‌ನಲ್ಲೇ ನಡೆಯುತ್ತಿದ್ದು, ಫೈನಲ್ ಪಂದ್ಯ ಕೂಡ ಬ್ಯಾಂಕಾಕ್‌ನಲ್ಲೇ ಜರುಗಲಿದೆ.

ಇತಿಹಾಸ ನಿರ್ಮಿಸಿದ ವೈಷ್ಣವಿ ಅಡ್ಕರ್

ಬೆಂಗಳೂರು: ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಬೆಂಗಳೂರು 2026 ಟೂರ್ನಿಯಲ್ಲಿ ವೈಷ್ಣವಿ ಅಡ್ಕರ್ ಐತಿಹಾಸಿಕ ಸಾಧನೆ ಮಾಡಿದ್ದಾರೆ. ತಮ್ಮ ಅಸಾಧಾರಣ ಪ್ರದರ್ಶನದೊಂದಿಗೆ ಎಲ್ಲರನ್ನೂ ಬೆಚ್ಚಿಬೀಳಿಸಿರುವ ಅವರು, 100 ಡಬ್ಲ್ಯು 100 ಮಟ್ಟದ ಐಟಿಎಫ್ ಟೂರ್ನಿಯ ಫೈನಲ್‌ಗೆ ಪ್ರವೇಶಿಸಿದ ಮೊದಲ ಭಾರತೀಯ ಮಹಿಳೆ ಎಂಬ ಗೌರವ ಪಡೆದಿದ್ದಾರೆ. ಬೆಂಗಳೂರು ಅಥವಾ ಅದಕ್ಕಿಂತ ಮೇಲಿನ ಐಟಿಎಫ್ ಸಿಂಗಲ್ಸ್ ಫೈನಲ್‌ಗೆ ಪ್ರವೇಶಿಸಿದ ಮೊದಲ ಭಾರತೀಯ ಆಟಗಾರ್ತಿಯಾಗಿ ಅವರು ಗುರುತಿಸಿಕೊಂಡಿದ್ದಾರೆ.

ಪುಣೆ ಮೂಲದ 21 ವರ್ಷದ ಅಡ್ಕರ್, ವೈಲ್ಡ್ ಕಾರ್ಡ್ ಮೂಲಕ ಸ್ಪರ್ಧಿಸಿದ್ದರು, ಸೆಮಿಫೈನಲ್‌ನಲ್ಲಿ ವಿಶ್ವ ಕ್ರಮಾಂಕ 126 ಮತ್ತು ದ್ವಿತೀಯ ಸೀಡ್ ಲಾನ್‌ಲಾನಾ ಟರಾರುಡಿ (ಥೈಲ್ಯಾಂಡ್) ಅವರನ್ನು 6–3, 6–3 ಅಂತರದಲ್ಲಿ ಮಣಿಸಿ ಫೈನಲ್ ಟಿಕೆಟ್ ಪಡೆದರು.

ಸಾನಿಯಾ ನಂತರ ವೈಷ್ಣವಿಯಿಂದ ಸಾಧನೆ: 2009ರಲ್ಲಿ ಪಟಾಯಾದಲ್ಲಿ ನಡೆದ ಡಬ್ಲ್ಯುಟಿಎ ಇಂಟರ್‌ನ್ಯಾಷನಲ್ ಟೂರ್ನಿಯಲ್ಲಿ ಸಾನಿಯಾ ಮಿರ್ಜಾ ಫೈನಲ್ ಪ್ರವೇಶಿಸಿದ್ದರ ನಂತರ ಈ ಸಾಧನೆ ಮತ್ತೊಬ್ಬ ಭಾರತೀಯರಿಂದ ಆಗಿರಲಿಲ್ಲ. ಬೆಂಗಳೂರಿನ ಈ ಟೂರ್ನಿಯಲ್ಲಿ ಅಡ್ಕರ್ ಎರಡು ಟಾಪ್ 150 ಮತ್ತು ಒಂದು ಟಾಪ್ 250 ಆಟಗಾರ್ತಿಯರನ್ನು ಸೋಲಿಸಿ ಫೈನಲ್‌ಗೆ ತಲುಪಿರುವುದು ವಿಶೇಷ.




ಸೆಮಿಫೈನಲ್ ಪಂದ್ಯ ವಿವರ: ಆರಂಭದಿಂದಲೇ ಇಬ್ಬರು ಆಟಗಾರ್ತಿಯರೂ ಸಮಬಲದ ಪ್ರದರ್ಶನ ನೀಡಿದರು. ಒಂದು ಡಬಲ್ ಫಾಲ್ಟ್ ಸಹಿತ ಬ್ರೇಕ್ ಪಡೆದ ಅಡ್ಕರ್ 6–3 ಅಂತರದಲ್ಲಿ ಸೆಟ್ ತಮ್ಮದಾಗಿಸಿಕೊಂಡರು.

ಎರಡನೇ ಸೆಟ್‌ನಲ್ಲೂ ಅಡ್ಕರ್ ಅದೇ ವೇಗ ಮುಂದುವರಿಸಿದರು. ಟರಾರುಡಿ ಬ್ರೇಕ್‌ಬ್ಯಾಕ್ ಮಾಡಿದರೂ, ಆರನೇ ಗೇಮ್‌ನಲ್ಲಿ ಎರಡು ಅದ್ಭುತ ಬ್ಯಾಕ್‌ಹ್ಯಾಂಡ್ ವಿನ್ನರ್ಸ್ ಮೂಲಕ ಅಡ್ಕರ್ ಮತ್ತೆ ಮುನ್ನಡೆ ಪಡೆದರು. ಒತ್ತಡದ ಕ್ಷಣದಲ್ಲಿ ಶಾಂತ ಮನೋಭಾವ ತೋರಿದ ಅವರು 6–3 ಅಂತರದಲ್ಲಿ ಪಂದ್ಯವನ್ನು ಮುಗಿಸಿದರು.

ಮತ್ತೊಂದು ಸೆಮಿನಲ್ಲಿ: ಇನ್ನೊಂದು ಸೆಮಿಫೈನಲ್‌ನಲ್ಲಿ ಮೂರನೇ ಸೀಡ್ ಹ್ಯಾನ್ನೆ ವಾಂಡೆವಿಂಕೆಲ್ (ಬೆಲ್ಜಿಯಂ) ಐದನೇ ಸೀಡ್ ಪೊಲಿನಾ ಇಯಾಟ್ಸೆಂಕೊ ಅವರನ್ನು 6–4, 7–6(5) ಅಂತರದಲ್ಲಿ ಸೋಲಿಸಿ ಫೈನಲ್‌ಗೆ ಪ್ರವೇಶಿಸಿದರು. ಫೈನಲ್‌ನಲ್ಲಿ ಅಡ್ಕರ್ ಮತ್ತು ವಾಂಡೆವಿಂಕೆಲ್ ಮುಖಾಮುಖಿಯಾಗಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5903

ಎಡದಿಂದ ಬಲಕ್ಕೆ

2.ಅರಿ–ಮರ ಒಳಗೊಂಡ ಅನುಮಾನ (5)
5.ಮಂಚದ ಕಡೆಯಲ್ಲಿ ಅಂಗ ಸೇರಿದೆ (3)
6.ಮೊಳಕೆಯೊಡೆಯುವಿಕೆ–ಚಿಗುರು (3)
7.ಕಂಡ ಕನಸು ದಿಟವಾಗುವಿಕೆ (4)
9.ದಿನದ ಅಶುಭ ಸಮಯ (4)
10.ಸೊಗಸಿನಿಂದ ಕೂಡಿದ್ದು–ಸುಂದರವಾದುದು (4)
11.ಅಜ್ಞಾನವೆಂಬ ಸ್ವಭಾವ ತಿರುಗಿದೆ (4)
13. ಗಾಡಿಯ ನಡುವೆ ಇಂದ್ರಜಾಲ ವಿದ್ಯೆಯಿದೆ (3)
15.ಆಶೀರ್ವಾದ ಸಂಕಲ್ಪ (3)
16.ಕಣ್ತಪ್ಪಿಸಿ ತಿರುಗಾಡು (5)

ಮೇಲಿನಿಂದ ಕೆಳಕ್ಕೆ

1.ಕಷ್ಟಕಾಲಕ್ಕೆ ಇರಲೆಂದು ತೆಗೆದಿಟ್ಟ ಹಣ (4)
2.ಅಂಗದನು ಏರಿದ ಬೆಟ್ಟ (2)
3.ಹತೋಟಿ ತಲೆಕೆಳಗಾಗಿದೆ (2)
4.ಬಲದ ನಡುವೆ ಕ್ಷಾಮವಡಗಿದೆ (4)
8.ಬಟ್ಟೆಯ ತಾತ್ಕಾಲಿಕ ವಸತಿ (3)
9.ಗಟ್ಟಿಯಾದ ಕೂಗು ಎಂಬರ್ಥದ ರಾಕ್ಷಸ ರಾಜ (3)
10.ಮೀನು ಸಂಗ್ರಹಣೆಯ ಆಗರ (4)
12.ಬುದ್ಧಿ ವಿಕಲ್ಪವಾಗು (4)
14.ತಕ್ಕಡಿಯಲ್ಲಿ ಕುದುರೆ ಜೀನನ್ನು ಉಲ್ಟಾ ಇಟ್ಟಿದ್ದಾರೆ (2)
15.ಹರಸು ಎಂದು ಬೇಡಿಕೊಂಡದ್ದು ಈ ಅಕ್ಷನ್ನು (2)

5902 ಉತ್ತರ

ಎಡದಿಂದ ಬಲಕ್ಕೆ:

2.ಮಹಾಭಾರತ
5.ಶಿಬಿರ 7.ಅಂಬರ
9.ತಾಂಡವ 11.ಕಡೆಗಾಲ
13.ವಿನಾಯಿಸು
16.ನಗೆಗಾರ 17.ಕಾಶಸ್ಥಾನ

ಮೇಲಿನಿಂದ ಕೆಳಕ್ಕೆ :

1.ಕಾಶಿ 2.ಮರ 3.ಅಂತ
4.ಧೀರ 6.ಬಿಡುಗಡೆ
8.ಬಡವಾಯಿ 9.ತಾಂಬೂಲ
10.ವಿಭವ 11.ಕಡಲತೀರ
12.ಗಾಗುಗುಪ್ಪೆಗೆ
14.ನಾಶಕಾರಕ
15.ಸುರಸಂತಾನ

ಮಾರ್ನಿಂಗ್ ಶೋ

ಭಾನುವಾರ, 22 ಫೆಬ್ರವರಿ 2026
ಬೆಂಗಳೂರು

ಗ್ರಾಮಾಯಣ ಚಿತ್ರದಲ್ಲಿ ತಡ್ಕಾ ತಡ್ಕಾ ಹಾಡು



ಲಹರಿ ಫಿಲಂಸ್ ನಿರ್ಮಾಣದ 'ಗ್ರಾಮಾಯಣ' ಚಿತ್ರದ ಮತ್ತೊಂದು ಸಾಂಗ್ ಶನಿವಾರ ಸಂಜೆ ಬಿಡುಗಡೆಯಾಗಿದೆ, ಆಂಟೋನಿ ದಾಸನ್ ಅವರು ಹಾಡಿರುವ ಈ ಹಾಡಿನ ಸಾಲುಗಳನ್ನು ತ್ರಿಲೋಕ್ ತ್ರಿವಿಕ್ರಮ ಅವರು ರಚಿಸಿದ್ದಾರೆ, ಗ್ರಾಮೀಣ ಪ್ರದೇಶದ ಹಿನ್ನೆಲೆಯಲ್ಲಿ ಮೂಡಿಬಂದಿರುವ ಈ ಹಾಡಲ್ಲಿ ನಾಯಕ ವಿನಯ್ ರಾಜ ಕುಮಾರ್ ಹಾಗೂ ನಾಯಕಿ ಮೇಘಾ ಶೆಟ್ಟಿ ಅವರುಗಳು ಅಭಿನಯಿಸಿದ್ದಾರೆ. ಕಳೆದ ತಿಂಗಳಷ್ಟೇ ಬಿಡುಗಡೆಯಾಗಿದ್ದ ಬೆಂಕಿಯಲ್ಲಿ ತಂಪು ಕಂಡೆನು ಹಾಡು ಸೋಷಿಯಲ್ ಮೀಡಿಯಾದಲ್ಲಿ ಅತಿಹೆಚ್ಚು ವೀಕ್ಷಣೆಯಾಗುವ ಮೂಲಕ ದೊಡ್ಡ ಮಟ್ಟದಲ್ಲಿ ವೈರಲ್ ಆಗಿತ್ತು. 80ರ ದಶಕದ ಮನ ಮೆಚ್ಚಿದ ಹುಡುಗಿ ಚಿತ್ರದ ನಿನ್ನಾಣೆ ನಾನು ಬೆಂಕಿಯಲ್ಲೂ ತಂಪು ಕಂಡೆನು ಹಾಡನ್ನು ಇಲ್ಲಿ ಮರುಬಳಕೆ ಮಾಡಲಾಗಿತ್ತು, ಗ್ರಾಮಾಯಣ ಚಿತ್ರದಲ್ಲಿ ಗ್ರಾಮೀಣ ಸೊಗಡಿನಲ್ಲಿ ಮೂಡಿಬಂದಿರುವ 9 ಸುಂದರ ಹಾಡುಗಳಿವೆ. ಈಗಾಗಲೇ ಗ್ರಾಮೀಣ ಸೊಗಡಿನ ಸೋಲ್ ಆಫ್ ಗ್ರಾಮಾಯಣ ಹಾಡು ಕೂಡ ವೈರಲ್ ಆಗಿದೆ, ಲಹರಿ ಫಿಲಂಸ್ ಬ್ಯಾನರ್ ಅಡಿ ಗ್ರಾಮಾಯಣ ಚಿತ್ರವನ್ನು ಲಹರಿ ವೇಲು, ಮನೋಹರ ನಾಯ್ಡು, ಚಂದ್ರು, ಹಾಗೂ ನವೀನ್ ಅವರುಗಳು ನಿರ್ಮಾಣ ಮಾಡಿದ್ದಾರೆ.







ನಿರ್ಮಾಪಕ ಲಹರಿ ವೇಲು ಮಾತನಾಡುತ ಇಡೀ ಚಿತ್ರತಂಡ ತುಂಬಾ ಕಷ್ಟಪಟ್ಟು ಗ್ರಾಮಾಯಣ ಸಿನಿಮಾವನ್ನು ತಯಾರು ಮಾಡಿದೆ. ನಾನು ಈಗಾಗಲೇ ಚಿತ್ರವನ್ನು ನೋಡಿದ್ದೇನೆ, ನಿರ್ದೇಶಕರು ಅದ್ಭುತವಾಗಿ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಚಿತ್ರದಲ್ಲಿ ಹಳ್ಳಿಯ ಸೊಗಡನ್ನು ಅಚ್ಚುಕಟ್ಟಾಗಿ ತೋರಿಸಿದ್ದಾರೆ. 'ಇಂತಹ ಚಿತ್ರಗಳು ಈಗಿನ ಕಾಲದ ಪ್ರೇಕ್ಷಕರಿಗೆ ಬೇಕಾಗಿದೆ. ಗ್ರಾಮಾಯಣ ನಮ್ಮ ಬ್ಯಾನರ್‌ನಲ್ಲಿ ನಿರ್ಮಾಣವಾದ 9ನೇ ಚಿತ್ರ, ಇದೀಗ ಆಂಟೋನಿ ದಾಸನ್ ದನಿಯಾಗಿರುವ ಮತ್ತೊಂದು ಹಾಡನ್ನು ರಿಲೀಸ್ ಮಾಡಿದ್ದೇವೆ, ನಮ್ಮ ಚಿತ್ರದ ಎಲ್ಲ ಹಾಡುಗಳೂ ಒಂದಕ್ಕಿಂತ ಒಂದು ಅದ್ಭುತವಾಗಿ ಮೂಡಿಬಂದಿವೆ ಎಂದರು.

ನಿರ್ದೇಶಕ ದೇವನೂರು ಚಂದ್ರು, ಮಾತನಾಡಿ, 'ನಿರ್ಮಾಪಕರು ನಾನು ಕೇಳಿದ್ದೆಲ್ಲವನ್ನು ಒದಗಿಸಿ ಕೊಡುವ ಮೂಲಕ ಚಿತ್ರ ಅದ್ದೂರಿಯಾಗಿ ಮೂಡಿಬರಲು ಸಹಕಾರ ನೀಡಿದ್ದಾರೆ. ಈ ಚಿತ್ರದ ಕಥೆಯನ್ನು ವಿನಯ್ ರಾಜಕುಮಾರ್ ಅವರಿಗೂ ಮೊದಲೇ ಸಂಗೀತ ನಿರ್ದೇಶಕ ಪೂರ್ಣ ಚಂದ್ರ ತೇಜಸ್ವಿ ಅವರಿಗೆ ಹೇಳಿದ್ದೆ. ಅವರು ಸಾಕಷ್ಟು ಶ್ರಮಪಟ್ಟು ಹಳ್ಳಿ ಸೊಗಡಿನ ಸಂಗೀತವನ್ನು ಕಟ್ಟಿ ಕೊಟ್ಟಿದ್ದಾರೆ. 56 ದಿನಗಳ ಕಾಲ ಗ್ರಾಮಾಯಣ ಚಿತ್ರದ ಶೂಟಿಂಗ್ ನಡೆಸಿದ್ದೇವೆ. ಗ್ರಾಮಾಯಣ ಕೇವಲ ಹಳ್ಳಿ ಕಥೆಯಲ್ಲ, ಇದು ಇಂದಿನ ತಲೆಮಾರಿನ ಕಥೆ, ಚಿತ್ರದಲ್ಲಿ ಲೂಸ್‌ಮಾದ ಯೋಗಿ ಒಂದು ಮುಖ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬಲ ರಾಜವಾಡಿ, ಸೀತಾ ಕೋಟೆ, ಜಹಾಂಗೀರ್, ಅಶೋಕ್ ಜಂಬೆ, ನಿರ್ದೇಶಕ ಸತ್ಯಪ್ರಕಾಶ್, ಅಚ್ಯುತ್‌ಕುಮಾರ್ ಸೇರಿದಂತೆ ಸಾಕಷ್ಟು ರಂಗಭೂಮಿ ಕಲಾವಿದರು ನಮ್ಮ ಚಿತ್ರದಲ್ಲಿ ನಟಿಸಿದ್ದಾರೆ. ಅಲ್ಲದೆ ದಿವಂಗತ ಅಪರ್ಣಾ ವಸ್ತಾರೆ ಅವರು ನಟಿಸಿದ ಕೊನೆಯ ಚಿತ್ರವೂ ಇದಾಗಿದೆ' ಎಂದು ಚಿತ್ರದ ಬಗ್ಗೆ ಮಾಹಿತಿ ನೀಡಿದರು. ಚಿತ್ರದ ನಾಯಕಿಯ ಪಾತ್ರವನ್ನು ಮೇಘಾ ಶೆಟ್ಟಿ ನಿರ್ವಹಿಸಿದ್ದಾರೆ, 'ನಿರ್ದೇಶಕರು ತುಂಬಾ ಕಷ್ಟ ಅನುಭವಿಸಿ ಗ್ರಾಮಾಯಣ ಚಿತ್ರವನ್ನು ಈಗ ರಿಲೀಸ್ ಹಂತಕ್ಕೆ ತಂದಿದ್ದಾರೆ. ಚಿತ್ರದಲ್ಲಿ ನನ್ನ ಪಾತ್ರದ ಹೆಸರು ಕುಸುಮ. ತುಂಬಾ ಹಠವಾದಿ ಹುಡುಗಿಯ ಪಾತ್ರವದು' ಎಂದು ಹೇಳಿದರು. ಅರುಣ್ ಸಾಗರ, ಗೋಪಾಲಕೃಷ್ಣ ದೇಶಪಾಂಡೆ ಪ್ರಮುಖ ಪಾತ್ರಗಳಲ್ಲಿದ್ದಾರೆ, ಈ ಚಿತ್ರಕ್ಕೆ ಸಂತೋಷ ರೈ ಪಾತಾಜೆ ಅವರ ಛಾಯಾಗ್ರಹಣವಿದೆ.

ಸೈಬರ್ ವಂಚಕರ ಜಾಲ ಪತ್ತೆಹಚ್ಚಿದ ದೊಡ್ಡಣ್ಣ ಪುಟ್ಟಣ್ಣ

ಈ ಮೊದಲು ಪೊಲೀಸ್ ವ್ಯವಸ್ಥೆಯ ಸುತ್ತ ನಡೆಯುವ ಘಟನೆಗಳನ್ನು ಇಟ್ಟುಕೊಂಡು ರಕ್ಷಕ ಎಂಬ ಚಿತ್ರ ನಿರ್ಮಿಸಿದ್ದ ವಿಜಯಕುಮಾರ್ ಅವರ ನಿರ್ದೇಶನದ ಮತ್ತೊಂದು ಚಿತ್ರ, ದೊಡ್ಡಣ್ಣ ಪುಟ್ಟಣ್ಣ ಈವಾರ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಂಡಿದ್ದು ಯಶಸ್ವೀ ಪ್ರದರ್ಶನ ಕಾಣುತ್ತಿದೆ, ರಕ್ಷಕ ಚಿತ್ರದ ಯಶಸ್ಸಿನ ಬೆನ್ನಲ್ಲೇ ವಿಜಯಕುಮಾರ್ ಅವರು ತಮ್ಮ ಎರಡನೇ ಚಿತ್ರವಾಗಿ



ದೊಡ್ಡಣ್ಣ ಪುಟ್ಟಣ್ಣ ಸಿನಿಮಾ ನಿರೂಪಿಸಿದ್ದರು, ದೊಡ್ಡಣ್ಣ ಪುಟ್ಟಣ್ಣ ಸೋಷಿಯಲ್ ಮೀಡಿಯಾ ಮೂಲಕ ಮುಗ್ಧ ಜನರನ್ನು ವಂಚಿಸುವ ದುರುಳರ ಕುರಿತಂತೆ ನಿರ್ದೇಶಕ ವಿಜಯಕುಮಾರ್ ಅವರು ಈ ಚಿತ್ರವನ್ನು ನಿರೂಪಿಸಿದ್ದಾರೆ. ದೊಡ್ಡಣ್ಣ ಪುಟ್ಟಣ್ಣ ಚಿತ್ರದಲ್ಲೂ ಸಹ ಅವರು ಮತ್ತೊಮ್ಮೆ ಪೊಲೀಸ್ ವರ್ದಿ ಹಾಕಿ ಹೊಸ ಸಾಹಸ ಮಾಡಿದ್ದಾರೆ, ಆನ್ ಲೈನ್, ಸೋಷಿಯಲ್ ಮೀಡಿಯಾ ವ್ಯಾಮೋಹದಿಂದ ನಮ್ಮ ದೇಶದ ಹೆಣ್ಣು ಮಕ್ಕಳು ಯಾವರೀತಿ ಟ್ರ್ಯಾಪ್ ಆಗುತ್ತಾರೆ, ಹೇಗೆಲ್ಲಾ ಮೋಸ ಹೋಗುತ್ತಿದ್ದಾರೆ, ಚಿಕ್ಕ ಪುಟ್ಟ ಆಸೆಗೆ ಬಲಿಯಾಗಿ ಹೇಗೆ ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ, ಕೊನೆಯಲ್ಲಿ ಅದಕ್ಕೆ ಪರಿಹಾರದ ಸಂದೇಶವನ್ನೂ ಸಹ ಹೇಳಲಾಗಿದೆ, ದೊಡ್ಡಣ್ಣ ಪುಟ್ಟಣ್ಣ ಚಿತ್ರದ ಟೀಸರ್, ಟ್ರೈಲರ್ ಹಾಗೂ ಲಿರಿಕಲ್ ಸಾಂಗ್ಸ್ ಚಿತ್ರದ ನಿರೀಕ್ಷೆಯನ್ನು ಹೆಚ್ಚುವಂತೆ ಮಾಡಿದ್ದವು, ಹಣ ಕೊಟ್ಟು ಥೇಟರಿಗೆ ಬರುವ ಪ್ರೇಕ್ಷಕರು 2 ಗಂಟೆಗಳ ಕಾಲ ಅತ್ಯುತ್ತಮ ಮನರಂಜನೆ ದೊರೆತ ಖುಷಿಯಲ್ಲಿ ಹೊರಬರುತ್ತಾನೆ, ಇದಂತೂ ಖಂಡಿತ, ಈ ಚಿತ್ರದಲ್ಲಿ ದೊಡ್ಡಣ್ಣ ಹಾಗೂ ಪುಟ್ಟಣ್ಣ ಎಂಬ 2 ಮುಖ್ಯ ಪಾತ್ರಗಳಿದ್ದು, ದೊಡ್ಡಣ್ಣನ ಪಾತ್ರದಲ್ಲಿ ನಿರ್ದೇಶಕ ವಿಜಯಕುಮಾರ್ ಹಾಗೂ ಪುಟ್ಟಣ್ಣನ ಪಾತ್ರದಲ್ಲಿ ನಟ ರಾಜವಂಶಿ ನಟಿಸಿದ್ದಾರೆ, ಇಬ್ಬರೂ ತಂತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಸದ್ಯ ನಮ್ಮ ಸಮಾಜದಲ್ಲಿ ಆನ್‌ಲೈನ್ ಮೂಲಕ ಮಹಿಳೆಯರನ್ನು ಯಾಮಾರಿಸುತ್ತಿರುವ ಗ್ಯಾಂಗನ್ನು ಮಫ್ತಿ ಪೊಲೀಸ್ ಆಗಿ ದೊಡ್ಡಣ್ಣ ಹಾಗೂ ಪುಟ್ಟಣ್ಣ ಹೇಗೆ ಪತ್ತೆ ಹಚ್ಚಿದರು, ಯಾವರೀತಿ ಆನ್ ಲೈನ್ ವಂಚಕರ ಜಾಲವನ್ನು ಪತ್ತೆ ಹಚ್ಚಿದರು ಎಂಬುದನ್ನು ಕುತೂಹಲಕರವಾಗಿ ಮನರಂಜನಾತ್ಮಕವಾಗಿ ನಿರೂಪಿಸಿದ್ದಾರೆ. ದೊಡ್ಡಣ್ಣ ಪುಟ್ಟಣ್ಣ ಚಿತ್ರದಲ್ಲಿ ಕಾಮಿಡಿ ಜತೆಗೆ ಸೆಂಟಿಮೆಂಟ್ ಸೀನ್ ಕೂಡ ಇದ್ದು ಅಂಥಾ ಪ್ರೇಕ್ಷಕರನ್ನ ತಣಿಸುತ್ತದೆ, ಇನ್ನು ಈ ಚಿತ್ರದಲ್ಲಿ 2 ಹಾಡುಗಳಿದ್ದು ಕೇಳಲು ಇಂಪಾಗಿವೆ, ನಮ್ಮ ಹೆಣ್ಣು ಮಕ್ಕಳು ನಮ್ಮ ನಡುವೆಯೇ ಇರುವ ಇಂಥ ನಯವಂಚಕರ ಬಗ್ಗೆ ಜಾಗ್ರತರಾಗಿರಬೇಕು ಎಂಬ ಮೆಸೇಜನ್ನು ದೊಡ್ಡಣ್ಣ ಪುಟ್ಟಣ್ಣ ಚಿತ್ರದಲ್ಲಿ ಹೇಳಲಾಗಿದೆ.



ಕಳೆದ ಮೂರು ದಶಕಗಳಿಂದ ಕನ್ನಡ ಚಿತ್ರರಂಗದಲ್ಲಿ ಪೋಷಕ ನಟ, ಖಳನಟನಾಗಿ 35ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಡಾ.ವಿಜಯಕುಮಾರ್ ಅವರು ಕೆಲಸ ಧಾರಾವಾಹಿಗಳು ಅಲ್ಲದೆ ಕಿರುಚಿತ್ರಗಳಲ್ಲೂ ಸಹ ನಟಿಸಿ ಗುರುತಿಸಿಕೊಂಡಿದ್ದಾರೆ. ನಿರ್ಮಾಪಕ, ನಿರ್ದೇಶಕನಾಗಿ 4 ಚಿತ್ರಗಳನ್ನು ಚಿತ್ರರಂಗಕ್ಕೆ ಕೊಡುಗೆಯಾಗಿ ನೀಡುತ್ತಿದ್ದಾರೆ, ರಕ್ಷಕ, ದೊಡ್ಡಣ್ಣ ಪುಟ್ಟಣ್ಣ ಅಲ್ಲದೆ ರಕ್ಷಕ-2, ಬುಲೆಟ್ ಕಾಳ ಎಂಬ ಚಿತ್ರಗಳನ್ನು ನಿರ್ಮಿಸಿದ್ದಾರೆ, ರಾಮಚಂದ್ರ ಫಿಲಂ ಕಂಪನಿ ಮೂಲಕ ಕವಿತಾ ಕೆ. ಅವರು ದೊಡ್ಡಣ್ಣ ಪುಟ್ಟಣ್ಣ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ,

ಡಾ, ವಿಜಯ ಕುಮಾರ್ ಅವರು ಓದಿದ್ದು ಎಲ್‌ಎಲ್‌ಬಿ ಆದರೂ ಇವರಿಗೆ ನಟನೆಯ ಮೇಲೆ ಮೊದಲಿಂದಲೂ ತುಂಬಾ ಆಸಕ್ತಿ. ಹಾಗಾಗಿ ನಟನೆಯನ್ನು ಹವ್ಯಾಸವಾಗಿ ಬೆಳೆಸಿಕೊಂಡರು, ನಂತರ ಶಿವಣ್ಣ ಅಭಿನಯದ ಓಂ, ಅನುರಾಗ ಸಂಗಮ, ಸಾಧು, ಜೇಸ್, ಕಿಡ್ನಾಪ್ ಕಾವ್ಯ ಸೇರಿದಂತೆ 35ಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ನಟಿಸಿದ್ದಾರೆ, ವಿಎಸ್‌ಕೆ ಸಿನಿ ಕ್ರಿಯೇಶನ್ಸ್ ಮೂಲಕ ವಿತರಕರೂ ಆಗಿದ್ದಾರೆ. ಈ ಚಿತ್ರದ ನಾಯಕಿಯಾಗಿ ರಾಧಿಕಾ ಉಳಿದಂತೆ ರಾಜವಂಶಿ, ಲಯ ಕೋಕಿಲ, ಸ್ನೇಹ ಜಾಧವ್, ಮತ್ತು ಸಿಂಚನ ನಟಿಸಿದ್ದಾರೆ, ಈ ಚಿತ್ರಕ್ಕೆ ಸಾಯಿ ಪ್ರಜ್ವಲ್ ಅವರ ಸಂಗೀತ ನಿರ್ದೇಶನ, ವಿಜಯ್ ಮದಾಳೆ ಅವರ ಸಂಕಲನ ಹಾಗೂ ಛಾಯಾಗ್ರಹಣವಿದೆ,

ಫೆ. 27ರಂದು ಸೂಪರ್ ಹಿಟ್

ಬಿಗ್‌ಬಾಸ್ ವಿಜೇತ ಗಿಲ್ಲಿ ನಟ ನಾಯಕನಾಗಿ ನಟಿಸಿರುವ ಕಾಮಿಡಿ, ಸಸ್ಪೆನ್ಸ್, ಥ್ರಿಲ್ಲರ್ ಜಾನರ್ ಚಿತ್ರ ಸೂಪರ್ ಹಿಟ್. ಇದೇ ತಿಂಗಳ 27ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿರುವ ಈ ಚಿತ್ರದ ಟೀಸರ್ ಈಗಾಗಲೇ ದೊಡ್ಡ ಮಟ್ಟದಲ್ಲಿ ಹಿಟ್ ದಾಖಲಿಸಿದ್ದು, ಚಿತ್ರದ ನಿರೀಕ್ಷೆಯನ್ನು ಇಮ್ಮಡಿಗೊಳಿಸಿದೆ, ಜಿ. ಉಮೇಶ್ ಅವರ ನಿರ್ಮಾಣದಲ್ಲಿ ಮೂಡಿಬಂದಿರುವ ಸೂಪರ್ ಹಿಟ್ ಚಿತ್ರವು ಸಾಕಷ್ಟು ಕಾರಣಗಳಿಂದ ಸುದ್ದಿಯಾಗುತ್ತಿದೆ.





ವಿ. ನಾಗೇಂದ್ರಪ್ರಸಾದ್ ಅವರ ಸಹೋದರ ವಿಜಯಾನಂದ್ ಈ ಹಿಂದೆ ಕೃಷ್ಣ ಟಾಕೀಸ್ ಚಿತ್ರ ನಿರ್ದೇಶಿಸಿದ್ದರು, ಇದೀಗ ಅವರ ನಿರ್ದೇಶನದ ಮತ್ತೊಂದು ಚಿತ್ರವಾಗಿ ಸೂಪರ್ ಹಿಟ್ ಮೂಡಿಬರಲಿದೆ, ಈ ಚಿತ್ರದ ಕಥೆ ಬರೆಯಲು ಶುರು ಮಾಡಿದಾಗಿನಿಂದ ಈವರೆಗೂ ಎಲ್ಲವೂ ಸಲೀಸಾಗಿ ನಡೆಯುತ್ತಾ ಬಂದಿದೆ ಎಂದ ನಿರ್ದೇಶಕ ವಿಜಯಾನಂದ್, ಯಾವುದಕ್ಕೂ ಕೊರತೆಯಾಗದಂತೆ ಚಿತ್ರವನ್ನು ನಿರ್ಮಾಣ ಮಾಡಿರುವ ನಿರ್ಮಾಪಕ ಜಿ. ಉಮೇಶ್ ಅವರ ಸಿನಿಮಾ ಪ್ರೇಮ ನಿಜಕ್ಕೂ ದೊಡ್ಡದು ಎಂದಿದ್ದಾರೆ, ತನ್ನ ಸಿನಿಮಾ ಮೂಡಿಬಂದಿರುವ ರೀತಿ ಮತ್ತು ಅದರ ಕಂಟೆಂಟ್ ಬಗ್ಗೆ ನನಗೆ ತುಂಬಾ ವಿಶ್ವಾಸವಿದೆ ಎಂದಿರುವ ವಿಜಯಾನಂದ್, ಈ ಚಿತ್ರ ಸೂಪರ್ ಹಿಟ್ಟಾಗೋದು ಗ್ಯಾರಂಟಿ ಎಂಬ ಭರವಸೆ ವ್ಯಕ್ತಪಡಿಸಿದ್ದಾರೆ. ಚಿತ್ರವನ್ನು ನಿರ್ಮಿಸಿರುವ ಜಿ. ಉಮೇಶ್ ಅವರು ತಮ್ಮ ಚುಟುಕಾದ ಮಾತುಗಳಲ್ಲೇ ಸಿನಿಮಾ ಪ್ರೇಮ, ಸೂಪರ್‌ಹಿಟ್ ಚಿತ್ರದ ಬಗ್ಗೆ ಭರವಸೆ ವ್ಯಕ್ತಪಡಿಸಿದರು,

ಸೂಪರ್ ಹಿಟ್ ಚಿತ್ರಕ್ಕೆ ಸಾಹಿತ್ಯರಚಿಸಿ, ಸಂಗೀತ ನಿರ್ದೇಶನದ ಜವಾಬ್ದಾರಿ ಹೊತ್ತಿರುವ ಜತೆಗೆ ಒಂದು ವಿಶೇಷ ಪಾತ್ರದಲ್ಲಿಯೂ ನಟಿಸಿರುವ ಕವಿರತ್ನ ಡಾ.ವಿ ನಾಗೇಂದ್ರ ಪ್ರಸಾದ್ ಅವರು ಸೂಪರ್‌ಹಿಟ್ ಚಿತ್ರ ಮೂಡಿಬಂದಿರೋ ರೀತಿಯ ಬಗ್ಗೆ ಮೆಚ್ಚುಗೆ ಸೂಚಿಸುತ್ತ, ಗಿಲ್ಲಿ ನಟನ ಯಶಸ್ಸಿನ ಅಲೆ ಸೂಪರ್ ಹಿಟ್ ಚಿತ್ರಕ್ಕೆ ವರವಾಗಿದೆ ಎಂದು ಹೇಳಿದರು.

ಚಿತ್ರದ ನಾಯಕ ಗಿಲ್ಲಿ ನಟ ಮಾತನಾಡುತ್ತ, ಸೂಪರ್ ಹಿಟ್ ಚಿತ್ರದ ಮುಖ್ಯ ಪಾತ್ರದಲ್ಲಿ ನಟಿಸಲು ಅವಕಾಶ ಕೊಟ್ಟ ನಿರ್ದೇಶಕರಿಗೆ ಕೃತಜ್ಞತೆ ಸಲ್ಲಿಸಿದರು, ಈ ಚಿನಿಮಾ ಚಿತ್ರೀಕರಣದಲ್ಲಿ ಭಾಗವಹಿಸಿದ ರಸಾನುಭವಗಳನ್ನು ಹಂಚಿಕೊಂಡರು.

ವಿಜಯಲಕ್ಷ್ಮಿ ಎಂಟರ್‌ಪ್ರೈಸಸ್ ಬ್ಯಾನರಿನಡಿಯಲ್ಲಿ ಜಿ. ಉಮೇಶ್ ಅವರು ಈ ಚಿತ್ರವನ್ನು ನಿರ್ಮಾಣ ಅದ್ದೂರಿಯಾಗಿ ಮಾಡಿದ್ದಾರೆ. ಗೌರವ್ ಶೆಟ್ಟಿ ಮತ್ತು ಗಿಲ್ಲಿ ನಟ ಚಿತ್ರದ ಇಬ್ಬರು ನಾಯಕರಾಗಿ ನಟಿಸಿದ್ದಾರೆ. ಶ್ವೇತಾ ನಾಯಕಿಯಾಗಿ ಜೊತೆಯಾಗಿದ್ದಾರೆ. ನಾಗೇಂದ್ರಪ್ರಸಾದ್ ಅವರು ಪ್ರಮುಖ ಪಾತ್ರವೊಂದಕ್ಕೆ ಜೀವ ತುಂಬಿದ್ದಾರೆ. ಇನ್ನುಳಿದಂತೆ, ಆರ್.ಡಿ. ನಾಗಾರ್ಜುನ ಅವರ ಛಾಯಾಗ್ರಹಣ, ಶ್ರೀಕಾಂತ್ ಅವರ ಸಂಕಲನ, ವಿ. ನಾಗೇಂದ್ರ ಪ್ರಸಾದ್ ಅವರ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಡ್ರ್ಯಾಗನ್ ಮಂಜು, ಸಾಧು ಕೋಕಿಲ, ಸೀನು ಭಾಯ್, ನಾಗವರ್ಧನ್, ಪ್ರಮೋದ್ ಶೆಟ್ಟಿ, ಜೀಜಿ, ಗಿರಿ, ಟೆನಿಸ್ ಕೃಷ್ಣ, ಕರಿಸುಬ್ಬು, ವಂಶಿ, ಮಂಜಣ್ಣ, ಬಿ.ಎನ್. ಮಂಗಳ, ಮಂಗಳೂರು ಮೀನನಾಥ ಮುಂತಾದವರ ತಾರಾ ಗಣ ಸೂಪರ್ ಹಿಟ್ ಚಿತ್ರ ಕ್ಕಿದೆ. ಫೆಬ್ರವರಿ 27ರಂದು ರಾಜ್ಯಾದ್ಯಂತ ಇನ್ನೂರಕ್ಕೂ ಹೆಚ್ಚು ಚಿತ್ರಮಂದಿಗಳಲ್ಲಿ ಸೂಪರ್ ಹಿಟ್ ಚಿತ್ರ ತೆರೆಗೆ ಬರಲಿದೆ.



ತರುಣ್ ಚೆನ್ನಾರಿ ಮುತ್ತ ಮಯೂರಿ ಹೊಸ ಸಾಹಸ



ತರುಣ್ ಸುಧೀರ್ ನಿರ್ಮಾಣದ ರಾಕ್ಷಸ ವೆಬ್ ಸಿರೀಸ್‌ನಲ್ಲಿ ವಿಜಯ ರಾಘವೇಂದ್ರ, ಮಯೂರಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ, ಅಯ್ಯನ ಮನೆ, ಮಾರಿಗಲ್ಲು, ಶೋಧ ಸೇರಿದಂತೆ ಹಲವು ವೆಬ್ ಸರಣಿಗಳನ್ನು ನೀಡಿರುವ ಜೀ5 ಇದೀಗ ರಾಕ್ಷಸ ಎಂಬ ಮತ್ತೊಂದು ವೆಬ್‌ಸಿರೀಸ್ ಆರಂಭಿಸಲಿದೆ. ವಿಜಯ್ ರಾಘವೇಂದ್ರ, ಇದೇ ಮೊದಲಬಾರಿಗೆ ವೆಬ್ ಸರಣಿಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಮಲಪ್ರಭಾ ನದಿ ತೀರದ ನಿಗೂಢ ಮೊಸಳೆ ದಾಳಿಯ ಸುತ್ತ ನಡೆಯುವ ಕುತೂಹಲಕರ ಕಥಾನಕ ಇದಾಗಿದೆ. ಇತ್ತೀಚಿಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಜೀ5 ಬ್ಯುಸಿನೆಸ್ ಹೆಡ್ ದೀಪಕ್ ತಿಮ್ಮಯ್ಯ ಮಾತನಾಡಿ, ಈಗಾಗಲೇ ಕನ್ನಡದ ಹಲವಾರು ನಿರ್ಮಾಣ ಸಂಸ್ಥೆಗಳು ನಮ್ಮ ಕೈಜೋಡಿಸಿವೆ. ಈಗ ತರುಣ್ ಸುಧೀರ್ ಸಾಥ್ ನೀಡಿದ್ದಾರೆ. ರಾಕ್ಷಸ ಉತ್ತರ ಕರ್ನಾಟಕ ಭಾಗದ ಕಥೆ. ಕಲಾವಿದರು ಹಾಗೂ ನಿರ್ಮಾಪಕರು ಕೂಡ ಉತ್ತರ ಕರ್ನಾಟಕದವರೇ ಆಗಿದ್ದಾರೆ. 22ರಿಂದ 25 ನಿಮಿಷದ ಏಳು ಎಪಿಸೋಡ್‌ಗಳು ಈ ಸೀರೀಸ್‌ನಲ್ಲಿವೆ ಎಂದರು. ನಿರ್ಮಾಪಕ ತರುಣ್ ಸುಧೀರ್ ಮಾತನಾಡಿ, ವೆಬ್‌ಸಿರೀಸ್ ಅಂತ ಮಾಡಿದಾಗ ಒಂದು ಓಟಿಟಿ ಸಪೋರ್ಟ್ ಬೇಕು. ಒಂದು ಪ್ಲಾಟ್‌ಫಾರ್ಮ್ ಸಪೋರ್ಟ್ ಮಾಡಿದಾಗ ಇದನ್ನೆಲ್ಲ ಮಾಡಲು ಸಾಧ್ಯ, ಈಗ ಆ ಕೆಲಸವನ್ನು ಜೀ5 ಮಾಡುತ್ತಿದೆ. ಸುಹಾನ್ ಹೇಳಿದ ಸ್ಟೋರಿಲೈನ್ ನನಗಿಷ್ಟವಾಯ್ತು, ಒಂದೊಳ್ಳೆ ತಂಡ ಸೇರಿ ಈ ಸಾಹಸಕ್ಕೆ ಕೈ ಹಾಕಿದೆ, 89 ಪಾತ್ರಗಳು ಇದರಲ್ಲಿವೆ, ಅವರೆಲ್ಲರೂ ಉತ್ತರ ಕರ್ನಾಟಕ ಭಾಗದವರು ಎನ್ನುವುದು ಹೆಮ್ಮೆಯ ವಿಷಯ ಎಂದರು. ರಾಕ್ಷಸ, ಉತ್ತರ ಕರ್ನಾಟಕದ ಗ್ರಾಮೀಣ ಭಾಗದ ಮೊದಲ ವೆಬ್‌ಸರಣಿ. ಸೈಕಲಾಜಿಕಲ್ ಕ್ರೈಂ ಥ್ರಿಲ್ಲರ್ ಜಾನರ್‌ನ ಈ ಸರಣಿಯಲ್ಲಿ ವಿಜಯ ರಾಘವೇಂದ್ರ, ಮಯೂರಿ, ಅವಿನಾಶ್, ಮಾಳವಿಕ, ಅಪ್ಪಣ್ಣ ಮತ್ತು ಅಭಿಜಿತ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಸುಹಾನ್ ಪ್ರಸಾದ್ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಸದ್ಯದಲ್ಲೇ ಹೈ ವೋಲ್ಟೇಜ್ ರಕ್ಷಕ



ಈ ಹಿಂದೆ ಲಿಪ್‌ಸ್ಟಿಕ್ ಮರ್ಡರ್, ಬ್ಲಡಿ ಬಾಬು ಸೇರಿದಂತೆ ಹಲವಾರು ಚಿತ್ರಗಳನ್ನು ನಿರ್ದೇಶಿಸಿದ ರಾಜೇಶ್ ಮೂರ್ತಿ ಅವರೀಗ ಸೈಂಟಿಫಿಕ್ ಆಕ್ಷನ್ ಥ್ರಿಲ್ಲರ್ ಚಿತ್ರವನ್ನು ನಿರ್ದೇಶಿಸಿ ಸದ್ಯದಲ್ಲೇ ತೆರೆಗೆ ತರುತ್ತಿದ್ದಾರೆ. ಆ ಚಿತ್ರದ ಹೆಸರು ಹೈ ವೋಲ್ಟೇಜ್ ರಕ್ಷಕ. ನಿರ್ದೇಶಕರ ಪುತ್ರ ಯಶಸ್ವಾ ಮೂರ್ತಿ ಈ ಚಿತ್ರದನಾಯಕ. ಮನು ಪಾಂಡ್ಯ ಹಾಗೂ ನೇವಿ ಮಂಜು ಚಿತ್ರದ ನಿರ್ಮಾಪಕರು.

ಕನ್ನಡ ಚಿತ್ರರಂಗದಲ್ಲೇ ಹೊಸದು ಎನ್ನಬಹುದಾದ ಬಾಡಿ ಎಕ್ಸ್‌ಚೇಂಜ್ ಕಾನ್ಸೆಪ್ಟ್ ಆಧಾರದ ಮೇಲೆ ತಯಾರಾದ ಚಿತ್ರವಿದು. ವರ್ಲ್ಡ್‌ವಾರ್ ಸಂದರ್ಭದಲ್ಲಿ ಇಂಥ ಪ್ರಯೋಗ ಮಾಡುತ್ತಿದ್ದರು. ನಾಯಕ ಫಾರೆನ್ಸಿಕ್ ವಿಭಾಗದಲ್ಲಿ ಕೆಲಸ ಮಾಡುವ ಟೆಕ್ನೀಷಿಯನ್. ಆತ ಈ ಬಾಡಿ ಎಕ್ಸ್‌ಚೇಂಜ್ ತಂತ್ರ ಬಳಸಿಕೊಂಡು ದೊಡ್ಡಮಟ್ಟದಲ್ಲಿ ಸ್ಕ್ಯಾಮ್ ಮಾಡುತ್ತಿದ್ದ ಗ್ಯಾಂಗ್‌ವೊಂದನ್ನು ಹೇಗೆ ಪತ್ತೆ ಹಚ್ಚುತ್ತಾನೆ ಎಂಬುದೇ ಚಿತ್ರದ ಕಾನ್ಸೆಪ್ಟ್, ಬೆಂಗಳೂರು, ಕೆಜಿಎಫ್ ಸುತ್ತಮುತ್ತ ಹೈವೋಲ್ಟೇಜ್ ರಕ್ಷಕ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ಈ ಚಿತ್ರದ 3 ಹಾಡುಗಳಿಗೆ ಸತೀಶ್ ಕುಮಾರ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಿನೋದ್ ಅವರ ಛಾಯಾಗ್ರಹಣ, ಗಿರೀಶ್ ಅವರ ಸಾಹಸ ಸಂಯೋಜನೆ ಚಿತ್ರಕ್ಕಿದೆ. ರಾಜೇಶ್‌ಮೂರ್ತಿ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ನಾಯಕಿಯಾಗಿ ಹರ್ಷಿತಾ ಗೌರಿ ಉಳಿದಂತೆ ವಿನೋದ್ ಕುಮಾರನ್, ರಾಜೇಶ್ ಧರ್ಮ ನಟಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26